CC-O. In Public Domain. Digitized by eGangotri

ಆದಿ ಶಂಕರಾಚಾರ್ಯ ಕೃತ

ಅಪರೋಕ್ಷಾನುಭೂತಿ

ಭಾಗ ೧

ಸ್ವಾಮಿ ಚಿದ್ರೂಪಾನಂದ ಸರಸ್ವತಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-0. In Public Domain. Digitized by eGangotri

ಆದಿ ಶಂಕರಾಚಾರ್ಯ ಕೃತ

ಅಪರೋಕ್ಷಾನುಭೂತಿ

ಭಾಗ ೧

ಸ್ವಾಮಿ ಚಿದ್ರೂಪಾನಂದ ಸರಸ್ವತಿ

ಶ್ರೀ ಅಕ್ಷಯ ಟ್ರಸ್ಟ್
೮೦, ಅಧ್ಯಾಪಕ ನಗರ, ಹುಬ್ಬಳ್ಳಿ ೫೮೦ ೦೩೨

Sri Vidyabharathi Book Centre, Sringeri

ಮೊದಲನೆ ಮುದ್ರಣ : ೧೯೬೯
CC-O. In Public Domain. Digitized by eGangotri

ಮುದ್ರಕರು :
Sri Vidyabharathi Book Centre, Sringeri
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು 14

CC-O. In Public Domain. Digitized by eGangotri

ಪ್ರಕಾಶಕರ ನುಡಿ

ಶೃಂಗೇರಿಯಲ್ಲಿ ಜರುಗಿದ ಆರನೇ ಅಖಿಲ ಕರ್ನಾಟಕ ಅಧ್ಯಾತ್ಮ ಶಿಬಿರದಲ್ಲಿ ಸ್ವಾಮಿ ಶ್ರೀ ಚಿದ್ರೂಪಾನಂದ ಸರಸ್ವತಿಯವರು 'ಅಪರೋಕ್ಷಾನುಭೂತಿ' ಪ್ರಕರಣ ಗ್ರಂಥದ ಮೇಲೆ ಇತ್ತ ವ್ಯಾಖ್ಯಾನಗಳನ್ನೇ ಪುಸ್ತಕರೂಪದಲ್ಲಿ ಈಗ ತಮ್ಮ ಕೈಯಲ್ಲಿ ಇರಿಸಲು, ಸಂತೋಷವೆನ್ನಿಸುತ್ತಿದೆ.

ಶ್ರೀ ಶಂಕರಾಚಾರ್ಯರ 'ಅಪರೋಕ್ಷಾನುಭೂತಿ'ಯು ಸಾಧಕರಿಗೆ ಮಹದುಪ ಕಾರಿಯೂ, ಜಿಜ್ಞಾಸುಗಳಿಗೆ ವೈಜ್ಞಾನಿಕ ಆಹಾರವೂ, ಸಿದ್ಧರಿಗೆ ಸರ್ವ ವೇದಾಂತ ಸಿದ್ಧಾಂತ ರೂಪವೂ ಆಗಿದ್ದು ಅದನ್ನು ಶಿಬಿರದ ಐಕ್ಯ ವಿಷಯವನ್ನಾಗಿರಿಸಿದ್ದುದು ಒಂದು ವೈಶಿಷ್ಟ್ಯವೇ ಸರಿ.

ಎಲೆಯು ಮರೆಯು ಜೋಡು ಹೂವುಗಳಾದ ಬೆಂಗಳೂರಿನ ಶ್ರೀ ಬಿ. ವಿ. ಸತ್ಯ ನಾರಾಯಣ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಮಂಗಳಗೌರಮ್ಮ ಇವರ ಪರಿ ಶ್ರಮದ ದ್ಯೋತಕವೇ ಈ ಪುಸ್ತಕ. ಪ್ರವಚನಗಳನ್ನು ಗ್ರಂಥರೂಪಕ್ಕೆ ಪರಿವರ್ತಿಸಿದ ಶ್ರೇಯಸ್ಸು ಈ ದಂಪತಿಗಳಿಗೇ ಸೇರುತ್ತದೆ.

'ಆರ್ಷ ಸಂದೇಶ' ಮಾಸಪತ್ರಿಕೆಯ ಸಹಸಂಪಾದಕರಾದ ಮೇಜರ ಸುನಂದಾ ದೇಶಪಾಂಡೆಯವರು ಮುಂದೆ ಬಂದು ಈ ಭಾಷ್ಯ ಗ್ರಂಥವು ಪ್ರಕಾಶವಾಗುವದಕ್ಕೆ ಬೇಕಾದ ಎಲ್ಲ ವೆಚ್ಚವನ್ನು ವಹಿಸಿಕೊಂಡರು.

ಅಲ್ಪ ವೇಳೆಯಲ್ಲಿಯೇ ಅಂದವಾಗಿ ಈ ಪುಸ್ತಕವನ್ನು ಮುದ್ರಿಸಿದ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಮೈಸೂರು ಇವರೂ ಕೂಡಾ ಅಭಿನಂದನಾರ್ಹರು.

ಸ್ವಾಮಿ ಶ್ರೀ ಚಿದ್ರೂಪಾನಂದ ಸರಸ್ವತಿಯವರ 'ಅಪರೋಕ್ಷಾನುಭೂತಿ'ಯ ಮೇಲಿನ ವ್ಯಾಖ್ಯಾನಗಳು ಭಾಗಭಾಗವಾಗಿ ಈ ಮೊದಲೇ 'ಆರ್ಷ ಸಂದೇಶ'ದಲ್ಲಿ ಪ್ರಕಟವಾಗಿದ್ದವು. ಅವುಗಳನ್ನು ಒಂದುಗೂಡಿಸಿ, ಈಗ ಪುಸ್ತಕರೂಪದಲ್ಲಿ ಹೊರ ತರಲಾಗಿದೆ. ಸದ್ಯ ಪ್ರಕಟವಾದ ಪುಸ್ತಕ ಪ್ರಥಮಭಾಗವಾಗಿದ್ದು ದ್ವಿತೀಯಭಾಗವು ಬೇಗನೆ ಪ್ರಕಟಗೊಳ್ಳಲಿದೆ.

ಸ್ವಾಮಿ ಶ್ರೀ ಚಿದ್ರೂಪಾನಂದ ಸರಸ್ವತಿಯವರ ವ್ಯಾಖ್ಯಾನಗಳು ಗ್ರಂಥರೂಪ ದಲ್ಲಿ ಪ್ರಥಮವಾಗಿ ಹೊರಬರಲು, ಪ್ರತ್ಯಕ್ಷವಾಗಿಯೂ, ಅಪ್ರತ್ಯಕ್ಷವಾಗಿಯೂ ಸಹಕರಿ ಸಿದ ಸರ್ವರಿಗೂ ಹಾರ್ದಿಕ ಧನ್ಯವಾದಗಳು.

ಅಧ್ಯಾಪಕನಗರ—ಹುಬ್ಬಳ್ಳಿ

12-4-1989

ಶ್ರೀ ಅಕ್ಷಯ ಟ್ರಸ್ಟ
ಆರ್ಷವಿದ್ಯಾ ಆಶ್ರಮ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪೀಠಿಕೆ

ಶ್ರೀ ಶಂಕರಾಚಾರ್ಯರ ಅಮೋಘವಾದ ಉಪದೇಶವನ್ನು ಸಂತತವಾಗಿ ಪ್ರತಿಪಾದಿಸುವಂತಹ ಪ್ರಕರಣ ಗ್ರಂಥಗಳಲ್ಲಿ "ಅಪರೋಕ್ಷಾನುಭೂತಿ"ಯು ಒಂದಾಗಿರುತ್ತದೆ. ಈ ಗ್ರಂಥದಲ್ಲಿ ೧೪೪ ಶ್ಲೋಕಗಳಿದ್ದು, ಅನುಬಂಧ ಚತುಷ್ಟಯದಿಂದ ಪ್ರಾರಂಭಿಸಿ ನಂತರ ಸಾಧನ ಸಂಪತ್ತನ್ನು ವಿವರಿಸಿದೆ. ವಿಚಾರದ ಆವಶ್ಯಕತೆ ಹಾಗೂ ಪ್ರಾಮುಖ್ಯತೆಯನ್ನು ತಿಳಿಸಿದ ನಂತರ ವಿಚಾರದ ಕ್ರಮವನ್ನು ತಿಳಿಸುತ್ತಾ ಅಜ್ಞಾನವೆಂದರೇನು ? ಜ್ಞಾನ ಸ್ವರೂಪವೆಂದರೇನು ? ಎಂಬುದನ್ನು ಶ್ರುತಿ ಆಧಾರಿತ ವಾಕ್ಯಗಳಿಂದ ವಿವರಿಸಿದ್ದಾರೆ. ಬ್ರಹ್ಮಾತ್ಮೈಕ್ಯತ್ವದ ಜ್ಞಾನವನ್ನು ಶ್ರುತಿ, ಯುಕ್ತಿ ಹಾಗೂ ಅವಸ್ಥಾತ್ರಯ ಅನುಭವದ ಆಧಾರದ ಮೇಲೆ ಪ್ರತಿಪಾದಿಸಿದ್ದಾರೆ. ಈ ಗ್ರಂಥದಲ್ಲಿ ಅಜ್ಞಾನವನ್ನು ಸ್ಪಷ್ಟವಾಗಿ ತೋರಿಸಿಕೊಡಲು ಶ್ಲೋಕ ೭೦ ರಿಂದ ೮೭ರವರೆಗೆ ಹೇರಳವಾಗಿ ದೃಷ್ಟಾಂತಗಳನ್ನು ಕೊಟ್ಟಿರುತ್ತಾರೆ. ಜ್ಞಾನಿಗೆ ಪ್ರಾರಬ್ಧವಿದೆ ಎಂಬ ವಾದವನ್ನು ನಿರಾಕರಿಸಿದ್ದಾರೆ. ಇಷ್ಟೇ ಅಲ್ಲ. ನಿದಿಧ್ಯಾಸನವೆಂದರೇನು ? ಅದರಲ್ಲಿ ನಿಲ್ಲುವುದು ಹೇಗೆ ? ಈ ಸಾಧನದಲ್ಲಿ ಸಾಧಕನಿಗೆ ಒದಗಿಬರಬಹುದಾದ ವಿಘ್ನಗಳು ಯಾವುವು ? ಎಂಬುದನ್ನು ತಿಳಿಸುವುದರ ಮೂಲಕ ಈ ಗ್ರಂಥವು ಮುಮುಕ್ಷುವಿಗೆ ಅತ್ಯಂತ ಉಪಯುಕ್ತವಾಗಿದೆ. ಹೀಗೆ ಶ್ರವಣ, ಮನನ, ನಿದಿಧ್ಯಾಸನಗಳೇ ಬ್ರಹ್ಮಾತ್ಮೈಕ್ಯ ಜ್ಞಾನ ಪಡೆಯುವುದಕ್ಕೆ ಏಕಮಾತ್ರ ಸಾಧನವೆಂದು ತಿಳಿಸಿ ಜ್ಞಾನದಿಂದಲೇ ನಿತ್ಯಾನಂದ ಎಂದು ಉಪಸಂಹಾರ ಮಾಡಿರುತ್ತಾರೆ.

ಪ್ರಮಾ ಜನಕಂ ಪ್ರಮಾಣಂ—ಪ್ರಮಾ ಎಂದರೆ ಜ್ಞಾನ. ಜ್ಞಾನವನ್ನು ಉತ್ಪತ್ತಿ ಮಾಡುವುದಕ್ಕೆ ಯಾವುದು ಸಾಧನವೋ ಅದೇ ಪ್ರಮಾಣ. ಆತ್ಮಜ್ಞಾನಕ್ಕೆ ಗುರುಪರಂಪರೆಯೇ ಪ್ರಮಾಣ. ಗುರುವೂ ಇದ್ದು, ಗುರು ಪರಂಪರೆ ಅಥವಾ ಸಂಪ್ರದಾಯಬದ್ಧ ಉಪದೇಶವೆಂಬ ಪ್ರಮಾಣ ಇಲ್ಲದಿದ್ದರೆ ಪ್ರಮಾ ಅಥವಾ ಆತ್ಮಜ್ಞಾನವು ಸಾಧ್ಯವಿಲ್ಲ. ನಾಲ್ಕು ಪುರುಷಾರ್ಥಗಳಲ್ಲಿ ಅರ್ಥ ಕಾಮಗಳು ಎಲ್ಲಾ ಭೂತಗಳಿಗೂ, ಗಿಡಗಳಿಗೂ ಇವೆ. ಅವುಗಳಿಗೂ ಹಸಿವು, ಬಾಯಾರಿಕೆ, ಇಚ್ಛೆ ಉಂಟು. ಧರ್ಮ ಮೋಕ್ಷಗಳಾದರೋ ಮಾನವನಿಗೆ ಮಾತ್ರ ಸೀಮಿತವಾಗಿವೆ. ಇತರ ಪ್ರಾಣಿಗಳಿಗೆ ಪುರುಷ ಸ್ವಾತಂತ್ರ್ಯವಿಲ್ಲ. ಅಂದರೆ ಕರ್ಮದಲ್ಲಿ ಸ್ವಾತಂತ್ರ್ಯವಿಲ್ಲ. ಮಾನವನಿಗಾದರೋ ದೈಹಿಕ, ವಾಚಿಕ ಮತ್ತು ಮಾನಸಿಕ

ಆರ್ಷ ವಿದ್ಯಾಪೀಠದ ಸ್ವಾಮಿ ಶ್ರೀ ಚಿದ್ರೂಪಾನಂದ ಸರಸ್ವತಿಯವರ ನೇತೃತ್ವದಲ್ಲಿ ಆರನೆಯ ಆಧ್ಯಾತ್ಮಿಕ ಶಿಬಿರವು ಶೃಂಗೇರಿಯಲ್ಲಿ ೧೭-೪-೮೭ರಿಂದ ೨೫-೪-೮೭ರವರೆಗೆ ಜಯಪ್ರದವಾಗಿ ಸಾಗಿತು. ಆಗ ಸ್ವಾಮೀಜಿಯವರು ಮಾಡಿದ ಪ್ರವಚನಗಳ ಸಂಗ್ರಹ ಈ ಗ್ರಂಥ.

Sri Vidyabharathi Book Centre, Sringeri

—ಪ್ರಕಾಶಕರು

CC-O. In Public Domain. Digitized by eGangotri

ಕರ್ಮಗಳಲ್ಲಿ ವಿಶೇಷ ಸ್ವಾತಂತ್ರ್ಯ ಉಂಟು. ಆದ್ದರಿಂದಲೇ ನಿಷಿದ್ಧ ಹಾಗೂ ವಿಹಿತ ಕರ್ಮಗಳ ಉಪದೇಶವಾದ ಧರ್ಮವು ಮಾನವನನ್ನು ಮಾತ್ರ ಕುರಿತದ್ದಾಗಿದೆ. ಧರ್ಮವನ್ನು ಅನುಸರಿಸಿ, ಫಲ ಇಚ್ಛಿಸಿ, ಮಾನವನು ಅನೇಕಾನೇಕ ಕರ್ಮಗಳನ್ನು ಮಾಡುತ್ತಾನೆ. ಆಗ ಇಷ್ಟ ಹಾಗೂ ಅನಿಷ್ಟ ಫಲಗಳು ಸಿಗುತ್ತವೆ. ಹೀಗೆ ಕರ್ಮಫಲಗಳನ್ನು ಗುರುತಿಸಿ, ವಿಚಾರ ಮಾಡಲು ಶಕ್ತಿಯುಳ್ಳ ಮಾನವನಿಗೆ ಮಾತ್ರ ಅನೇಕಾನೇಕ ಸಮಸ್ಯೆಗಳು ಕಂಡುಬರುತ್ತವೆ. ಈ ಸಮಸ್ಯೆಗಳು ನಿಜವಾಗಿ ಇಲ್ಲದೆ ಹೋದರೂ ತನ್ನದೇ ಎಂದುಕೊಂಡು ತಳಮಳಗೊಳ್ಳುತ್ತಾನೆ. ಸ್ವಲ್ಪ ವಿಚಾರ ಮಾಡಿದಾಗ ತಿಳಿದು ಬರುವುದೇನೆಂದರೆ, ಈ ಬಾಹ್ಯದಲ್ಲಿ ಕಾಣುವ ಸಮಸ್ಯೆಗಳು ಸಮಸ್ಯೆಗಳೇ ಅಲ್ಲ. ಅವುಗಳಿಗೆಲ್ಲಾ ಮೂಲವಾದ ಒಂದೇ ಒಂದು ಸಮಸ್ಯೆಯೇ ನಿಜವಾದದ್ದು. ಅದೇನೆಂದರೆ–"ನನಗೆ ಸುಖ-ಶಾಂತಿ ಬೇಕು" ಎಂಬುದು. ಈ ಸುಖ-ಶಾಂತಿಗಳನ್ನು ಪಡೆಯುವುದಕ್ಕಾಗಿ ಮಾನವನು ದೈಹಿಕ, ವೈದಿಕ ಹಾಗೂ ಲೌಕಿಕ ಕರ್ಮಗಳನ್ನು ಮಾಡುತ್ತಾನೆ. ಆದರೆ ಈ ಕರ್ಮಗಳು ಅವನಿಗೆ ಬೇಕಾದ ಸುಖ ಶಾಂತಿಯನ್ನು ಕೊಡಲಾರವು. ಏಕೆಂದರೆ ಕರ್ಮ ಇದ್ದ ಕಡೆ ಸ್ಪರ್ಧೆ, ಸ್ಪರ್ಧೆ ಇದ್ದ ಕಡೆ ರಾಗ–ದ್ವೇಷ, ರಾಗ–ದ್ವೇಷ ಇದ್ದ ಕಡೆ ಶಾಂತಿ ಇಲ್ಲ. ಕರ್ಮದಿಂದ ಸಿಕ್ಕಿದ ಹಾಗೆ ತೋರುವ ಶಾಂತಿಯು ತಾತ್ಕಾಲಿಕ. ಆದ್ದರಿಂದ ಕರ್ಮವು ಶಾಶ್ವತ ಶಾಂತಿ ಅಥವಾ ಮೋಕ್ಷವನ್ನು ಕೊಡಲಾರದು. ಶಾಸ್ತ್ರವು ಜ್ಞಾನದಿಂದ ಮಾತ್ರವೇ ಮೋಕ್ಷ ಎಂದು ಹೇಳುವುದನ್ನು ಸ್ವಲ್ಪ ವಿಚಾರ ಮಾಡೋಣ. ಇಲ್ಲಿ ಜ್ಞಾನ ಎಂದರೆ ಆತ್ಮ ಸ್ವರೂಪದ ಜ್ಞಾನ. 'ನಾನು ಯಾರು' ಎಂಬ ಎಚ್ಚರದ ಅರಿವಿಲ್ಲದಿರುವುದೇ ಬಂಧನಕ್ಕೆ ಕಾರಣವಾಗಿದೆ. ಪ್ರತ್ಯಕ್ಷಾದಿ ಪ್ರಮಾಣಗಳ ಮೂಲಕ ಜ್ಞಾತೃ ಅಥವಾ ಪ್ರಮಾತೃವಾದವನು ತನಗಿಂತ ಬೇರೆಯಾದ ಜ್ಞೇಯದ ಜ್ಞಾನವನ್ನು ಮಾತ್ರ ಪಡೆಯಬಲ್ಲನು. ಆದ್ದರಿಂದ ಈ ಪ್ರಮಾಣಗಳು ಜ್ಞಾತೃವಿನ ಸ್ವರೂಪವನ್ನು ತಿಳಿಸಲಾರವು. ನನ್ನ ಸ್ವರೂಪವನ್ನು ತಿಳಿಸಲು ಶಬ್ದ ಅಥವಾ ಶಾಸ್ತ್ರ ಒಂದೇ ಪ್ರಮಾಣ. ಗೂಢಾರ್ಥಗಳನ್ನು ಒಳಗೊಂಡ ಔಪನಿಷತ್ ಶಬ್ದಗಳನ್ನು ಸಂಪ್ರದಾಯಬದ್ಧವಾಗಿ ಗುರು–ಶಿಷ್ಯ ಪರಂಪರೆಯ ಮೂಲಕ ಉಪದೇಶಿಸಿದ್ದೇ ಆದರೆ ಈ ಉಪದೇಶವು ಆತ್ಮಾನುಭಾವದಲ್ಲಿ ನಿಲ್ಲಿಸುತ್ತದೆ. ಇದೇ ಮೋಕ್ಷ.

'ಅಪರೋಕ್ಷಾನುಭೂತಿ' ಏನೆಂಬುದನ್ನು ಸ್ವಲ್ಪ ವಿಚಾರ ಮಾಡೋಣ. ಕರ್ಮ ಆಯಿತೆಂದರೆ ಫಲವು ಸಿಗಲೇಬೇಕು. ಈ ಫಲಗಳು ಎರಡು ರೀತಿಯಾಗಿವೆ. (1) ಪ್ರತ್ಯಕ್ಷಫಲ (2) ಪರೋಕ್ಷಫಲ.

(1) ಪ್ರತ್ಯಕ್ಷ ಫಲವು ಕರ್ಮ ಮುಗಿದ ತಕ್ಷಣ ನಮ್ಮ ಅನುಭವಕ್ಕೆ ಬರುತ್ತದೆ. ಇದಕ್ಕೆ ಬೇರೆಯವರ ಹೇಳಿಕೆ ಬೇಕಿಲ್ಲ. ಹೇಳಿಕೆಯನ್ನು ನಂಬಬೇಕಾದದ್ದೂ ಇಲ್ಲ. ಉದಾಹರಣೆಗೆ—ನೀರು ಕುಡಿದೆ—ಬಾಯಾರಿಕೆ ತೀರಿತು. ಮುಳ್ಳು ಚುಚ್ಚಿತು—ನೋವಾಯಿತು.

(2) ಈಗ ಮಾಡಿದ ಕರ್ಮವು ಅನೇಕ ವರ್ಷಗಳ ನಂತರ ಫಲವನ್ನು ಕೊಡುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾದರೆ ಅದನ್ನು ಪರೋಕ್ಷ ಫಲ ಎನ್ನುತ್ತೇವೆ. ಉದಾಹರಣೆಗೆ – ತೆಂಗಿನ ಸಸಿ ನೆಟ್ಟದ್ದು ಈಗ, ಫಲ ಸಿಗುವುದು 12 ವರ್ಷಗಳ ಮೇಲೆ ಎಂದು ಎಣಿಸುವುದು ಪರೋಕ್ಷ ಫಲ. ಲೋಕಾದಿಗಳನ್ನು ಪಡೆಯಲು ಮಾಡಿದ ಕರ್ಮಗಳು ದೇಹಾಂತರದಲ್ಲಿ–ಜನ್ಮಾಂತರದಲ್ಲಿ ಫಲವನ್ನು ಕೊಡುತ್ತವೆ ಎಂದು ಬೇರೆಯವರ ಹೇಳಿಕೆಯನ್ನು ಕೇಳಿ ನಂಬಬೇಕಾಗಿದೆಯೇ ಹೊರತು ಅದು ಈ ದೇಹದಲ್ಲಿ ಸಿಗುವುದಿಲ್ಲವಾದ್ದರಿಂದ ಎಂದೆಂದಿಗೂ ಪರೋಕ್ಷ ಫಲಗಳೇ ಆಗಿರುತ್ತವೆ. ಆದ್ದರಿಂದ ಇವುಗಳನ್ನು ನಿತ್ಯಪರೋಕ್ಷ ಫಲಗಳೆಂದು ಕರೆಯುತ್ತಾರೆ. ಈ ರೀತಿಯಾಗಿ ಕರ್ಮದಿಂದ ಪತ್ಯಕ್ಷ. ಪರೋಕ್ಷ ಹಾಗೂ ನಿತ್ಯಪರೋಕ್ಷ ಫಲಗಳು ಮಾತ್ರ ಸಿಗಬಲ್ಲವು.

ನಮಗೆ ಬೇಕಾದ ಶಾಶ್ವತ ಶಾಂತಿಯನ್ನು ಆತ್ಮಜ್ಞಾನ ಮಾತ್ರ ಕೊಡಬಲ್ಲದು. ಅದಕ್ಕೆ ಕರ್ಮ ಸಾಧನ ಅಲ್ಲ ಶ್ರವಣ, ಮನನ, ನಿದಿಧ್ಯಾಸನಗಳೇ ನೇರವಾದ ಸಾಧನಗಳು. ಶಬ್ದವೇ ಪ್ರಮಾಣ. ಈ ಪ್ರಮಾಣವನ್ನು ಉಪಯೋಗಿಸುವ ಕಲೆಯೇ ಪರಂಪರೆ. ಕ್ರಮಬದ್ಧವಾಗಿ ಉಪದೇಶವಾಗಬೇಕು. ತತ್ಕಾಲದಲ್ಲಿಯೇ ಅಧಿಕಾರಿಯಾದ ಸಾಧಕನಿಗೆ ಆಗುವ ಅನುಭವವೇ ಅಪರೋಕ್ಷ ಅನುಭವ ಅಥವಾ ಅಪರೋಕ್ಷಾನುಭೂತಿ. ಇದು ಕರ್ಮದ ಫಲದಂತೆ ಪ್ರತ್ಯಕ್ಷವೂ ಅಲ್ಲ, ಪರೋಕ್ಷವೂ ಅಲ್ಲ, ನಿತ್ಯಪರೋಕ್ಷವಂತೂ ಅಲ್ಲವೇ ಅಲ್ಲ. ಇಲ್ಲಿಯೇ ಈಗಲೇ ಆಗುವ ಅನುಭವ. ಇದು ಸುಷುಪ್ತಿಯ ಆನಂದದಂತೆ ಸಾರ್ವತ್ರಿಕ ಅನುಭವ. ಎಲ್ಲರೂ ಅನುಭವಿಸುವ ಆನಂದವೂ ಒಂದೇ, ಇದು ಇಂದ್ರಿಯಾತೀತವಾದ ಅನುಭವ. ಇದನ್ನು ಬೇರೆಯವರಿಗೆ ತೋರಿಸಲು ಸಾಧ್ಯವಿಲ್ಲ. ಇದು 'ನಾನು ನಾನು' ಎಂದು ಒಳಗಡೆ ಸದಾ ಬೆಳಗುತ್ತಲೇ ಇರುತ್ತದೆ. ನಾನಿಲ್ಲ ಎನ್ನುವಂತಹದೇ ಇಲ್ಲ. ಆದ್ದರಿಂದ ಪ್ರತಿಯೊಬ್ಬರೂ ತಾವೇ ತಮ್ಮಲ್ಲಿ ತಾವಾಗಿಯೇ ನಿಂತು ಅನುಭವಿಸಬೇಕು. ಇದೇ ಅಪರೋಕ್ಷಾನುಭೂತಿ ಅಥವಾ ಆತ್ಮಜ್ಞಾನ.

ಸಂಪ್ರದಾಯಬದ್ಧ ಉಪದೇಶವಿದ್ದಾಗ್ಯೂ ಅನುಭೂತಿ ಆಗದಿದ್ದರೆ ಸಾಧಕನು ಸರಿಯಾದ ಅಧಿಕಾರಿಯಾಗಿಲ್ಲವೆಂದರ್ಥ. ಅಧಿಕಾರಿಯ ಭಾವನೆ ಹೇಗಿರಬೇಕೆಂದರೆ "ನಾನು ಏನಾಗಿದ್ದೇನೆ ಎಂಬುದು ನನಗೆ ಗೊತ್ತಿಲ್ಲ. ಅದನ್ನು ನಾನು ತಿಳಿಯಬೇಕಾಗಿದೆ. ಇದು ಉಪದೇಶದಿಂದ ಮಾತ್ರ ಸಾಧ್ಯ. ಜಪತಪ ಕರ್ಮಗಳಿಂದ ಸಿಗುವುದಲ್ಲ. ಯಾವುದರಿಂದ ಸಿಗುತ್ತದೆಂಬ ಭ್ರಮೆಯಿತ್ತೋ, ಅದನ್ನು ಬಿಟ್ಟುಕೊಟ್ಟು ಗುರುವಿನ ಬಳಿ ಶ್ರದ್ಧೆಯಿಂದ ಕುಳಿತುಕೊಳ್ಳಬೇಕು. ನಾನೇ ನಾನಾಗಿರುವುದನ್ನು ಗುರುತಿಸಲೇಬೇಕೆಂಬ ಛಲದಿಂದ ಗುರುವನ್ನು ಆಶ್ರಯಿಸಿದವನೇ ಅಧಿಕಾರಿ. ಇವನೇ ಸಾಧನ ಚತುಷ್ಟಯವುಳ್ಳವನು. ಇಂತಹವನಿಗೆ ಉಪದೇಶವು ಫಲಿಸಿ ಅಪರೋಕ್ಷಾನುಭೂತಿಯಾಗುವುದರಲ್ಲಿ ಸಂದೇಹವೇ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪರೋಕ್ಷಾನುಭೂತಿ

೧. ಮಂಗಲಾಚರಣ

ಶ್ರೀಹರಿಂ ಪರಮಾನಂದಮುಪದೇಷ್ಟಾರಮೀಶ್ವರಂ ।
ವ್ಯಾಪಕಂ ಸರ್ವಲೋಕಾನಾಂ ಕಾರಣಂ ತಂ ನಮಾಮ್ಯಹಮ್
॥ ೧ ॥

ಪರಮಾನಂದಂ=ಅತ್ಯಂತ ಶ್ರೇಷ್ಠವಾದ ಆನಂದ ಸ್ವರೂಪವಾಗಿರುವ **ಉಪದೇಷ್ಟಾರಂ**=ಉಪದೇಶವನ್ನು ಮಾಡುತ್ತಿರುವ, **ಈಶ್ವರಂ**=ಈಶ್ವರನಾಗಿಯೂ, **ವ್ಯಾಪಕಂ**=ಎಲ್ಲವನ್ನೂ ವ್ಯಾಪಿಸಿಕೊಂಡಿರುವ, **ಸರ್ವಲೋಕಾನಾಂ ಕಾರಣಂ**=ಎಲ್ಲಾ ಲೋಕಗಳಿಗೂ ಕಾರಣನಾಗಿಯೂ ಇರುವ, **ತಂ**=ಆ **ಶ್ರೀಹರಿಂ**=ಶ್ರೀಹರಿಯನ್ನು. **ಅಹಂ**=ನಾನು, **ನಮಾಮಿ**=ನಮಸ್ಕರಿಸುತ್ತೇನೆ.

ಪರಮಾನಂದ ಸ್ವರೂಪನಾಗಿಯೂ, ಗುರುವಾಗಿಯೂ, ಜಗನ್ನಿಯಾಮಕನಾದ ಈಶ್ವರನಾಗಿಯೂ, ಸರ್ವವ್ಯಾಪಕನಾಗಿಯೂ ಎಲ್ಲಾ ಲೋಕಗಳಿಗೂ ಕಾರಣವಾಗಿಯೂ ಇರುವ ಆ (ಅದ್ವಿತೀಯ ತತ್ವವಾದ) ಶ್ರೀಹರಿಯನ್ನು ನಾನು ನಮಸ್ಕರಿಸುತ್ತೇನೆ.

ಈ ಪ್ರಾರ್ಥನಾ ಶ್ಲೋಕದಲ್ಲಿ ಗ್ರಂಥದ ಅಧ್ಯಯನದಲ್ಲಿ ಬರಬಹುದಾದ ವಿಘ್ನನಿವಾರಣೆಗಾಗಿ ಸದ್ಗುರುವಿನಲ್ಲಿ ನಮನಗಳನ್ನು ಒಪ್ಪಿಸಿದೆ. ಆಚಾರ್ಯರ ಇಷ್ಟ ದೇವತೆ ಶ್ರೀ ಕೃಷ್ಣ ಹಾಗೂ ಅವರ ಗುರುಗಳಾದ ಶ್ರೀ ಗೋವಿಂದಾಚಾರ್ಯರ ಸ್ಮರಣೆಯನ್ನು ಶ್ರೀಹರಿ ಎಂಬ ಪದವು ಸೂಚಿಸುತ್ತದೆ. ಈ ಶ್ಲೋಕದಲ್ಲಿ ವೇದಾಂತ ಸಿದ್ಧಾಂತವನ್ನೆಲ್ಲಾ ಅಡಕ ಮಾಡಿದ್ದಾರೆ. ಶ್ರೀಹರಿ ಎಂದರೆ ಆ ಪರಮಾತ್ಮ ತತ್ವ. ಯಾವ ತತ್ವವು ಶ್ರೇಷ್ಠವಾದ ಆನಂದದಿಂದ ಕೂಡಿದೆಯೋ ಅದೇ ಪರಮಾನಂದ. ಶ್ರೇಷ್ಠ ಎಂದರೆ ಯಾವುದು ಯಾವ ಕಾಲಕ್ಕೂ ತನ್ನ ಘನತೆಯನ್ನು ಕಳೆದುಕೊಂಡು ಕನಿಷ್ಠವಾಗಲಾರದೊ ಅದು. ಯಾವ ವಿಷಯವನ್ನೂ ಅದು ಅವಲಂಬಿಸಿಲ್ಲ. ಆದ್ದರಿಂದ ಅದು ದೇಶತಃ ಕಾಲತಃ ವಸ್ತುತಃ ಅಪರಿಚ್ಛಿನ್ನವಾಗಿದೆ. ಇದು ಹೊಸದಾಗಿ ಹುಟ್ಟತಕ್ಕದಲ್ಲ, ನಿತ್ಯವಾಗಿರುವುದು.

ಉಪದೇಷ್ಟಾರಂ=ಈ ಪರಮಾತ್ಮ ತತ್ವವೇ ಗುರುವಿನ ರೂಪದಲ್ಲಿ ತೋರಿಕೊಳ್ಳುತ್ತಿದೆ. ನಾನು ಯಾರು ಎಂದು ಗುರುತಿಸುವ ಪರಂಪರೆಯನ್ನು ಕೊಡುವ ಈ ಗುರುವು ಬ್ರಹ್ಮನಿಷ್ಠನೂ, ಶ್ರೋತ್ರಿಯನೂ ಆಗಿರುತ್ತಾನೆ.

ಈಶ್ವರಂ=ವ್ಯವಹಾರದಲ್ಲಿ ಈ ಜಗತ್ತು ಯಾರ ನಿಯಮಕ್ಕೆ ಒಳಪಟ್ಟು ಇದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri
ಕೊಂಡಿರುವುದೋ ಆ ತತ್ವಕ್ಕೆ ಈಶ್ವರ ಎನ್ನುತ್ತಾರೆ. ಇವನು ಜಗತ್ತನ್ನು ಆಳುವ ಸ್ವತಂತ್ರನಾದ ಪರಮೇಶ್ವರನೆಂದು ಜಗತ್ತಿನ ದೃಷ್ಟಿಯಿಂದ ಹೇಳುತ್ತಾರೆ. ಆದರೆ ಪಾರಮಾರ್ಥಿಕವಾಗಿ ಪರಮಾತ್ಮ ತತ್ವ ಮಾತ್ರ.

ವ್ಯಾಪಕಂ=ಈ ತತ್ವವು ಇಡಿಯ ಜಗತ್ತನ್ನೇ ಒಳಗೂ ಹೊರಗೂ ಎಲ್ಲೆಲ್ಲೂ ವ್ಯಾಪಿಸಿಕೊಂಡಿರುತ್ತದೆ. ಜಗತ್ತನ್ನು ಬಿಟ್ಟು ಈ ತತ್ವವು ಇರಬಹುದು. ಆದರೆ ಜಗತ್ತು ಮಾತ್ರ ಇದನ್ನು ಬಿಟ್ಟು ಇರಲಾರದು.

ಸರ್ವಲೋಕಾನಾಂ ಕಾರಣಂ=ಈ ತೋರುತ್ತಿರುವ ಜಗತ್ತಿಗೆ ಈ ತತ್ವವೇ ಕಾರಣ ಎಂದು ವೇದಾಂತದಲ್ಲಿ ಹೇಳಿರುತ್ತದೆ. ಆದರೆ ವ್ಯವಹಾರದಲ್ಲಿ ನಾವು ಹೇಳುವಂತೆ, ಈ ಕಾರಣವು ಕಾರ್ಯಕ್ಕಿಂತ ಹಿಂದಿನ ಕಾಲದಲ್ಲಿ ಮಾತ್ರ ಇದ್ದು, ಕಾರ್ಯವಾಗಿ ಪರಿಣಮಿಸಿದ ಮೇಲೆ, ಕಾರಣವು ಇಲ್ಲವಾಗುತ್ತದೆ ಎಂದೇನೂ ಅರ್ಥವಲ್ಲ. ಹೇಗೆ ಹಗ್ಗವು ಯಾವ ಬದಲಾವಣೆಯನ್ನೂ ಹೊಂದದೆ ಹಾವಾಗಿ ತೋರಿತೋ, ಹಾಗೆಯೇ ಈ ತತ್ವವು ತನ್ನಲ್ಲಿ ಯಾವ ಬದಲಾವಣೆಯನ್ನೂ ಮಾಡಿಕೊಳ್ಳದೆ ನಾಮರೂಪಗಳಿಂದ ಕೂಡಿದ ಜಗತ್ತಿನ ತೋರಿಕೆಗೆ ಕಾರಣವಾಗಿದೆ. ಅಂದರೆ ಈ ತತ್ವವು ಇಡೀ ಜಗತ್ತಿನ ಅಧಿಷ್ಠಾನ ಒಂದೇ ಅಲ್ಲ, ತಿರುಳಾಗಿಯೂ ಇದೆ ಎಂದು ತಿಳಿಸಿದಂತಾಯಿತು.

೨. ಅನುಬಂಧಗಳು

ಅಪರೋಕ್ಷಾನುಭೂತಿರ್ವೈ ಪ್ರೋಚ್ಯತೇ ಮೋಕ್ಷಸಿದ್ಧಯೇ ।
ಸದ್ಭಿರೇವ ಪ್ರಯತ್ನೇನ ವೀಕ್ಷಣೀಯಾ ಮುಹುರ್ಮುಹುಃ ॥ ೨ ॥

ಮೋಕ್ಷಸಿದ್ಧಯೇ=ಮೋಕ್ಷ ಸಿದ್ಧಿಗಾಗಿ. **ಅಪರೋಕ್ಷಾನುಭೂತಿಃ**=ಅಪರೋಕ್ಷಾನುಭೂತಿಯು, **ಪ್ರೋಚ್ಯತೇ ವೈ**=ಬಹಳ ವಿವರವಾಗಿ ಹೇಳಲ್ಪಡುತ್ತಿದೆಯಷ್ಟೇ, (ಇದು) **ಸದ್ಭಿಃ ಏವ**=ಸತ್ಪುರುಷರಾದವರಿಂದ ಮಾತ್ರವೇ, **ಮುಹು ರ್ಮುಹುಃ**=ಮತ್ತೆ ಮತ್ತೆ, **ಪ್ರಯತ್ನೇನ**=ಸರಿಯಾದ ಮತ್ತು ಸಾಕಷ್ಟು ಸಾಧನದಿಂದ, **ವೀಕ್ಷಣೀಯಾ**=ವಿಶೇಷವಾಗಿ ನೋಡಲ್ಪಡಬೇಕು.

ಮೋಕ್ಷಸಿದ್ಧಿಗಾಗಿ ಅಪರೋಕ್ಷಾನುಭೂತಿ ಅಂದರೆ ಈಗಲೇ ಇಲ್ಲಿಯೇ ಉಂಟಾಗುವ ಅನುಭವವನ್ನು ಈ ಗ್ರಂಥದ ಮೂಲಕ ವಿವರವಾಗಿ ಹೇಳಲ್ಪಡುತ್ತದೆಯಷ್ಟೆ. ಇದು ಅಧಿಕಾರಿಗಳಾದ ಸತ್ಪುರುಷರಿಂದ ಮಾತ್ರವೇ ಪುನಃ ಪುನಃ ಮಾಡಿದ ಸಾಕಷ್ಟು ಹಾಗೂ ಸರಿಯಾದ ಸಾಧನದಿಂದ ಜ್ಞಾನ ವಿಚಾರದ ಮೂಲಕ ನೋಡಲ್ಪಡಬೇಕು.

ಈ ಶ್ಲೋಕದಲ್ಲಿ ಗ್ರಂಥದ ಅನುಬಂಧ ಚತುಷ್ಟಯವನ್ನು ತಿಳಿಸಿ, ಅದರಲ್ಲಿ ಸಾಧಕನಿಗೆ ರುಚಿಯನ್ನು ಹುಟ್ಟಿಸುತ್ತಿದ್ದಾರೆ. ಅಪರೋಕ್ಷಾನುಭೂತಿ ಹೇಗೆ ಆಗುತ್ತದೆ ಎಂಬುದನ್ನು ತಿಳಿಸುವುದೇ ಈ ಗ್ರಂಥದ ವಿಷಯ. ಇದರಿಂದ ಆಗುವ ಪ್ರಯೋಜನವೇ ಮೋಕ್ಷ. ಈ ಗ್ರಂಥ ವಿಚಾರ ಮಾಡಿ ಆ ಪ್ರಯೋಜನವನ್ನು ಪಡೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯುವ ಅಧಿಕಾರಿಗಳೇ ಸತ್ಪುರುಷರು. ಅಂದರೆ ಸಾಧನ ಸಂಪತ್ತುಳ್ಳವರು. ಈ ಗ್ರಂಥ ದಲ್ಲಿ ಬ್ರಹ್ಮಾತ್ಮೈಕ್ಯವನ್ನು ತಿಳಿಸುವುದೇ ಸಂಬಂಧ.

ಮೋಕ್ಷ ಅಂದರೆ ಕರ್ಮಗಳಿಂದ ಬಿಡುಗಡೆ ಅಲ್ಲ. ವಸ್ತುಗಳಿಂದ ಬಿಡುಗಡೆ ಅಲ್ಲ. "ನಾನು ಕರ್ಮಗಳಿಂದ ಬಂಧಿತನಾಗಿದ್ದೇನೆ" ಎಂಬ ಯಾವ ಭ್ರಮೆ ಇದೆಯೋ ಆ ಭ್ರಮೆ ಯನ್ನು ಜ್ಞಾನದಿಂದ ಹೋಗಲಾಡಿಸಿಕೊಂಡು, "ಕರ್ಮವೂ ಇಲ್ಲ, ವಸ್ತುವೂ ಇಲ್ಲ, ಭ್ರಮೆಯೂ ಇಲ್ಲ. ನಾನು ಆನಂದ ಸ್ವರೂಪ" ಎಂದು ಅಪರೋಕ್ಷಾನುಭೂತಿ ಪಡೆಯು ವುದು. ಅಧಿಕಾರಿಯಾದವನು ಶಾಸ್ತ್ರೋಪದೇಶ ಶ್ರವಣವನ್ನು ಮತ್ತೆ ಮತ್ತೆ ಮನನ ಮಾಡಿದಾಗ ಉಂಟಾದ ಜ್ಞಾನ ವಿಚಾರದ ಫಲವಾಗಿ ಈ ಅನುಭವವನ್ನು ಪಡೆಯು ತ್ತಾನೆ.

೩. ಸಾಧನ ಚತುಷ್ಟಯ

ಸ್ವವರ್ಣಾಶ್ರಮಧರ್ಮೇಣ ತಪಸಾ ಹರಿತೋಷಣಾತ್ ।
ಸಾಧನಂ ಪ್ರಭವೇತ್ ಪುಂಸಾಂ ವೈರಾಗ್ಯಾದಿ ಚತುಷ್ಟಯಂ ॥ ೩ ॥

ಸ್ವವರ್ಣಾಶ್ರಮಧರ್ಮೇಣ=ತಮ್ಮ ತಮ್ಮ ವರ್ಣ, ಆಶ್ರಮ ಇವುಗಳಿಗೆ ತಕ್ಕಂತೆ ಧರ್ಮವನ್ನು ಆಚರಿಸುವುದೆಂಬ, **ತಪಸಾ**=ತಪಸ್ಸಿನಿಂದ. **ಹರಿತೋಶಣಾತ್**=ಹರಿಗೆ ಸಂತೋಷವನ್ನುಂಟು ಮಾಡುವುದರಿಂದ, **ಪುಂಸಾಂ**=ಜನರಿಗೆ, **ವೈರಾಗ್ಯಾದಿ ಚತುಷ್ಟಯಂ**=ವೈರಾಗ್ಯವೇ ಮುಂತಾದ ನಾಲ್ಕು ಸಾಧನಗಳು, **ಪ್ರಭವೇತ್**=ಉಂಟಾಗುವುವು.

ತಮ್ಮ ತಮ್ಮ ವರ್ಣಾಶ್ರಮಗಳಿಗೆ ತಕ್ಕಂತೆ ಧರ್ಮವನ್ನು ಆಚರಿಸುವುದೆಂಬ ತಪಸ್ಸಿನಿಂದ ಹರಿಗೆ ಸಂತೋಷವನ್ನುಂಟುಮಾಡುವುದರ ಮೂಲಕ ಸಾಧಕನಲ್ಲಿ ವೈರಾಗ್ಯಾದಿ ಸಾಧನ-ಚತುಷ್ಟಯಗಳು ವೃದ್ಧಿಯಾಗುವುವು.

ಸಾಧಕನು ತನ್ನ ವರ್ಣಾಶ್ರಮಗಳಲ್ಲಿ ನಿರ್ದೇಶಿಸಲ್ಪಟ್ಟಂತೆ ತನ್ನ ಭಾಗಕ್ಕೆ ಬಂದ ಕರ್ಮಗಳನ್ನು ಈಶ್ವರನ ಸಂತೋಷಕ್ಕಾಗಿ ಮಾಡುತ್ತಿದ್ದೇನೆ ಎಂಬ ಭಾವನೆಯಿಂದ ಮಾಡಿದ್ದೇ ಆದರೆ, ಅವನಲ್ಲಿ ಅವ್ಯಕ್ತವಾಗಿರುವ ವೈರಾಗ್ಯಾದಿ ಸಾಧನ ಚತುಷ್ಟಯಗಳು ವ್ಯಕ್ತವಾಗಿ ಅರಳಲು ಪ್ರಾರಂಭವಾಗುತ್ತವೆ. ಕರ್ಮಗಳನ್ನು ಸ್ವಾರ್ಥಕ್ಕಾಗಿ ಮಾಡಿದಾಗ ಬಂಧನಕ್ಕೆ ಕಾರಣವಾಗಿ ಕೇವಲ ಕರ್ಮಗಳೆನಿಸಿಕೊಳ್ಳುತ್ತವೆ. ಅದೇ ಕರ್ಮಗಳನ್ನು ಈಶ್ವರಾರ್ಪಣ ಹಾಗೂ ಈಶ್ವರ ಪ್ರಸಾದ ಬುದ್ಧಿಯಿಂದ ಮಾಡಿದ್ದೇ ಆದರೆ ತಪಸ್ಸು ಎನಿಸಿಕೊಂಡು ಅಂತಃಕರಣ ಶುದ್ಧಿಗೆ ಕಾರಣವಾಗುತ್ತದೆ. ಹೀಗೆ ಬಾಹ್ಯವಾಗಿ ಮಾಡುವ ಕರ್ಮಗಳು ಒಳ್ಳೆಯ ಭಾವನೆಯಿಂದ ಕೂಡಿದ್ದಾಗಿರುವುದರಿಂದ ಅಂತಃಕರಣದಲ್ಲಿ ವೈರಾಗ್ಯಾದಿಗಳು ಅರಳಲು ಸಹಾಯಕವಾಗುತ್ತದೆ.

ಹೇಗೆ ಕಲಾಕಾರನಲ್ಲಿ ಸ್ವಾಭಾವಿಕವಾಗಿ ಕಲೆಯು ಅವ್ಯಕ್ತವಾಗಿದ್ದು ಅವನ ಸಾಧನಾ

Sri Vidyabharathi Book Centre, Sringeri

CC-O. In Public Domain. Digitized by eGangotri
ಹಾಗೂ ಅವಕಾಶಗಳಿಂದ ವೃದ್ಧಿಹೊಂದಿ ಹೊರತೋರಿಕೊಳ್ಳುವುದೋ, ಹಾಗೆಯೇ ಪ್ರತಿಯೊಬ್ಬ ಮಾನವನಲ್ಲಿಯೂ ಇದ್ದೇ ಇರುವ ಈ ಸಾಧನ ಚತುಷ್ಟಯಗಳನ್ನು ವಿವೇಕವುಳ್ಳ ಮಾನವನು ತನ್ನ ಪ್ರಯತ್ನದಿಂದ ಅರಳಿಸಿಕೊಂಡು ಬ್ರಹ್ಮವಿದ್ಯೆಗೆ ಅಧಿಕಾರಿಯಾಗಬಹುದು. ಈ ಸಾಧನ ಚತುಷ್ಟಯಗಳನ್ನು ಅಹಂಕಾರ, ಮಮಕಾರ ಅಥವಾ ಕರ್ತೃತ್ವ ಭೋಕ್ತೃತ್ವದಿಂದ ಕಲುಷಿತವಾದ ಅಂತಃಕರಣದಲ್ಲಿ ಗುರುತಿಸಲು ಆಗುವುದಿಲ್ಲ. ಈ ಸ್ವಾರ್ಥಗಳ ಮೋಹವೇ ವಿವೇಕಾದಿಗಳನ್ನು ಮುಚ್ಚಿಹಾಕಿದೆ. ವಿವೇಕವಿಲ್ಲದೆ ಯಾವುದಾದರೊಂದು ವಿಷಯದಲ್ಲಿ ಸರಿಯಾದ ನಿಶ್ಚಯ ತೆಗೆದುಕೊಳ್ಳಲು ಸಾಧ್ಯವಿಲ್ಲದಾಗಿದೆ. ವಿವೇಕವಿದ್ದದ್ದೇ ಆದರೆ ನಮ್ಮ ನಿಶ್ಚಯಗಳು ಸರಿಯಾಗಿ, ಜೀವನವು ಉತ್ತಮಗೊಳ್ಳುತ್ತದೆ. ಈ ಅಹಂಕಾರ-ಮಮಕಾರಗಳನ್ನು ಬಿಟ್ಟುಕೊಡುವ ಏಕೈಕ ಮಾರ್ಗವು ಈಶ್ವರ ಭಾವನೆ. ಪಂಚ ವಿಷಯಾಕಾರವಾಗಿರುವ ಜಗತ್ತನ್ನು ಈಶ್ವರನ ಸೃಷ್ಟಿಯೆಂದು ಇದ್ದ ಹಾಗೆ ನೋಡು. ಅದನ್ನು ನಿನ್ನ ದೃಷ್ಟಿಗೆ ಅನುಸಾರವಾಗಿ ಬದಲಿಸಲು ಇಷ್ಟಪಡಬೇಡ. ಅವು ಬದಲಾಗುವುದಿಲ್ಲ. ನೀನು ಇಷ್ಟ ಮಾಡದಿದ್ದರೆ ನಿನಗೆ ಯಾವ ತಳಮಳವೂ ಆಗುವುದಿಲ್ಲ. ಪರಿಸರದಿಂದ ನಿನಗೆ ಎಷ್ಟೇ ಕಷ್ಟ ಸುಖಗಳು ಬರಲಿ ಅವನ್ನು ಹಾಗೆಯೇ ಸ್ವೀಕರಿಸು. ಈಶ್ವರನ ನಿಯಮಕ್ಕೆ ತಕ್ಕಂತೆ ಆಗಿದೆ ಎಂಬ ನಿಶ್ಚಯವನ್ನು ಮರೆಯಬೇಡ. ಈ ನಿಶ್ಚಯವನ್ನು ಮರೆತು ಅನಿವಾರ್ಯದಿಂದಾಗಲೀ ಮೋಹದಿಂದಾಗಲೀ ಕಷ್ಟ ಸುಖಗಳನ್ನು ಅನುಭವಿಸಿದ್ದೇ ಆದರೆ ಅದರಿಂದ ನಿನಗೆ ತಳಮಳ ತಪ್ಪುವುದಿಲ್ಲ. ಕರ್ಮ ನಡೆಯಬೇಕಾದ ರೀತಿಯಲ್ಲಿ ನಡೆಯಲೇಬೇಕು. ಕೆಲವರು ಮಾತ್ರ ನನ್ನವರೆಂದು ಮೋಹ ಪಡಬೇಡ, ಇದೇ ಸಂಸಾರ. ಎಲ್ಲವೂ ನಾನೆಂಬ ಭಾವನೆಯನ್ನು ಬೆಳೆಸಿಕೋ –ಅಥವಾ ಎಲ್ಲದರಲ್ಲಿಯೂ ಮೋಹ ಬಿಟ್ಟು ಏನೂ ಇಲ್ಲವೇ ಇಲ್ಲ ಎಂಬ ಭಾವನೆ ಬೆಳೆಸಿಕೋ. ಹೀಗೆ ಈಶ್ವರ ಭಾವನೆಯಿಂದ ಜೀವನವು ಉತ್ತಮಗೊಳ್ಳುತ್ತದೆ. ಪರಿಸರವು ನಿನ್ನನ್ನು ತಳಮಳಗೊಳಿಸುವುದಿಲ್ಲ. ನಿನ್ನ ಕಷ್ಟಗಳಿಗಾಗಿ ನೀನು ಯಾರನ್ನೂ ದೂಷಿಸುವುದಿಲ್ಲ. ಎಲ್ಲವನ್ನೂ ನಗುನಗುತ್ತಾ ಅನುಭವಿಸುತ್ತೀಯೆ. ಈ ಆತ್ಮ ಸಾಕ್ಷಿ ಜೀವನ ನಿನ್ನಲ್ಲಿ ಬಂದದ್ದೇ ಆದರೆ ವಿವೇಕವು ಗುರುತಿಸಲ್ಪಟ್ಟ ಹಾಗೇ. ವಿವೇಕವಿದ್ದ ಕಡೆ ವಿಚಾರ ಪ್ರಾರಂಭವಾಗುತ್ತದೆ. ಅದರ ಫಲವಾಗಿ ಜಗತ್ತು ಅದರ ವ್ಯವಹಾರಗಳಲ್ಲಿ ಅನಿತ್ಯತೆಯನ್ನು ಗುರುತಿಸುತ್ತೀಯೆ. ಮತ್ತೆ ಮತ್ತೆ ವಿಚಾರಿಸಿದಾಗ ತಿಳಿಯುವುದೇನೆಂದರೆ "ನಾನು ಅನಿತ್ಯವಸ್ತುಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಲಿಲ್ಲ. ಆದರೆ ಅವುಗಳಲ್ಲಿ ನಿತ್ಯತೃಪ್ತಿ ಸಿಗುತ್ತದೆಂಬ ಭ್ರಮೆಯಿಂದ ತೊಡಗಿದ್ದೆ". ಈ ವಿವೇಕವನ್ನು ಪಡೆದವರು ಕರ್ಮಗಳನ್ನು ಪುನರಾವರ್ತನೆ ಮಾಡುವುದಿಲ್ಲ. ತಾನಾಗಿಯೇ ಒದಗಿ ಬಂದ ಕರ್ಮಗಳನ್ನು ಬಿಡುವುದಿಲ್ಲ. ಅದು ಈಶ್ವರ ಸೇವೆಯೆಂದು ದಕ್ಷತೆಯಿಂದ ಮಾಡುತ್ತಾನೆ. ಕರ್ಮಗಳನ್ನು ತಾನಾಗಿಯೇ ಬೆಳೆಸಿಕೊಳ್ಳುವುದಿಲ್ಲ. ಕರ್ಮಗಳನ್ನು ಬದಲಿಸಿಕೊಳ್ಳುವುದೂ ಇಲ್ಲ. ಹೀಗೆ ಮಾಡುವುದರಿಂದ ಎಲ್ಲವೂ ಈಶ್ವರ ಪ್ರಸಾದವಾಗಿ ಇಷ್ಟಾನಿಷ್ಟಗಳೂ ಪಾಪ ಪುಣ್ಯಗಳೂ ಲೀನವಾಗುತ್ತವೆ. ಅಂತಃಕರಣವು ತಿಳಿಯಾಗಿ ಶಮನಮಾಡಿ
Sri Vidyabharathi Book Centre, Sringeri

CC-O. In Public Domain. Digitized by eGangotri

ಷಟ್ಸಂಪತ್ತಿಗಳು ತಾವಾಗಿಯೇ ಅರಳುತ್ತವೆ. ಅನಿತ್ಯ ವಿಷಯಗಳ ಅನಾಸಕ್ತಿಯಿಂದ ನಿತ್ಯ ಆತ್ಮನ ಪ್ರಾಪ್ತಿಯಲ್ಲಿ ಮೌಲ್ಯ ಬೆಳೆಯುತ್ತದೆ. ಆಗ ಸಾಧಕನು ತೀವ್ರ ಮುಮುಕ್ಷು ವಾಗುತ್ತಾನೆ. ಇರುವ ಜಗತ್ತನ್ನು ಬದಲಿಸಲು ಸಾಧ್ಯವಿಲ್ಲ. ಅದನ್ನು ಎದುರಿಸಲೇಬೇಕು ಎಂಬ ನಿಶ್ಚಯದಲ್ಲಿ ಈಶ್ವರ ಭಾವನೆಯಿಂದ ನಿನ್ನ ಕರ್ತವ್ಯಗಳನ್ನು ಮುಗಿಸು.

ತಾನಾಗಿಯೇ ಒದಗಿಬಂದ ಕರ್ಮಗಳನ್ನು ಈಶ್ವರ ಪ್ರೀತ್ಯರ್ಥವಾಗಿ ಮಾಡು ವುದರ ಮೂಲಕ ಸಾಧಕನು ಅಂತಃಕರಣ ಪರಿಪಕ್ವತೆಯನ್ನು ಪಡೆದು ವೈರಾಗ್ಯಾದಿ ಸಾಧನ ಚತುಷ್ಟಯಗಳನ್ನು ಅಳವಡಿಸಿಕೊಳ್ಳುತ್ತಾನೆ. ತನ್ಮೂಲಕ ಅಪರೋಕ್ಷಾನು ಭೂತಿಗೆ ಹೇಗೆ ಅರ್ಹತೆಯನ್ನು ಪಡೆಯುತ್ತಾನೆ ಎಂಬುದನ್ನು ಇದುವರೆಗೆ ವಿವರವಾಗಿ ತಿಳಿಸಿದ್ದಾಯಿತು. ಇನ್ನು ಮುಂದೆ ೪ ರಿಂದ ೯ ಶ್ಲೋಕಗಳಿಗೆ ಸಾಧನ ಚತುಷ್ಟಯ ಗಳನ್ನು ವಿವರಿಸುತ್ತಾರೆ—

೪. ವೈರಾಗ್ಯ

ಬ್ರಹ್ಮಾದಿಸ್ಥಾವರಾನ್ತೇಷು ವೈರಾಗ್ಯಂ ವಿಷಯೇಷ್ವನು ।
ಯಥೈವ ಕಾಕವಿಷ್ಠಾಯಾಂ ವೈರಾಗ್ಯಂ ತದ್ಧಿ ನಿರ್ಮಲಮ್ ॥ ೪ ॥

ಬ್ರಹ್ಮಾದಿ ಸ್ಥಾವರಾನ್ತೇಷು=ಬ್ರಹ್ಮನೇ ಮೊದಲಾದ ಸ್ಥಾವರ ಪ್ರಾಣಿಗಳ ವರೆಗೂ, **ವಿಷಯೇಷು**=ಇರುವ ವಿಷಯಗಳಲ್ಲಿ, **ಅನು**=ಚೆನ್ನಾಗಿ ವಿಮರ್ಶೆ ಮಾಡಿದ ಮೇಲೆ, **ಯಥಾ ಕಾಕವಿಷ್ಠಾಯಾಂ**=ಕಾಗೆಯ ಹೇಸಿಗೆಯಲ್ಲಿ ಉಂಟಾಗು ವಂತೆ (ಉಂಟಾಗುವ) **ತತ್ ವೈರಾಗ್ಯಂ ಏವ**=ಆ ವೈರಾಗ್ಯವೇ, **ನಿರ್ಮಲಂ ವೈರಾಗ್ಯಂ ಹಿ**=ಪರಿಪಕ್ವವಾದ ವೈರಾಗ್ಯವೆಂದು ನಿಶ್ಚಯವಾಗಿದೆ.

ಬ್ರಹ್ಮನಿಂದ ಮೊದಲುಗೊಂಡು ಸ್ಥಾವರ ಪ್ರಾಣಿಗಳವರೆಗೂ ಇರುವ ವಿಷಯ ಗಳಲ್ಲಿ ಪರೀಕ್ಷೆ ಮಾಡಿದ ನಂತರ ಕಾಗೆಯ ಹೇಸಿಗೆಯಲ್ಲಿ ಉಂಟಾಗುವಂತೆ ಉಂಟಾಗುವ ವೈರಾಗ್ಯವೇ ಪರಿಪಕ್ವ ವೈರಾಗ್ಯ.

ಸಾಧನ ಚತುಷ್ಟಯಗಳನ್ನು ಪಡೆಯಲು ವೈರಾಗ್ಯವೇ ಮೂಲವಾದ್ದರಿಂದ ಪರಿ ಪಕ್ವ ವೈರಾಗ್ಯವು ಎಂತಹುದು ಎಂಬುದನ್ನು ಈ ಶ್ಲೋಕದಲ್ಲಿ ವಿವರಿಸಿದ್ದಾರೆ. ಕೊಚ್ಚೆ ಯಲ್ಲಿಯೇ ಇರುವ ಹುಳುವು ಅದೇ ತನ್ನ ಸುಖ ಸ್ಥಿತಿ ಎಂದು ತಿಳಿದಿರುವಾಗ ಅದಕ್ಕೆ ತಾನಿರುವುದಕ್ಕಿಂತಲೂ ಉತ್ತಮಸ್ಥಿತಿಯನ್ನು ತಿಳಿಯಲು ಅಥವಾ ಪಡೆಯಲು ಇಚ್ಛೆಯೇ ಇರುವುದಿಲ್ಲ. ಹೀಗೆಯೇ ವಿವೇಕವಿಲ್ಲದ ಮಾನವನು ತಾನಿರುವುದೇ ಸುಖ ಎಂದು ತಿಳಿದಿರುತ್ತಾನಾಗಿ ಅವನಿಗೆ ಸಾಧನ ಚತುಷ್ಟಯವೂ ಬೇಡ, ವೇದಾಂತ ವಿಚಾರವೂ ಬೇಡ. ಸ್ವಲ್ಪ ಸಂಸಾರವುಳ್ಳ ಸಾಧಕನು ವಿಷಯಗಳಿಂದ ಸಿಗುವ ಸುಖ ಅನಿತ್ಯ, ಏಕೆಂದರೆ ಆ ಸುಖಕ್ಕೆ ಬೇಕಾದ ವಿಷಯಗಳೂ ಅವುಗಳನ್ನು ಸ್ಪರ್ಶಮಾಡುವ ಇಂದ್ರಿಯ ಮನಸ್ಸುಗಳೂ ವಿಕಾರವನ್ನು ಹೊಂದುತ್ತಲೇ ಇರುತ್ತವೆ. ದುಃಖಮಿಶ್ರವಿಲ್ಲದ ಸುಖ

Sri Vidyabharathi Book Centre, Sringeri

CC-O. In Public Domain. Digitized by eGangotri
ವಿಲ್ಲ. ಈ ಸುಖವಾದರೋ ಮನುಷ್ಯನಿಂದ ಮೇಲಕ್ಕೆ ದೇವತೆಗಳೂ, ಗಂಧರ್ವರೂ ಮುಂತಾದ ಕ್ರಮದಿಂದ ಬ್ರಹ್ಮನವರೆಗೆ ಹೋಗುತ್ತಾ ಹೆಚ್ಚಾಗುತ್ತದೆ ಎಂದು ಶಾಸ್ತ್ರವು ತಿಳಿಸುತ್ತದೆ. ಮನುಷ್ಯನಿಗಿಂತ ಕೀಳು ಪ್ರಾಣಿಗಳಲ್ಲಿ ಸುಖವು ಕಡಿಮೆಯಾಗುತ್ತಾ ಹೋಗುತ್ತದೆ. ಚೆನ್ನಾಗಿ ವಿಚಾರ ಮಾಡಿದ ಸಾಧಕನು ಈ ಬ್ರಹ್ಮಪದವಿಯಲ್ಲಿ ಸಿಗುವ ಸುಖವೂ ಸಹ ಅನಿತ್ಯ ಎಂದು ತಿಳಿಯುತ್ತಾನೆ. ಈ ಸಾಧಕನು ಹರಿತೋಷಣಕ್ಕಾಗಿ ತನ್ನ ಕರ್ತವ್ಯಗಳನ್ನು ಮಾಡಿದ ಕಾರಣ ಶುದ್ಧವಾದ ಅಂತಃಕರಣದಲ್ಲಿ ಹೀಗೆ ಅತ್ಯಂತ ಸೂಕ್ಷ್ಮವಾಗಿ ವಿಚಾರ ಮಾಡಲು ಸಾಧ್ಯವಾಯಿತು. ಇಂತಹ ವಿಚಾರ ದಿಂದ ಹುಟ್ಟಿದ ವೈರಾಗ್ಯವೇ ಅತ್ಯಂತ ಪರಿಪಕ್ವ ವೈರಾಗ್ಯ ಇದನ್ನೇ "ಇಹ ಅಮುತ್ರ ಫಲ ಭೋಗ ವಿರಾಗಃ" ಅಂದರೆ ಈ ಲೋಕ ಹಾಗೂ ಬ್ರಹ್ಮಾದಿ ಲೋಕಗಳಲ್ಲಿನ ಭೋಗಗಳಲ್ಲಿ ವೈರಾಗ್ಯ ಪಡೆಯುವುದು ಎಂದು ಆಚಾರ್ಯರು ತತ್ವ ಬೋಧದಲ್ಲಿ ಹೇಳಿರುವುದು.

೫. ವಿವೇಕ

ನಿತ್ಯಮಾತ್ಮಸ್ವರೂಪಂ ಹಿ ದೃಶ್ಯಂ ತದ್ವಿಪರೀತಗಮ್ ।
ಏವಂ ಯೋ ನಿಶ್ಚಯಃ ಸಮ್ಯಗ್ವಿವೇಕೋ ವಸ್ತುನಃ ಸವೈ ॥ ೫ ॥

ಆತ್ಮಸ್ವರೂಪಂ=ಆತ್ಮಸ್ವರೂಪವು, **ನಿತ್ಯಂ**=ನಿತ್ಯವಾದುದು, **ದೃಶ್ಯಂ**= ಅದಕ್ಕೆ ಕಾಣುವ(ಅನಾತ್ಮವು), **ತತ್**=ಅದಕ್ಕೆ (ಆತ್ಮರೂಪಕ್ಕೆ), **ವಿಪರೀತಗಂ ಹಿ** =ವಿರುದ್ಧವಾಗಿರುವುದಷ್ಟೆ, **ಏವಂ**=ಹೀಗೆಂಬ, **ಯಃ**=ಯಾವ, **ಸಮ್ಯಕ್ ನಿಶ್ಚಯಃ**=ಸರಿಯಾದ ನಿಶ್ಚಯವು, **ಸಃ ವೈ**=ಅದೇ, **ವಸ್ತುನಃ**=ವಸ್ತು ವಿಷಯ ವಾದ, **ವಿವೇಕಃ**=ವಿವೇಕವು.

ಆತ್ಮಸ್ವರೂಪವು ನಿತ್ಯವಾದದ್ದು. ಅದಕ್ಕೆ ಕಾಣುವ ಅನಾತ್ಮವು ಅದಕ್ಕೆ ವಿರುದ್ಧ ಅಂದರೆ ಅನಿತ್ಯವಾದದ್ದು. ಹೀಗೆ ಯಾವ ಸರಿಯಾದ ನಿಶ್ಚಯವು ಉಂಟಾಗುವುದೋ ಅದೇ ವಸ್ತು ವಿಷಯವಾದ ವಿವೇಕವೆನಿಸುವುದು.

ವಿಷಯಗಳು ಹಾಗೂ ಅವುಗಳಿಂದ ಸಿಗುವ ಸುಖವೂ ದೇಶ, ಕಾಲ, ವಸ್ತು ಇವು ಗಳ ಬಂಧನಕ್ಕೆ ಒಳಪಟ್ಟಿರುವುದರಿಂದ ಅನಿತ್ಯವೇ ಆಗಿದೆ ಎಂದು ವಿಚಾರಶೀಲನಾದ ಸಾಧಕನು ಗುರುತಿಸುತ್ತಾನೆ—ಹೀಗೆ ಅನಿತ್ಯವಾಗಿರುವ, ದೃಶ್ಯವಾಗಿರುವ ಇವುಗಳೆಲ್ಲವೂ ನನ್ನನ್ನು ಹೊರತುಪಡಿಸಿ ಬೇರೆ ಇರುವುದರಿಂದ ಅನಾತ್ಮವೇ ಆಗಿದೆ. ಈ ಅನಾತ್ಮಗಳ ಅನಿತ್ಯತೆಯನ್ನು ಗುರುತಿಸುವ ನನ್ನ ಅಂದರೆ ನಿತ್ಯನಾದ ಆತ್ಮನ ನಿಜ ಸ್ವರೂಪವನ್ನು ತಿಳಿದುಕೊಳ್ಳಬೇಕು ಎಂದು ಇಚ್ಛೆಪಟ್ಟ ಸಾಧಕನು "ನಿತ್ಯವೆಂದರೇನು, ಯಾವುಯಾವುದು ಅನಿತ್ಯ" ಎಂಬ ದೃಢವಾದ ತಿಳಿವಳಿಕೆಯನ್ನು ಪಡೆಯುವುದೇ ವಿವೇಕ.

Sri Vidyabharathi Book Centre, Sringeri

CC-O. In Public Domain. Digitized by eGangotri

೬. ಶಮ ಮತ್ತು ದಮ

ಸದೈವ ವಾಸನಾತ್ಯಾಗಃ ಶಮೋಽಯಮಿತಿ ಶಬ್ದಿತಃ ।
ನಿಗ್ರಹೋ ಬಾಹ್ಯವೃತ್ತೀನಾಂ ದಮ ಇತ್ಯಭಿಧೀಯತೇ ॥ ೬ ॥

ಸದಾ ಏವ=ಯಾವಾಗಲೂ, **ಅಯಂ**=ಈ, **ವಾಸನಾತ್ಯಾಗಃ**=ವಾಸನೆಗಳನ್ನು ತ್ಯಾಗಮಾಡುವುದೇ, **ಶಮಃ ಇತಿ**=ಶಮವೆಂದು, **ಶಬ್ದಿತಃ**=ಕರೆಯಲ್ಪಡುತ್ತದೆ. **ಬಾಹ್ಯವೃತ್ತೀನಾಂ**=ಹೊರಗಿನ ವೃತ್ತಿಗಳನ್ನು, **ನಿಗ್ರಹಃ**=ತಡೆದುಕೊಳ್ಳುವಿಕೆಯು, **ದಮಃ ಇತಿ**=ದಮವೆಂದು, **ಅಭಿಧೀಯತೇ**=ಹೇಳಲ್ಪಡುತ್ತದೆ.

ಅಂತಃಕರಣದಲ್ಲಿರುವ ವಾಸನೆಗಳನ್ನು ಯಾವಾಗಲೂ ಬಿಡುವುದೇ ಶಮವೆನಿಸುತ್ತದೆ. ಹೊರಗಿನ ವೃತ್ತಿಗಳನ್ನು ತಡೆದುಕೊಳ್ಳುವುದನ್ನೇ ದಮವೆನ್ನುತ್ತಾರೆ.

ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ ಹಾಗೂ ಸಮಾಧಾನಂ ಎಂಬ ಆರು ಸಾಧನಗಳು ಅಂತಃಕರಣಕ್ಕೆ ಸಂಬಂಧಿಸಿದ್ದಾಗಿದ್ದು ಷಟ್ ಸಂಪತ್ತಿಗಳೆಂದು ಕರೆಯಲ್ಪಟ್ಟಿವೆ. ಇವು ಸಾಧಕನ ಐಶ್ವರ್ಯ ಶಕ್ತಿಗಳು. ಈ ಶಕ್ತಿಗಳು ಸಾಧಕನನ್ನು ತನ್ನ ಗುರಿ ಮುಟ್ಟಿಸಲು ಸಹಾಯಕವೂ ಅತ್ಯಂತ ಅವಶ್ಯವೂ ಆಗಿವೆ. ಇವುಗಳನ್ನು ೬, ೭, ೮ ನೆಯ ಶ್ಲೋಕಗಳಲ್ಲಿ ವಿವರವಾಗಿ ತಿಳಿಸಿದ್ದಾರೆ.

ಶಮ ಎಂದರೆ "ಅಂತರೇಂದ್ರಿಯ ನಿಗ್ರಹ" ಎಂದು "ತತ್ವ ಬೋಧ" ತಿಳಿಸುತ್ತದೆ. ಇದೇ ವಾಸನಾತ್ಯಾಗ ಎಂದು ಇಲ್ಲಿ ಹೇಳಿರುವುದು. ಮನಸ್ಸು ಹಿಂದಿನ ಅನುಭವಗಳ ವಾಸನೆಯಿಂದ ಮತ್ತೆ ಮತ್ತೆ ವಿಷಯಗಳ ಚಿಂತನೆಯನ್ನು ಮಾಡುತ್ತಲೇ ಇರುತ್ತದೆ. ಆಗ ಚಟುವಟಿಕೆಗೊಂಡ ವಾಸನೆಗಳು ಕರ್ಮರೂಪದಿಂದ ವ್ಯಕ್ತವಾಗುತ್ತವೆ. ಆ ಕಾಲದಲ್ಲಿ ವಿವೇಕ ಇಲ್ಲದಿದ್ದರೆ ರಾಗ-ದ್ವೇಷಾದಿಗಳು ತಲೆ ಎತ್ತಿ, ಕರ್ಮಗಳು ನಿಯಮಿತವಾದ ಶಿಸ್ತಿನಿಂದ ನಡೆಯಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಚೇಳಿನಲ್ಲಿ ಕುಟುಕುವಿಕೆ, ಕತ್ತೆಯಲ್ಲಿ ಒದೆಯುವಿಕೆ ಎಂಬ ಕರ್ಮಗಳು ಯಾವ ನಿಯಂತ್ರಣವೂ ಇಲ್ಲದೆ ಸ್ವೇಚ್ಛೆಯಾಗಿ ನಡೆಯಲ್ಪಡುತ್ತವೆ. ಹಾಗೆಯೇ ಶಮವಿಲ್ಲದ ಮಾನವನ ಕರ್ಮಗಳು ಕೇವಲ ಪಶು ಕರ್ಮಗಳಾಗಿ ಹೊಸ ಹೊಸ ವಾಸನೆಗಳಿಗೆ ಅವಕಾಶವಾಗುತ್ತವೆ. ಆದ್ದರಿಂದ ಸಾಧಕನು ಸತ್ಸಂಗದಿಂದ ವಿಷಯ ಚಿಂತನೆಗೆ ಅವಕಾಶ ಕೊಡದೆ ಬೀಜ ರೂಪದಲ್ಲಿರುವ ವಾಸನೆಗಳು ಮೊಳಕೆಯಾಗಲು ಬಿಡಬಾರದು. ಇಷ್ಟೇ ಅಲ್ಲ ; ಈಗಾಗಲೇ ಚಟುವಟಿಕೆಗೊಂಡು ಕರ್ಮರೂಪದಲ್ಲಿ ತೋರುತ್ತಿರುವ ವಾಸನೆಗಳನ್ನು ಶಮದಿಂದ ನಿರ್ಮಿಸಿದ್ದೇ ಆದರೆ ಹೊಸ ವಾಸನೆಗಳು ಹುಟ್ಟುವುದಿಲ್ಲ. ಬಾಹ್ಯವಾಗಿ ಕಾಣುವ ಕರ್ಮಗಳು ಪ್ರಾರಂಭದಲ್ಲಿ ಸೂಕ್ಷ್ಮ ಬೀಜರೂಪದಲ್ಲಿ ಅಂತಃಕರಣದಲ್ಲಿರುವಾಗಲೇ ವಿವೇಕದಿಂದ ನಿಯಂತ್ರಿಸಬೇಕು. ಈ ರೀತಿಯಾಗಿ ವಿವೇಕದಿಂದ ಅಂತಃಕರಣದಲ್ಲಿಯೇ ನಿಯಮನ ಮಾಡುವುದನ್ನು ಶಮ ಎನ್ನುತ್ತಾರೆ. ವಿವೇಕರಹಿತವಾಗಿ ಕರ್ಮಗಳನ್ನು ಕೇವಲ ಬಾಹ್ಯವಾಗಿ ನಿಯಂತ್ರಿಸಿದ ಪಕ್ಷದಲ್ಲಿ ಮಾನಸಿಕ ತಳಮಳವು ತಪ್ಪಿದ್ದಲ್ಲ. ಈ

Sri Vidyabharathi Book Centre, Sringeri

CC-O. In Public Domain. Digitized by eGangotri
ರೀತಿಯಾದ ನಿಯಂತ್ರಣವು ಆಧ್ಯಾತ್ಮಿಕ ಸಾಧನಕ್ಕೆ ಅವಶ್ಯವಾದ ಪರಿಪಕ್ವ ಅಂತಃಕರಣವನ್ನು ಕೊಡುವುದಿಲ್ಲವಾದ್ದರಿಂದ 'ಶಮ' ಎನಿಸುವುದಿಲ್ಲ. ಇಂತಹವನು ಮಾನಸಿಕ ತಳಮಳದ ಕಾರಣ, ಇವನ ವ್ಯವಹಾರದಲ್ಲಿ ಅಸ್ತವ್ಯಸ್ತತೆ ಕಂಡುಬರುವುದರಿಂದ ಹಾಸ್ಯಾಸ್ಪದಕ್ಕೆ ಗುರಿಯಾಗಬಹುದು. ಆದರೆ ಬಾಹ್ಯವಾಗಿ ಕರ್ಮ ನಿಯಂತ್ರಣವನ್ನು ವಿವೇಕದ ಆಧಾರದಲ್ಲಿ ಮಾಡಿದ್ದೇ ಆದರೆ 'ದಮ' ಎನಿಸಿಕೊಂಡು ಆಧ್ಯಾತ್ಮಿಕ ಸಾಧನವಾಗುತ್ತದೆ.

ಶಮ ಮತ್ತು ದಮಗಳು ಅನ್ಯೋನ್ಯ ಸಹಾಯಕಗಳಾಗಿರುವುದರಿಂದ, ಎರಡನ್ನೂ ಸಮಕಾಲದಲ್ಲಿಯೇ ಸಾಧಕನು ಅಭ್ಯಾಸ ಮಾಡಬೇಕು. ಇಲ್ಲಿ 'ಬಾಹ್ಯವೃತ್ತಿ' ಎಂದರೆ ಹೊರಗಿನ ವೃತ್ತಿ ಅಥವಾ ಇಂದ್ರಿಯಗಳ ಮೂಲಕ ಹೊರಗಿನ ವಿಷಯಗಳನ್ನು ತಿಳಿಯುವ ವೃತ್ತಿಗಳು. ಇಂದ್ರಿಯಗಳ ಕರ್ಮಗಳು ವೃತ್ತಿಗಳ ಮೂಲಕವೇ ಪ್ರಾರಂಭವಾಗುವುದರಿಂದ, ಇಂದ್ರಿಯಗಳ ನಿಯಮವನ್ನು ವಿವೇಕದಿಂದಲೇ ಮಾಡಬೇಕು. ಉದಾಹರಣೆಗೆ ತಿಂಗಳಿಗೆ ನಾಲ್ಕು ಸಿನೇಮಾ ಚಿತ್ರಗಳನ್ನು ನೋಡುವ ಅಭ್ಯಾಸವುಳ್ಳ ಕಣ್ಣನ್ನು ಕ್ರಮಕ್ರಮವಾಗಿ ನಿಯಮನ ಮಾಡುತ್ತಾ—ತಿಂಗಳಿಗೆ ಮೂರು ಚಿತ್ರಗಳು, ನಂತರ ತಿಂಗಳಿಗೆ ಎರಡು ಚಿತ್ರಗಳು, ಆಮೇಲೆ ಒಂದೇ ಚಿತ್ರ—ಹೀಗೆ ನೀತಿಯುಕ್ತ ಚಿತ್ರಗಳನ್ನು ಮಾತ್ರ ನೋಡುವುದು ಎಂಬ ನಿಯಮವನ್ನು ತಾನೇ ಆರೋಪಿಸಿಕೊಂಡು ಅನುಸರಿಸಬೇಕು. ಹೀಗೆ ಸಿನೇಮಾ ನೋಡಬೇಕೆಂಬ ವಾಸನೆಯನ್ನು ಖರ್ಚು ಮಾಡುವಾಗ ಶಮ ದಮಗಳಿರುವುದರಿಂದ ಹೊಸ ಹೊಸ ವಾಸನೆಗಳು ಹುಟ್ಟುವುದಿಲ್ಲ. ಈ ರೀತಿಯಾದ ಸಾಧನವನ್ನೂ ಉಳಿದ ಇಂದ್ರಿಯಗಳನ್ನೂ ಸಹ ನಿಯಂತ್ರಿಸಲು ಅಭ್ಯಾಸ ಮಾಡಬೇಕು. ಪೂಜೆ, ಬಟ್ಟೆ, ಆಹಾರ, ವಿಹಾರ ಇತ್ಯಾದಿಗಳಲ್ಲಿ ಅತಿರೇಕವನ್ನು ಬಿಡಬೇಕು. ಇದು ವಿವೇಕದಿಂದ ಕ್ರಮವಾಗಿ ನಿಯಂತ್ರಿಸಿದ್ದೇ ಆದರೆ ನಿಯಮನವು ಕಾಲಾಂತರದಲ್ಲಿ ಸ್ವಾಭಾವಿಕವಾಗುತ್ತದೆ. ಈ ನಿಯಮನವೆಂಬುದು ಬಾಹ್ಯವಾಗಿ ಉಪಚಾರದ ಮಾತಾಗಿ ಉಳಿಯಬಾರದು.

ಒಳಗಿನ ವಾಸನೆಗಳು ವೃದ್ಧಿಯಾಗಲು ಬಾಹ್ಯೇಂದ್ರಿಯಗಳ ಕರ್ಮಗಳೇ ಕಾರಣ. ಇಂದ್ರಿಯಗಳ ಉಪಯೋಗವನ್ನು ಅವಶ್ಯವಾದಷ್ಟು ಮಾತ್ರ ಮಾಡಬೇಕು. ಅಂದರೆ ಅವಶ್ಯವಾದ ಬಾಹ್ಯ ಜಗತ್ತಿನ ಸಂಬಂಧವನ್ನು ಕಡಿಮೆ ಮಾಡುತ್ತಾ ಬರಬೇಕು. ಇಂದ್ರಿಯಗಳಿಗೆ ಇನ್ನೂ ತೇಜಸ್ಸಿರುವಾಗಲೇ ವಿವೇಕ-ವೈರಾಗ್ಯಗಳಿಂದ ಅವುಗಳನ್ನು ನಿಯಮಿಸಿಕೊಳ್ಳಬೇಕು. ಇಂದ್ರಿಯಗಳ ಶಕ್ತಿಯು ಕುಂದಿದಮೇಲೆ ಬಾಹ್ಯ ಜಗತ್ತಿನ ಸಂಬಂಧ ಅನಿವಾರ್ಯವಾಗಿ ನಿಂತು ಹೋಗುವುದನ್ನು ಶಮ ಎನ್ನುವುದಿಲ್ಲ. ಈ ರೀತಿಯ ಇಂದ್ರಿಯ ನಿಷ್ಕ್ರಿಯತೆಯು ಸಾಧನೆಯ ದೃಷ್ಟಿಯಿಂದ ಉಪಯೋಗವಿಲ್ಲದ್ದು. ದೀಪದ ಬತ್ತಿಯನ್ನು ಸರಿಮಾಡಿ ದೀಪವು ಆರದಂತೆ ಹಾಗೂ ಧಗಧಗ ಉರಿಯದಂತೆ ನೋಡಿಕೊಳ್ಳುವ ಹಾಗೆಯೇ ಇಂದ್ರಿಯಗಳ ಉಪಯೋಗವನ್ನು ನಿಯಮನ ಮಾಡಿಕೊಳ್ಳಬೇಕು.
Sri Vidyabharathi Book Centre, Sringeri

CC-O. In Public Domain. Digitized by eGangotri

೭. ಉಪರತಿ ಮತ್ತು ತಿತಿಕ್ಷೆ

ವಿಷಯೇಭ್ಯಃ ಪರಾವೃತ್ತಿಃ ಪರಮೋಪರತಿರ್ಹಿ ಸಾ ।
ಸಹನಂ ಸರ್ವದುಃಖಾನಾಂ ತಿತಿಕ್ಷಾ ಸಾ ಶುಭಾ ಮತಾ ॥ ೭ ॥

ವಿಷಯೇಭ್ಯಃ=ವಿಷಯಗಳಿಂದ, **ಪರಾವೃತ್ತಿಃ**=(ಮನಸ್ಸನ್ನು) ಹಿಂದಕ್ಕೆ ಎಳೆದುಕೊಳ್ಳುವುದು (ಎಂಬ), **ಸಾ ಉಪರತಿಃ**=ಆ ಉಪರತಿಯೇ, **ಪರಮಃ ಹಿ**=ಉತ್ತಮವಾದುದಷ್ಟೆ, **ಸರ್ವದುಃಖಾನಾಂ**=ಎಲ್ಲಾ ದುಃಖಗಳನ್ನೂ, **ಸಹನಂ**=ಸಹಿಸಿಕೊಳ್ಳುವುದು (ಎಂಬ) **ಸಾ ತಿತಿಕ್ಷಾ**=ಆ ತಿತಿಕ್ಷೆಯೇ, **ಶುಭಾ**=ಶುಭವಾದದ್ದೆಂದು, **ಮತಾ**=ಹೇಳಲಟ್ಟಿದೆ.

ಶಮ-ದಮದಂತೆಯೇ ಉಪರತಿಯು ಒಂದು ಅಂತರಂಗ ಸಾಧನೆ. ಶಮವಾದರೋ ಅಂತಃಕರಣದಲ್ಲಿ ಸೂಕ್ಷ್ಮ ರೂಪದಲ್ಲಿರುವ ವಾಸನೆಗಳನ್ನು ಬ್ರಹ್ಮ ಚಿಂತನೆಯ ಮೂಲಕ ನಿರ್ಬೀಜ ಮಾಡುವ ಸಾಧನ. ಕೆಲವು ವಾಸನೆಗಳು ಮೊಳಕೆಯೊಡೆದು ಇಂದ್ರಿಯಗಳ ಮೂಲಕ ಕರ್ಮ ರೂಪದಿಂದ ವ್ಯಕ್ತವಾದದ್ದನ್ನು ವಿವೇಕದಿಂದ ನಿಯಮನ ಮಾಡುವುದೇ ದಮ. ಹೀಗೆ ಕರ್ಮರೂಪದಿಂದ ವ್ಯಕ್ತವಾಗದೇ ಇರುವ, ಆದರೆ ಈಗಾಗಲೇ ಚಟುವಟಿಕೆಗೊಂಡಿರುವ ಕೆಲವು ವಾಸನೆಗಳು ಮನಸ್ಸನ್ನು ಇಂದ್ರಿಯಗಳ ಮೂಲಕ ವಿಷಯಗಳ ಕಡೆಗೆ ಎಳೆದುಕೊಂಡು ಹೋಗುತ್ತವೆ. ಹೀಗೆ ವಿಷಯಗಳಲ್ಲಿ ನೆಟ್ಟಿರುವ ಮನಸ್ಸನ್ನು ಹಿಂತಿರುಗಿಸುವುದೇ ಉಪರತಿ. ಇದನ್ನೇ ಯೋಗಶಾಸ್ತ್ರದಲ್ಲಿ ಪ್ರತ್ಯಾಹಾರ ಎನ್ನುತ್ತಾರೆ. ಕೇವಲ ಭೌತಿಕವಾಗಿ ವಿಷಯಭೋಗವನ್ನು ಬಿಟ್ಟುಕೊಡುವುದು ಉಪರತಿಯಲ್ಲ. ಬಿರುಗಾಳಿಯು ನಾವೆಯನ್ನು ಸಿಕ್ಕಿದ ಕಡೆ ಎಳೆದುಕೊಂಡು ಹೋಗುವಾಗ, ನಾವಿಕನು ತನ್ನ ಗುರಿಯನ್ನು ಮುಟ್ಟಲು ದೃಢವಾದ ಪ್ರಯತ್ನದಿಂದ ನಾವೆಯನ್ನು ನಿಯಂತ್ರಿಸುವಂತೆ, ಪ್ರಬಲವಾದ ಇಂದ್ರಿಯಗಳು ಮನಸ್ಸನ್ನು ಇಂದ್ರಿಯಭೋಗದ ಕಡೆಗೆ ಎಳೆಯುತ್ತಿದ್ದಾಗ ಸಾಧಕನು ವಿವೇಕಯುಕ್ತ ಸ್ವಪ್ರಯತ್ನದಿಂದ ಮನಸ್ಸನ್ನು ನಿಯಂತ್ರಿಸಬೇಕು. ಇದೇ ಶ್ರೇಷ್ಠವಾದ ಉಪರತಿ.

ಜಗತ್ತಿನಲ್ಲಿ ವ್ಯವಹಾರ ಮಾಡುತ್ತಿರಲಿಕ್ಕಾಗಿ ನೋವು, ತಳಮಳ, ಆಘಾತಗಳ ಅನುಭವವು ಅನಿವಾರ್ಯ. ಅವುಗಳು ನಿನ್ನನ್ನು ಪ್ರವೇಶಿಸಿದ್ದರೆ ಅವುಗಳಿಗೆ ಬೆಲೆ ಕೊಡಬೇಡ. ಏಕೆಂದರೆ ಅವು ಅಪಾರ ಶಕ್ತಿಯಿಂದ ಕೂಡಿದ್ದು ಸ್ವಲ್ಪ ಅವಕಾಶ ಸಿಕ್ಕಿದರೂ ಸಾಕು, ನಿನ್ನ ಸರ್ವನಾಶವನ್ನು ಮಾಡಿಬಿಡುತ್ತದೆ. ಪ್ರಾರಬ್ಧದಿಂದ ಬಂದದ್ದನ್ನು ಅನುಭವಿಸಲೇಬೇಕು, ಅವುಗಳಿಂದ ಬಿಡುಗಡೆ ಇಲ್ಲ. ಆದ್ದರಿಂದ ಅವುಗಳನ್ನು ಅನುಭವಿಸುವಾಗ ಈಶ್ವರನ ಪ್ರಸಾದವೆಂಬ ಭಾವನೆಯನ್ನು ಮರೆಯದೆ ಸಹನೆಯಿಂದ ಅನುಭವಿಸು. ಬೇರೆಯವರಲ್ಲಿ ಹೇಳಿಕೊಂಡು ದುಃಖ ಪಡಬೇಡ. ಇದರಿಂದ ನಿನ್ನ ದುಃಖ, ಕಷ್ಟಗಳು ಕಡಿಮೆಯಾಗುವುದಿಲ್ಲ. ನಿನ್ನ ದುಃಖಕ್ಕೆ ಕಾರಣರಾದವರೆಂದು ನೀನು ತಿಳಿದುಕೊಂಡಿರುವವರ ವಿಚಾರವಾಗಿ ಮನಸ್ಸಿನಲ್ಲಿ ಕೂಡ ಪ್ರತೀಕಾರ ಬುದ್ಧಿಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಲವಲೇಶವೂ ಬರಬಾರದು. ಇದು ಈಶ್ವರ ಭಾವನೆಯಿಂದ ಮಾತ್ರ ಸಾಧ್ಯ. ಇಂತಹ ಅಂತರಂಗ ಭಾವನೆಯನ್ನೇ ಉತ್ತಮವಾದ ತಿತಿಕ್ಷೆ ಎನ್ನುತ್ತಾರೆ.

೮. ಶ್ರದ್ಧೆ ಮತ್ತು ಸಮಾಧಾನ

ನಿಗಮಾಚಾರ್ಯವಾಕ್ಯೇಷು ಭಕ್ತಿಃ ಶ್ರದ್ಧೇತಿ ವಿಶ್ರುತಾ ।
ಚಿತ್ತೈಕಾಗ್ರ್ಯಂ ತು ಸಲ್ಲಕ್ಷ್ಯೇ ಸಮಾಧಾನಮಿತಿ ಸ್ಮೃತಮ್ ॥ ೮ ॥

ನಿಗಮಾಚಾರ್ಯವಾಕ್ಯೇಷು=ಶಾಸ್ತ್ರ ಹಾಗೂ ಗುರುಗಳ ಉಪದೇಶಗಳಲ್ಲಿ, **ಭಕ್ತಿಃ**=(ಇರುವ)ಭಕ್ತಿಯು, **ಶ್ರದ್ಧಾ ಇತಿ**=ಶ್ರದ್ಧೆ ಎಂದು, **ವಿಶ್ರುತಾ**=ಪ್ರಸಿದ್ಧವಾಗಿರುತ್ತದೆ. **ಸತ್‌ಲಕ್ಷ್ಯೇ**=ಸತ್ ವಿಚಾರವೆಂಬ ಗುರಿಯಲ್ಲಿ, **ಚಿತ್ತ ಏಕಾಗ್ರ್ಯಂ ತು**=ಮನಸ್ಸನ್ನು ಏಕಾಗ್ರತೆಯಿಂದ ನಿಲ್ಲಿಸಿಕೊಳ್ಳುವುದೇ, **ಸಮಾಧಾನಂ ಇತಿ**=ಸಮಾಧಾನವೆಂದು **ಸ್ಮೃತಂ**=ಹೇಳಲ್ಪಡುತ್ತದೆ.

ಗುರು ಮತ್ತು ಶಾಸ್ತ್ರವಾಕ್ಯಗಳಲ್ಲಿ ಭಕ್ತಿ ಇಡುವುದೇ ಶ್ರದ್ಧೆ. ಗುರು ಕೊಟ್ಟ ವಾಕ್ಯದಲ್ಲಿ "ನನಗೆ ಈಗಾಗಲೇ ತಿಳಿದಿದೆ" ಎಂಬ ತಾತ್ಸಾರ ಬೇಡ. ಪೂರ್ವ ನಿರ್ಧಾರಿತ ಸೊಕ್ಕಿನ ಭಾವವನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕು. ಉಪದೇಶದಲ್ಲಿ ನಾನು ತಿಳಿಯಬೇಕಾದ್ದು ಇನ್ನೂ ಇದೆ, ಎಂಬ ಭಕ್ತಿಯಿಂದ ಸದಾ ತೆರೆದ ಮನಸ್ಸಿನಿಂದ ಕೇಳಬೇಕು. ಶ್ರವಣ ಮಾಡಬೇಕೆಂಬ ಉತ್ಕಟವಾದ ಇಚ್ಛೆ ಸ್ವಲ್ಪವೂ ಕಡಿಮೆಯಾಗಬಾರದು. ಉಪದೇಶವು ನನ್ನನ್ನು ಆತ್ಮಜ್ಞಾನದಲ್ಲಿ ಖಂಡಿತವಾಗಿ ನಿಲ್ಲಿಸುತ್ತದೆ ಎಂಬ ದೃಢ ವಿಶ್ವಾಸದಿಂದ ಶ್ರವಣಾದಿ ಸಾಧನಗಳನ್ನು ಪ್ರಾರಂಭಿಸಿದ ಸಾಧಕನನ್ನು ಅನುಭಾವದಲ್ಲಿ ನಿಲ್ಲಿಸುವುದೆ, ನಿಜವಾದ ಶ್ರದ್ಧ. ಇದು ಅಂಧಶ್ರದ್ಧೆಯಲ್ಲ. ಏಕೆಂದರೆ ಬೇರೆ ಮತಗಳ ಉಪದೇಶಗಳು ಹಾಗೂ ಕರ್ಮಕಾಂಡದ ವಿಧಿಗಳು ಅನುಭಾವದಲ್ಲಿ ಪರ್ಯವಸಾನವಾಗದೇ ಇರುವುದರಿಂದ ಅಂಧಶ್ರದ್ಧೆಯಲ್ಲೇ ನಿಂತಿರುತ್ತವೆ.

ಸಮಾಧಾನವೆಂಬುದು ಷಟ್ ಸಂಪತ್ತಿಗಳಲ್ಲಿ ಕೊನೆಯದಾಗಿದೆ. ಎಲ್ಲಿ ವೃತ್ತಿಗಳ ಘರ್ಷಣೆ ಇದೆಯೋ ಅದೇ ಅಸಮಧಾನ. ಅದೇ ಅಶಾಂತಿ, ತಳಮಳ. ವಿವೇಕದಿಂದ ವಿಚಾರಣೆ ಮಾಡಿದ್ದೇ ಆದರೆ ವೃತ್ತಿಗಳು ಕ್ರಮಕ್ರಮವಾಗಿ ಕಡಿಮೆಯಾಗಿ ಅಂತಃಕರಣವು ಸದ್ವಿಚಾರಕ್ಕೆ ಒಲಿಯುತ್ತದೆ. ಆಗ ಚಾಂಚಲ್ಯವಿಲ್ಲದೆ, ಏಕಾಗ್ರತೆಯಿಂದ ಒಂದೇ ಸಮನಾಗಿ ಸತ್ಸ್ವರೂಪವಾದ ಆತ್ಮವಿಚಾರದಲ್ಲಿ ತನ್ನ ಲಕ್ಷ್ಯವನ್ನು ನಿಲ್ಲಿಸುತ್ತದೆ. ಇದನ್ನೇ ಇಲ್ಲಿ ಸಮಾಧಾನ ಎಂದಿರುವುದು.

ಷಟ್ಸಂಪತ್ತಿಯುಳ್ಳ ಸಾಧಕನಲ್ಲಿ ಗುರುವಾಕ್ಯವು ಅಮೃತವರ್ಷಣೆ ಮಾಡುತ್ತದೆ. ಗುರು ಆಡಿದ ವಾಕ್ಯಗಳೆಲ್ಲಾ ಮಹಾವಾಕ್ಯಗಳಾಗುತ್ತವೆ. "ಚಿಂತಿಸಬೇಡ, ಚಿಂತಾರಹಿತವಾದದ್ದು ಆತ್ಮ ಮಾತ್ರ. ಏನೇನು ಚಿಂತಿಸುತ್ತೀಯೋ ಅವೆಲ್ಲಾ ಅನಾತ್ಮವೇ" ಎಂಬ ಉಪದೇಶ ವಾಕ್ಯವನ್ನು ಮನನ ಮಾಡಿ ಅದರಲ್ಲಿ ನಿಂತದ್ದೇ ಆದರೆ ಆತ್ಮಜ್ಞಾನ ನಿಶ್ಚಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಸ್ತ್ರ ಬಿಟ್ಟುಕೊಟ್ಟು ಹೇಳಿದ ಉಪದೇಶವು ಉಪದೇಶವಲ್ಲ. ಶಾಸ್ತ್ರ ಅಂದರೆ ಮಹಾ ವಾಕ್ಯ ಪ್ರತಿಪಾದನೆಯ ಸಂಪ್ರದಾಯ ಬದ್ಧ ಉಪದೇಶ ಮಾತ್ರ.

ಸಾಮಾನ್ಯ ಜನರು ಅನಿತ್ಯವಾದ ಪ್ರಾಪಂಚಿಕ ಸುಖವನ್ನು ಪಡೆಯಲು ಅನೇಕಾನೇಕ ಕಷ್ಟಗಳನ್ನು ಎದುರಿಸುತ್ತಾರೆ. ಅದೇ ಉತ್ಸಾಹ ಸಾಧಕನಿಗೆ ಷಟ್ಸಂಪತ್ತಿಯನ್ನು ಪಡೆಯುವುದರಲ್ಲಿರಬೇಕು. ಸಾಧಕನು ಪ್ರಾರಂಭದಲ್ಲಿ ಪ್ರಯತ್ನದಿಂದ ತನಗೆ ಇಷ್ಟವಾದ ಯಾವುದಾದರೊಂದು ಸಂಪತ್ತನ್ನು ಅಳವಡಿಸಿಕೊಂಡು, ಗುರು ಉಪದೇಶದ ಹಿನ್ನಲೆಯಲ್ಲಿ ದೃಢಪಡಿಸಿಕೊಂಡಾಗ ಅದು ಅವನ ಸ್ವಾಭಾವಿಕ ಸ್ಥಿತಿಯಾಗುತ್ತದೆ. ಇಂತಹ ಅತ್ಯಂತ ಉನ್ನತ ಮಟ್ಟದ ಸಂಪತ್ತಿನ ಸ್ಥಿತಿಯಲ್ಲಿಯೇ ಜ್ಞಾನ ಬೆಳಗುವುದು.

೯. ಮುಮುಕ್ಷುತ್ವ

ಸಂಸಾರ ಬದ್ಧ ನಿರ್ಮುಕ್ತಿಃ ಕಥಂ ಮೇ ಸ್ಯಾತ್ ಕದಾ ವಿಧೇ ।
ಇತಿ ಯಾ ಸುದೃಢಾ ಬುದ್ಧಿರ್ವಕ್ತವ್ಯಾ ಸಾ ಮುಮುಕ್ಷುತಾ ॥ ೯ ॥

ವಿಧೇ=ಹೇ ಅದೃಷ್ಟವೇ! **ಸಂಸಾರ ಬಂಧನಿರ್ಮುಕ್ತಿಃ**=ಈ ಸಂಸಾರ ಬಂಧನದಿಂದ ಬಿಡುಗಡೆಯು, **ಮೇ**=ನನಗೆ, **ಕಥಂ**=ಹೇಗೆ, **ಕದಾ**=ಯಾವಾಗ, **ಸ್ಯಾತ್**=ಆದೀತು, **ಇತಿ**=ಹೀಗೆಂಬ, **ಯಾ**=ಯಾವ, **ಸುದೃಢಬುದ್ಧಿಃ**=(ಹಂಬಲಿಸುವ) ನಿಶ್ಚಯವಾದ ಬುದ್ಧಿ ಇದೆಯೋ, **ಸಾ**=ಅದನ್ನು, **ಮುಮುಕ್ಷುತಾ**=ಮುಮುಕ್ಷುತೆ ಎಂದು, **ವ್ಯಕ್ತವ್ಯಾ**=ಹೇಳಲ್ಪಡುತ್ತದೆ.

"ಅಯ್ಯೋ ಅದೃಷ್ಟವೇ! ಈ ಸಂಸಾರ ಬಂಧನದಿಂದ ನನಗೆ ಹೇಗೆ, ಯಾವಾಗ ಬಿಡುಗಡೆಯಾದೀತು ?" ಹೀಗೆಂದು ಹಂಬಲಿಸುವ ದೃಢವಾದ ಬುದ್ಧಿಯನ್ನು ಮುಮುಕ್ಷುತೆ ಎನ್ನುತ್ತಾರೆ.

ಇದುವರೆಗೆ ವೈರಾಗ್ಯ, ವಿವೇಕ, ಶಮಾದಿ ಷಟ್ಸಂಪತ್ತಿ ಎಂಬ ಮೂರು ಸಾಧನಗಳನ್ನು ತಿಳಿಸಿದ್ದಾಯಿತು. ಈಗ ಮುಮುಕ್ಷತೆ ಎಂಬ ನಾಲ್ಕನೇ ಸಾಧನವನ್ನು ವಿವರಿಸುತ್ತಿದ್ದಾರೆ—

"ಸಂಸಾರಬಂಧನ ಇದೆ" ಎಂಬ ಅರಿವೇ ಅನೇಕರಿಗೆ ಇರುವುದಿಲ್ಲ. ಅವರಿಗೆ ತಾವಿರುವ ಸ್ಥಿತಿಯು ಕಷ್ಟವೆಂದೂ ತೋರುವುದಿಲ್ಲ. ಅವರ ಮನಸ್ಸು ತಳಮಳಗೊಳ್ಳುವುದೂ ಇಲ್ಲ. ಆದ್ದರಿಂದ ವಿಚಾರ ಮಾಡುವುದಕ್ಕೂ ಪ್ರಯತ್ನಿಸುವುದಿಲ್ಲ. ಆದರೆ ಸುಕೃತದಿಂದ ಶಾಸ್ತ್ರವನ್ನು ಕೇಳಿ ಅದರಲ್ಲಿ ಶ್ರದ್ಧೆ ಹುಟ್ಟಿದ್ದೇ ಆದರೆ ಆಗ ತಾನಿರುವುದು ಬಂಧನ ಸ್ಥಿತಿ. ಅದಕ್ಕಿಂತ ಉತ್ತಮವಾದ ಆನಂದಕರವಾದ ಸ್ಥಿತಿ ಒಂದಿದೆ" ಎಂದು ತಿಳಿದು ನಂಬುತ್ತಾನೆ. ಈ ನಂಬಿಕೆಯು ದೃಢವಾದಾಗ ಅವನು ಸಂಸಾರ ಬಂಧನವ ಕಹಿಯನ್ನು ತಡೆಯಲಾರದೆ ಅದರಿಂದ ಬಿಡುಗಡೆಯಾಗಬೇಕೆಂದು ಕ್ಷಣಕ್ಷಣಕ್ಕೂ ಚಡಪಡಿಸುತ್ತಾನೆ. ಉರಿಯುವ ಮನೆಯಲ್ಲಿದ್ದು ತಲೆಯೆಲ್ಲಾ ಹತ್ತಿಕೊಂಡಿರುವವನು ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri
ಕ್ಷಣವೂ ಕಾಲ ವಿಲಂಬವಿಲ್ಲದೆ ನೀರು ಎಲ್ಲಿ ದೊರಕೀತು ಎಂದು ಎಷ್ಟು ತೀವ್ರವಾಗಿ ಓಡುತ್ತಾನೋ ಅಷ್ಟೇ ತೀವ್ರವಾಗಿ ಸಂಸಾರ ಬಂಧನದಿಂದ ಬಿಡುಗಡೆಗೆ ಚಡಪಡಿಸುವುದೇ ಮುಮುಕ್ಷುತೆ. ಶಾಸ್ತ್ರಾಚಾರ್ಯರ ಉಪದೇಶದಂತೆ ಮೋಕ್ಷವೆಂಬ ಒಂದು ಉತ್ತಮ ಸ್ಥಿತಿ ಇದೆ ಎಂದು ಕೇವಲ ನಂಬುವುದು ಮಾತ್ರವೇ ಶ್ರದ್ಧೆ ಎನಿಸಿಕೊಳ್ಳುತ್ತದೆ. ಆ ನಂಬಿಕೆಯ ಆಧಾರದ ಮೇಲೆ ಮೋಕ್ಷವನ್ನು ಪಡೆಯಲೇ ಬೇಕೆಂಬ ತೀವ್ರ ಇಚ್ಛೆಯನ್ನು ಪಡೆದಿರುವುದೇ ಮುಮುಕ್ಷುತೆ.

ಮುಂದಿನ ಎರಡು ಶ್ಲೋಕಗಳಲ್ಲಿ ಆತ್ಮಜ್ಞಾನಕ್ಕೆ ವಿಚಾರವು ಎಷ್ಟು ಆವಶ್ಯಕವೆಂಬುದನ್ನು ಒಂದು ದೃಷ್ಟಾಂತದ ಸಹಿತ ತಿಳಿಸಿದ್ದಾರೆ—

೧೦. ವಿಚಾರ

ಉಕ್ತಸಾಧನಯುಕ್ತೇನ ವಿಚಾರಃ ಪುರುಷೇಣ ಹಿ ।
ಕರ್ತವ್ಯೋ ಜ್ಞಾನಸಿದ್ಧ್ಯರ್ಥಮಾತ್ಮನಃ ಶುಭಮಿಚ್ಛತಾ ॥ ೧೦ ॥

ನೋತ್ಪದ್ಯತೇ ವಿನಾ ಜ್ಞಾನಂ ವಿಚಾರೇಣಾನ್ಯಸಾಧನೈಃ ।
ಯಥಾ ಪದಾರ್ಥಭಾನಂ ಹಿ ಪ್ರಕಾಶೇನ ವಿನಾ ಕ್ವಚಿತ್ ॥ ೧೧ ॥

ಆತ್ಮನಃ ಶುಭಮಿಚ್ಛತಾ=ತನಗೆ ಶ್ರೇಯಸ್ಸು ಬೇಕೆಂದು ಬಯಸುವ (ಮುಮುಕ್ಷುವಾದ) **ಪುರುಷೇಣ**=ಮಾನವನಿಂದ, **ಉಕ್ತ ಸಾಧನ ಯುಕ್ತೇನ**=ಹಿಂದೆ ಹೇಳಲ್ಪಟ್ಟ ಸಾಧನಗಳಿಂದ ಕೂಡಿ, **ಜ್ಞಾನ ಸಿದ್ಧ್ಯರ್ಥಂ**=ಜ್ಞಾನೋತ್ಪತ್ತಿಗಾಗಿ, **ವಿಚಾರಃ ಹಿ**=ವಿಚಾರವನ್ನೇ, **ಕರ್ತವ್ಯಃ**=ಮಾಡಬೇಕು.

ಯಥಾ=ಹೇಗೆ, **ಪ್ರಕಾಶೇನ ವಿನಾ**=ಬೆಳಕು ಇಲ್ಲದೆ, **ಪದಾರ್ಥಭಾನಂ**=ಪದಾರ್ಥಗಳ ತೋರುವಿಕೆಯು **ಕ್ವಚಿತ್**=ಎಂದೆಂದಿಗೂ, **(ನ) ಹಿ**=ಆಗಲಾರದೋ, **(ತಥಾ)**=ಹಾಗೆಯೇ, **ವಿಚಾರೇಣ ವಿನಾ**=ವಿಚಾರವನ್ನು ಹೊರತುಪಡಿಸಿದ, **ಅನ್ಯ ಸಾಧನೈಃ**=ಬೇರೆ ಸಾಧನೆಗಳಿಂದ, **ಜ್ಞಾನಂ**=ಜ್ಞಾನವು. **(ಕ್ವಚಿತ್)**=ಎಂದೆಂದಿಗೂ **ನ ಉತ್ಪದ್ಯತೇ**=ಉಂಟಾಗಲಾರದು.

ತನಗೆ ಶ್ರೇಯಸ್ಸಾಗಬೇಕೆಂದು ಬಯಸುವ ಮುಮುಕ್ಷುವಾದ ಮಾನವನು ವಿವೇಕ, ವೈರಾಗ್ಯ, ಶಮಾದಿ, ಷಟ್ಸಂಪತ್ತಿ ಸಾಧನೆಗಳಿಂದ ಕೂಡಿ, ಜ್ಞಾನವನ್ನು ಪಡೆಯುವುದಕ್ಕೆ ವಿಚಾರವನ್ನೇ ಮಾಡಬೇಕು.

ಹೇಗೆ ಬೆಳಕಿಲ್ಲದೆ ಪದಾರ್ಥಗಳು ತೋರಲಾರವೋ, ಹಾಗೆಯೆ ವಿಚಾರವನ್ನು ಬಿಟ್ಟುಕೊಟ್ಟ ಬೇರೆ ಯಾವ ಸಾಧನಗಳಿಂದಲೂ ಜ್ಞಾನವು ಎಂದೆಂದಿಗೂ ಉಂಟಾಗಲಾರದು.

ಒಂದು ಲೌಕಿಕ ವಿಷಯದಲ್ಲಿ ಜ್ಞಾನ ಉಂಟಾಗಬೇಕಾದರೆ, ಆದರ ವಿಷಯವಾಗಿ ತಿಳಿದವರು ಹೇಳಿದುದನ್ನು ಕೇಳಿ, ಆದರ ವಿಷಯವಾಗಿ ಪುಸ್ತಕಗಳನ್ನೆಲ್ಲಾ ಓದಿ ತಿಳಿದು
Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು, ನಂತರ ಅದೇ ವಿಷಯವನ್ನು ಮನಸ್ಸಿನಲ್ಲಿ ಮತ್ತೆ ಮತ್ತೆ ಮೆಲುಕು ಹಾಕುತ್ತಾ ಯೋಚಿಸುವುದನ್ನೇ ವಿಚಾರವೆನ್ನುತ್ತಾರೆ. ಇಲ್ಲಿ ಶ್ರವಣ ಮಾಡಿದ ಶಾಸ್ತ್ರೋಪದೇಶವನ್ನು ಅನುಭವ ಹಾಗೂ ಯುಕ್ತಿಗಳ ಆಧಾರದಿಂದ ಮತ್ತೆ ಮತ್ತೆ ಮನನ ಮಾಡುವುದನ್ನೇ ವಿಚಾರ ಎಂದಿದ್ದಾರೆ. ವೈರಾಗ್ಯಾದಿ ಸಾಧನಗಳು ಜ್ಞಾನಕ್ಕೆ ಪರಂಪರೆಯ ಸಾಧನಗಳು. ಈಶ್ವರಾರ್ಪಣ ಕರ್ಮದಿಂದ ಅಂದರೆ ನಮ್ಮ ಪಾಲಿಗೆ ಬಂದ ಕರ್ಮಗಳನ್ನು ಸಂಗರಹಿತವಾಗಿಯೂ, ಫಲಾಪೇಕ್ಷೆ ಇಲ್ಲದೆಯೂ ಮಾಡಿದ್ದೇ ಆದರೆ ಚಿತ್ತಶುದ್ಧಿಯಾಗುವುದು. ಇಂತಹ ಪರಿಪಕ್ವ ಅಂತಃಕರಣದಲ್ಲಿ ವೈರಾಗ್ಯಾದಿ ಸಾಧನಗಳು ಅರಳಿ ಸಂಸ್ಕಾರವನ್ನುಂಟು ಮಾಡುತ್ತವೆ. ಇಂತಹ ಸಂಸ್ಕೃತ ಅಂತಃಕರಣದಲ್ಲಿ ಮಾತ್ರ ಶ್ರವಣ ಮಾಡಿದ್ದನ್ನು ಅನುಭವ ಹಾಗೂ ಯುಕ್ತಿಗಳಿಂದ ಪರೀಕ್ಷಿಸಿ ಮನನ ಮಾಡಿದಾಗ ಆತ್ಮ-ಜ್ಞಾನವು ತಾನೇ ತಾನಾಗಿ ಬೆಳಗುತ್ತದೆ. ಈ ರೀತಿಯಾಗಿ ವಿಚಾರ ಮಾಡುವುದೇ ಅವಶ್ಯವಾದ ಹಾಗೂ ಸಾಕ್ಷಾತ್ತಾದ ಸಾಧನ.

ಬಂಧನದಿಂದ ಬಿಡುಗಡೆಯಾಗಬೇಕೆಂಬ ಇಚ್ಛೆಯಾದದ್ದೇ ತಡ, ವಿಚಾರ ಪ್ರಾರಂಭವಾಗುತ್ತದೆ. ವಿಚಾರವಿಲ್ಲದಾಗ ಅನಾತ್ಮ ಹಾಗೂ ಪ್ರಸಂಗಗಳಲ್ಲಿ ತನ್ಮಯತೆ ಬಂದು ದುಃಖಕ್ಕೆ ಸಿಕ್ಕಿಕೊಳ್ಳುತ್ತೇವೆ. ಆ ವಿಚಾರವೇ ಬಂಧನ. ಯಾವುದು ನಾನು ಯಾವುದು ನಾನಲ್ಲ ಎಂಬುದನ್ನು ವಿಚಾರ ಮಾಡಬೇಕಾಗಿದೆ. "ಇದಂ ಇದಂ" ಎಂದು ಗುರುತಿಸಲ್ಪಡುತ್ತಿರುವ ಈ ಜಗತ್ತು ಅನೇಕಾನೇಕ ಬದಲಾವಣೆಗಳಿಗೆ ಒಳಗಾಗುತ್ತಿರುವುದನ್ನು ಗುರುತಿಸುತ್ತಿರುವ "ಅಹಂ" ನಾನು ಬದಲಾಗಬಾರದು. ಆತ್ಮ-ಜ್ಞಾನವು ಹುಟ್ಟುವುದೂ ಅಲ್ಲ, ಹೊರಗಿನಿಂದ ಬರುವುದೂ ಅಲ್ಲ. ಇದರ ಪ್ರಾಪ್ತಿಗೆ ಅವಕಾಶವೇ ಇಲ್ಲ. ಸ್ವಯಂಸಿದ್ಧನಾದ ಆತ್ಮನನ್ನು ಗುರುತಿಸಬೇಕಾಗಿದೆ. ಕತ್ತಲೆ ಕೋಣೆಯಲ್ಲಿನ ವಸ್ತುಗಳನ್ನು ಗುರುತಿಸಲು ಬೆಳಕು ಹೇಗೆ ಅತ್ಯಂತ ಅವಶ್ಯವೋ ಹಾಗೆಯೇ ಸುಸಂಸ್ಕೃತವಾದ ಅಂತಃಕರಣದಲ್ಲಿ ಆತ್ಮನನ್ನು ಗುರುತಿಸಲು ಜ್ಞಾನವಿಚಾರವೆಂಬ ಬೆಳಕು ಬೇಕೇ ಬೇಕು.

ಕೋಽಹಂ, ಕಥಮಿದಂ ಜಾತಂ ಕೋ ವಾ ಕರ್ತಾಽಸ್ಯ ವಿದ್ಯತೇ ।
ಉಪಾದಾನಂ ಕಿಮಸ್ತೀಹ ವಿಚಾರಃ ಸೋಽಯಮೀದೃಶಃ ॥ ೧೨ ॥

ಕೋಽಹಂ=ನಾನು ಯಾರು ? **ಇದಂ**=ಈ ಜಗತ್ತು, **ಕಥಂ ಜಾತಂ ?**= ಹೇಗೆ ಉಂಟಾಯಿತು ? **ಅಸ್ಯ**=ಇದರ, **ಕರ್ತಾ**=ಕರ್ತೃವು, **ಕೋವೈ ವಿದ್ಯತೇ**= ಯಾರು ಆಗಿರಬೇಕು ? ಉಪಾದಾನಂ (ಇದಕ್ಕೆ) ಉಪಾದಾನ ಕಾರಣವು. **ಕಿಂ ಅಸ್ತಿ** = ಏನು ಇದ್ದೀತು? **ಸಃ ವಿಚಾರಃ ಈ ದೃಶಃ ಅಯಂ ಇಹ**=ಆ ವಿಚಾರವೇ ಈ ರೀತಿಯಾಗಿ ಇಲ್ಲಿ ಹೇಳಿರುವುದು.

ನಾನು ಯಾರು? ಈ ಜಗತ್ತು ಹೇಗೆ ಉಂಟಾಯಿತು? ಇದರ ಕರ್ತೃವು ಯಾರಿದ್ದಿರಬಹುದು ? ಅದಕ್ಕೆ ಉಪಾದಾನ ಕಾರಣವು ಏನು ? ಹೀಗೆಂದು ಆಲೋಚಿಸುವುದೇ (ಹಿಂದಿನ ಶ್ಲೋಕದಲ್ಲಿ ಹೇಳಿದ) ವಿಚಾರ ಎನಿಸಿಕೊಳ್ಳುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನಕ್ಕಾಗಿ ಬೇಕಾದ ವಿಚಾರಕ್ರಮ ಹೇಗಿರಬೇಕು ಎಂಬುದನ್ನು ಈ ಶ್ಲೋಕದಲ್ಲಿ ಪ್ರಶ್ನೆಯ ರೂಪದಲ್ಲಿಯೂ, ಮುಂದಿನ ನಾಲ್ಕು ಶ್ಲೋಕಗಳಲ್ಲಿ ಆ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿಯೂ ವಿವರವಾಗಿ ಕೊಟ್ಟಿರುತ್ತಾರೆ.

ನಾನು ಯಾರು ಎಂದು ಇದುವರೆಗೆ ಯಾವ ಪೂರ್ವ ನಿರ್ಧಾರಿತ ಅಭಿಪ್ರಾಯವಿದೆಯೋ ಅದು ಆ ವಿಚಾರದ ಪರಿಣಾಮ. ದೇಹ, ಮನಸ್ಸು, ಬುದ್ಧಿ, ಇಂದ್ರಿಯ, ಪ್ರಾಣ, ಇವೆಲ್ಲದರಲ್ಲಿಯೂ ಬೇರೆ ಬೇರೆ ಕಾಲದಲ್ಲಿ 'ನಾನು ನಾನು' ಎಂದು ಹೇಳಿಕೊಂಡು ವ್ಯವಹಾರ ಮಾಡುತ್ತೇನೆ. ಹೀಗೆ 'ನಾನು ನಾನು' ಎಂಬ ಅರಿವು ಬೇರೆ ಬೇರೆ ಸಂದರ್ಭದಲ್ಲಿ, ಬೇರೆ ಬೇರೆ ವಸ್ತುಗಳಲ್ಲಿ ನನಗೆ ಆಗುತ್ತಿರುವುದರಿಂದ, ನಾನು ಎಂಬವಸ್ತು ಯಾವುದು ನನಗೆ ಸರಿಯಾಗಿ ತಿಳಿಯದೆ ಹೋಗಿದೆ. ನಾನು ನೋಡುತ್ತಿರುವ ಈ ವೈವಿಧ್ಯದಿಂದ ಕೂಡಿದ ಜಗತ್ತನ್ನು ಯಾರು ಮಾಡಿದರು ? ಯಾವುದರಿಂದ ಮಾಡಿದರು ? ಎಂಬ ಪ್ರಶ್ನೆಯ ವಿಚಾರವಾಗಿಯೂ ಆಲೋಚನೆಮಾಡಬೇಕು. ಏಕೆಂದರೆ ನಾನು ನಾನು ಎಂದು ದೇಹಾದಿಗಳಲ್ಲಿ ಬದಲಾಯಿಸುತ್ತಾ ಈ ಜಗತ್ತಿನೊಡನೆ ವ್ಯವಹಾರ ಮಾಡಿದಾಗ ನನಗೆ ಸುಖ ದುಃಖಗಳು ಉಂಟಾಗುತ್ತವೆ. ಅದಕ್ಕೋಸ್ಕರ ನಾನು ಜಗತ್ತಿನ ವಿಚಾರವನ್ನೂ ಸಹ ವಿಚಾರ ಮಾಡಿ ತಿಳಿಯಬೇಕಾಗಿದೆ.

ನಾಹಂ ಭೂತಗಣೋ ದೇಹೋ ನಾಹಂ ಚಾಕ್ಷಗಣಸ್ತಥಾ।
ಏತದ್ವಿಲಕ್ಷಣಃ ಕಶ್ಚಿದ್ವಿಚಾರಃ ಸೋಽಯಮೀದೃಶಃ ॥ ೧೩ ॥

ಅಹಂ=ನಾನು, **ಭೂತಗಣಃ**=ಭೂತಗಳ ಗುಂಪಾದ, **ದೇಹಃ ನ**=ದೇಹವು ಅಲ್ಲ, **ತಥಾ**=ಹಾಗೆಯೇ **ಅಕ್ಷಗಣಃ ಚ**=ಇಂದ್ರಿಯ ಸಮೂಹವೂ, **ಅಹಂ ನ** ನಾನಲ್ಲ. **ಏತತ್**=ಇವುಗಳಿಗಿಂತ, **ವಿಲಕ್ಷಣಃ**=ಬೇರೆಯಾದ, **ಕಶ್ಚಿತ್**=ಯಾವನೋ ಒಬ್ಬನು **(ಅಸ್ಮಿ)**=ಆಗಿರಬೇಕು, **ವಿಚಾರಃ ಸಃ ಅಯಮೀದೃಶಃ**=ಈ ರೀತಿಯಾಗಿ ಆಲೋಚಿಸುವುದೇ ವಿಚಾರವು.

ನಾನು ಪಂಚಭೂತಗಳ ಸಂಘಾತವಾದ ಸ್ಥೂಲ ದೇಹವಲ್ಲ. ಇದರಂತೆಯೇ ಇಂದ್ರಿಯ ಸಮೂಹವೂ ಅಲ್ಲ. ಇವುಗಳಿಗಿಂತ ಬೇರೆಯಾಗಿರುವ ಯಾವನೋ ಒಬ್ಬನಾಗಿರಬೇಕು. ಹೀಗೆ ಆಲೋಚಿಸುವುದೇ ವಿಚಾರವು.

ಭೂತಗಣ ಎಂದರೆ ಆಕಾಶ, ವಾಯು, ಅಗ್ನಿ, ನೀರು ಹಾಗೂ ಪೃಥ್ವಿ ಎಂಬ ಪಂಚಭೂತಗಳು ಸ್ವಲ್ಪ ವಿಚಾರ ಮಾಡುವುದರಿಂದ ನಮಗೆ ತಿಳಿದು ಬರುವುದೇನೆಂದರೆ ಈ ನಮ್ಮ ದೇಹವು ಪಂಚಭೂತಗಳಿಂದ ಆದದ್ದು. ಪಂಚಭೂತಗಳ ಬೇರೆ ರೂಪವಾದ ಸಸ್ಯ ಹಾಗೂ ಪ್ರಾಣಿಗಳನ್ನು ತಿಂದು, ಬೆಳೆದು, ಸತ್ತಮೇಲೆ ಪಂಚಭೂತಗಳಲ್ಲಿಯೇ ಒಂದಾಗಿ ಹೋಗುತ್ತದೆ. ಪಂಚಭೂತಗಳಲ್ಲಿರುವ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಗುಣಗಳನ್ನು ನಾವು ದೇಹದಲ್ಲಿಯೂ ಕಾಣುತ್ತೇವೆ. ಆದ್ದರಿಂದ ಈ ದೇಹವು ಈ ಪಂಚಭೂತಗಳ ಸಂಘಾತರೂಪ. ಈ ದೇಹವು ಬಾಲ್ಯಾದಿ ವಿಕಾರಗಳನ್ನು ಪಡೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಬದಲಾಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ದೇಹವು ಎಷ್ಟೇ ಬದಲಾದರೂ "ನಾನು ಬದಲಾಗುತ್ತಿದ್ದೇನೆ" ಎಂದು ಯಾರಿಗೂ ಅನ್ನಿಸುವುದಿಲ್ಲ. ಆದ್ದರಿಂದ ನಾನು ಬದಲಾಗದೇ ಇರುವ, ಈ ದೇಹಕ್ಕಿಂತ ಬೇರೆಯೇ ಇರಬೇಕು.

ಅಕ್ಷಗಣಃ ಎಂದರೆ ಇಂದ್ರಿಯ ಸಮೂಹ. ಐದು ಜ್ಞಾನೇಂದ್ರಿಯಗಳೂ ಹಾಗೂ ಐದು ಕರ್ಮೇಂದ್ರಿಯಗಳೂ ಇದರಲ್ಲಿ ಸೇರಿವೆ. ಆಹಾರವನ್ನು ತೆಗೆದುಕೊಳ್ಳದಿದ್ದರೆ ಇಂದ್ರಿಯಗಳು ಬಲಹೀನವಾಗುವುದು. ಒಳ್ಳೆಯ ಆಹಾರವನ್ನು ತೆಗೆದುಕೊಂಡಾಗ ಇಂದ್ರಿಯಗಳು ಚುರುಕಾಗಿರುವುದು ಎಲ್ಲರ ಅನುಭವದಲ್ಲಿ ಇದೆ. ಆಹಾರವಾದರೋ ಪಂಚಭೂತಗಳ ಒಂದು ರೂಪ. ಆದ್ದರಿಂದ ಇಂದ್ರಿಯಗಳೂ ಸಹ ಈ ಪಂಚಭೂತಗಳ ಸಾರವೇ ಆಗಿರುತ್ತದೆ. ಪಂಚಭೂತಗಳು ನಾನಲ್ಲವಾದ್ದರಿಂದ ಇಂದ್ರಿಯಗಳೂ ನಾನಲ್ಲ.

ನಾವು ದೇಹವನ್ನೂ ನೋಡುತ್ತಿದ್ದೇವೆ, ಇಂದ್ರಿಯಗಳನ್ನೂ ನೋಡುತ್ತಿದ್ದೇವೆ. ಆದ್ದರಿಂದ ನಾನು ದೇಹೇಂದ್ರಿಯಗಳಲ್ಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಗುಣಗಳಿವೆ. ಆತ್ಮನಲ್ಲಿ ಈ ಗುಣಗಳಿದ್ದಿದ್ದ ಪಕ್ಷದಲ್ಲಿ ಅವುಗಳನ್ನು ಗುರುತಿಸಲು ಆಗುತ್ತಿರಲಿಲ್ಲ. ಆದ್ದರಿಂದ ಆತ್ಮನು ದೇಹೇಂದ್ರಿಯಗಳಿಂದ ವಿಲಕ್ಷಣನಾಗಿ ಯಾವ ಗುಣಗಳೂ ಇಲ್ಲದವನು. ಹೀಗೆಂದು ವಿಚಾರ ಮಾಡುವುದೇ ಆತ್ಮ ವಸ್ತುವಿನ ವಿಚಾರವಾಯಿತು.

ಅಜ್ಞಾನ ಪ್ರಭವಂ ಸರ್ವಂ ಜ್ಞಾನೇನ ಪ್ರವಿಲೀಯತೇ ।
ಸಂಕಲ್ಪೋ ವಿವಿಧಃ ಕರ್ತಾ ವಿಚಾರಃ ಸೋಽಯಮೀದೃಶಃ ॥ ೧೪ ॥

ಸರ್ವಂ=ಎಲ್ಲವೂ, **ಅಜ್ಞಾನ ಪ್ರಭವಂ**=ಅಜ್ಞಾನದಿಂದ ಹುಟ್ಟಿರುವುದು, **ಜ್ಞಾನೇನ**=ಜ್ಞಾನ ದೃಷ್ಟಿಯಿಂದ, **ಪ್ರವಿಲೀಯತೇ**=ಇಲ್ಲವಾಗಬಲ್ಲದು, **ವಿವಿಧಃ**=ಬಗೆಬಗೆಯ, **ಸಂಕಲ್ಪಃ**=ಸಂಕಲ್ಪವೇ, **ಕರ್ತಾ ಕರ್ತೃ, ಅಯಂ ಈದೃಶಃ ಸಃ ವಿಚಾರಃ**=ಈ ರೀತಿಯಾಗಿ ಯೋಚಿಸುವುದೇ ಆ ವಿಚಾರವು.

ಎಲ್ಲವೂ ಅಜ್ಞಾನದಿಂದ ಹುಟ್ಟಿರುವುವು. (ಆದ್ದರಿಂದ) ಜ್ಞಾನದಿಂದ ಮಾತ್ರವೇ ಇಲ್ಲವಾಗಬಲ್ಲದು. ಬಗೆಬಗೆಯ ಸಂಕಲ್ಪವೇ ಕರ್ತೃ. ಹೀಗೆಂದು ಯೋಚಿಸುವುದೇ ವಿಚಾರವು.

ಹನ್ನೆರಡನೆಯ ಶ್ಲೋಕದಲ್ಲಿನ "ಈ ಜಗತ್ತು ಹೇಗೆ ಹುಟ್ಟಿತು? ಅದರ ಕರ್ತೃ ಯಾರು?" ಎಂಬ ಪ್ರಶ್ನೆಗೆ ಈಗ ಉತ್ತರವನ್ನು ಹೇಳುತ್ತಿದ್ದಾರೆ.

ನಾನು ಯಾರು ಎಂಬ ನಿಜವಾದ ಅರಿವು ಇಲ್ಲವಾದ ಕಾರಣ, ಆತ್ಮ–ಅನಾತ್ಮಗಳನ್ನು ಸರಿಯಾಗಿ ವಿಂಗಡಿಸಿ ತಿಳಿದುಕೊಳ್ಳಲಾರದೆ, ಒಂದರಲ್ಲಿ ಮತ್ತೊಂದನ್ನು ಬೆರಕೆ ಮಾಡಿ ತಿಳಿದುಕೊಳ್ಳುವುದು, ಅದಕ್ಕೆ ಅನುಗುಣವಾಗಿ ವ್ಯವಹಾರ ಮಾಡುವುದು ನಮ್ಮ ಸ್ವಭಾವವಾಗಿದೆ. ಈ ರೀತಿಯಾದ ಬೆರಕೆಯು ತಪ್ಪು ತಿಳಿವಳಿಕೆಯನ್ನೇ

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದಾಂತದಲ್ಲಿ ಅಜ್ಞಾನವೆಂದು ಕರೆಯುತ್ತಾರೆ. "ನಾನು ಯಾರು" ಎಂಬ ನಿಜವಾದ ಅರಿವು ಆದಾಗ ಜಗತ್ತಿನಲ್ಲಿನ ಸತ್ಯತ್ವ ಬುದ್ಧಿಯು ಹೋಗಿಬಿಡುತ್ತದೆ. ಅದು ತೋರಿಕೆ ಮಾತ್ರ ಎಂಬ ನಿಶ್ಚಯವಾಗುತ್ತದೆ. ಹೀಗೆ ಜ್ಞಾನದಿಂದ ಮಾತ್ರವೇ ತನ್ನ ಇರುವಿಕೆಯ ಸತ್ಯತ್ವವನ್ನು ಕಳೆದುಕೊಳ್ಳುವುದನ್ನೇ ಇಲ್ಲಿ ಪ್ರವಿಲೀಯತೆ ಎಂದಿದ್ದಾರೆ. ಹೀಗೆ ಜ್ಞಾನದಿಂದ ಇಲ್ಲವಾಗುವ ಜಗತ್ತು ಅಜ್ಞಾನದಿಂದಲೇ ಆಗಿದೆ ಎಂದು ವೇದಾಂತವು ಸಿದ್ಧಪಡಿಸುತ್ತದೆ. ಈ ಅಜ್ಞಾನದಿಂದ ಪ್ರಭಾವಿತರಾದ ಜನರು ನಾನಾ ರೀತಿಯಾಗಿ ಜಗತ್ತಿನ ಸೃಷ್ಟಿಯನ್ನು ವಿವರಿಸಿದರು. ತಾರ್ಕಿಕರು ಪರಮಾಣು ಸಂಯೋಗದಿಂದ ಆಯಿತೆಂದೂ, ಸಾಂಖ್ಯರು ಪ್ರಧಾನವೆಂಬ ಮೂಲ ಪ್ರಕೃತಿಯಿಂದ ಆಯಿತೆಂದೂ, ಮೀಮಾಂಸಕರು ಕರ್ಮದ ಫಲವೇ ಪ್ರಪಂಚವೆಂದೂ ಹೇಳುತ್ತಿದ್ದರು. ಭೌತಿಕ ಶಾಸ್ತ್ರಜ್ಞರು ತೇಜೋವಿಶೇಷದಿಂದ ಆಯಿತೆಂದೂ, ಮತ್ತೆ ಕೆಲವರು ಈಶ್ವರನೇ ಸೃಷ್ಟಿಕರ್ತನೆಂದೂ ಹೇಳುತ್ತಾರೆ. ಹೀಗೆ ಸೃಷ್ಟಿ ವಿಚಾರದಲ್ಲಿ ನಾನಾ ಅಭಿಪ್ರಾಯಗಳಿರುವುದರಿಂದ, ಸೃಷ್ಟಿಯೇ ನಿಜವಾಗಿ ಆಗಿಲ್ಲವೆಂದು ಸಿದ್ಧವಾಗುತ್ತದೆ. ಕತ್ತಲೆಯಲ್ಲಿ ಬೀದಿಯ ಕಂಬವು ಸರಿಯಾಗಿ ಕಾಣಿಸದೇ ಇರುವ ಕಾರಣ, ಬೇರೆ ಬೇರೆ ಜನರು ತಮ್ಮ ತಮ್ಮ ಸಂಕಲ್ಪಕ್ಕೆ ಅನುಗುಣವಾಗಿ ಆ ಕಂಬವನ್ನೇ ಭೂತ, ಪುರುಷ, ಕಳ್ಳ ಇತ್ಯಾದಿಯಾಗಿ ತಪ್ಪಾಗಿ ತಿಳಿದುಕೊಂಡು ಭಯ ಮುಂತಾದ ಕಷ್ಟಗಳನ್ನು ಅನುಭವಿಸುತ್ತಾರೆ. ಹೀಗೆ ಕಂಬದ ಅಜ್ಞಾನದಿಂದಾದ ಸಂಕಲ್ಪವು, ಭೂತ ಪುರುಷ ಇತ್ಯಾದಿಗಳ ಸೃಷ್ಟಿಗೆ ಕಾರಣವಾಯಿತು. ವೇದಾಂತವು ಹೇಳುವುದೇನೆಂದರೆ ಇರುವ ಒಂದೇ ಒಂದು ಆತ್ಮತತ್ವದ ಅಜ್ಞಾನದಿಂದಾದ ಸಂಕಲ್ಪವೇ ಈ ಜಗತ್ತಿನ ಸೃಷ್ಟಿಗೆ ಕಾರಣ. ಬೆಳಕಿನಲ್ಲಿ ಕಂಬದ ಇರುವಿಕೆಯು ಸ್ಪಷ್ಟವಾಗಿ ಗೊತ್ತಾದ ಕ್ಷಣದಲ್ಲಿಯೇ ಭೂತ, ಕಳ್ಳ ಇತ್ಯಾದಿಗಳು ಇರಲೂ ಇಲ್ಲ, ಇಲ್ಲವೂ ಇಲ್ಲ ಎಂಬ ನಿಶ್ಚಯವಾಗುತ್ತದೆ. ಹೀಗೆ 'ನಾನು ಯಾರು' ಎಂಬ ನಿಜವಾದ ಅರಿವು ಉಂಟಾದರೆ, ಈ ನಿಶ್ಚಯ ಜ್ಞಾನದಲ್ಲಿ ಜಗತ್ತಿನ ಇರುವಿಕೆಯು ತೋರುವಿಕೆ ಮಾತ್ರ ಎಂದೆಂದಿಗೂ ಯಾವ ಸತ್ಯತ್ವವೂ ಇಲ್ಲದ್ದು ಎಂದು ಗೊತ್ತಾಗುತ್ತದೆ.

ಏತಯೋರ್ಯದುಪಾದಾನಮೇಕಂ ಸೂಕ್ಷ್ಮಂ ಸದವ್ಯಯಮ್ ।
ಯಥೈವ ಮೃದ್ಘಟಾದೀನಾಂ ವಿಚಾರಃ ಸೋಽಯಮೀದೃಶಃ
॥ ೧೫ ॥

ಯಥಾ=ಹೇಗೆ, **ಘಟಾದೀನಾಂ**=ಗಡಿಗೆಯೇ ಮುಂತಾದವುಗಳಿಗೆ, **ಉಪಾದಾನಂ**=ಉಪದಾನ ಕಾರಣವು, **ಏಕಂ**=ಒಂದಾಗಿಯೂ, **ಸೂಕ್ಷ್ಮಂ**=ಸೂಕ್ಷ್ಮವಾಗಿಯೂ **ಸತ್**=ಹೆಚ್ಚಿನ ಇರುವಿಕೆ ಉಳ್ಳದ್ದೂ, **ಅವ್ಯಯಂ**=ನಾಶರಹಿತವೂ (ಆಗಿರುವ) **ಮೃತ್ ಏವ**=ಮಣ್ಣೇ ಆಗಿದೆಯೋ (**ತಥಾ**) = (ಹಾಗೆಯೇ), **ಏತಯೋಃ**=ಇವೆರಡರ. **ಉಪಾದಾನಂ**=ಉಪಾದಾನ ಕಾರಣವು. (**ಏಕಂ ಸೂಕ್ಷ್ಮಂ ಸತ್ ಅವ್ಯಯಂ**=ಏಕವೂ ಸೂಕ್ಷ್ಮವೂ ಸತ್, ಹಾಗೂ ಅವ್ಯಯವೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗಿರಲೇಬೇಕು) ಇತಿ=ಹೀಗೆಂದು **ಅಯಂ ಈದೃಶಃ ವಿಚಾರಃ ಸಃ**=ಆಲೋಚಿಸುವುದೇ ಆ ವಿಚಾರ.

ಜಗತ್ತಿಗೆ ಉಪಾದಾನ ಕಾರಣ ಯಾವುದು ಎಂಬ ವಿಚಾರವನ್ನು ಮಣ್ಣು ಗಡಿಗೆ ದೃಷ್ಟಾಂತದ ಮೂಲಕ ಮಾಡುತ್ತಿದ್ದಾರೆ. ಲೌಕಿಕವಾಗಿ ಗಡಿಗೆ, ಕುಡಿಕೆಗಳಿಗೆ ಮಣ್ಣೇ ಉಪಾದಾನ ಕಾರಣ ಎನಿಸಿಕೊಂಡಿದೆ. ಇಲ್ಲಿ ಮಡಕೆ ಮಣ್ಣುಗಳನ್ನು ಹೋಲಿಸಿ ಸ್ವಲ್ಪ ವಿಚಾರ ಮಾಡಿದ್ದೇ ಆದರೆ ತಿಳಿದುಬರುವುದೇನೆಂದರೆ, ಮಡಕೆಗಿಂತ ಮಣ್ಣು ಸೂಕ್ಷ್ಮ. ಏಕೆಂದರೆ ಅದು ಮಡಕೆಯಲ್ಲೆಲ್ಲಾ ಸಂಪೂರ್ಣವಾಗಿ ವ್ಯಾಪಿಸಿದೆ. ಮಡಕೆಯು ದೊಡ್ಡದು, ಚಿಕ್ಕದು, ಎತ್ತರ, ದಪ್ಪ ಹೀಗೆ ನಾನಾ ಆಕಾರಗಳನ್ನು ಪಡೆದರೂ ಈ ಎಲ್ಲಾ ಮಡಕೆಗಳಲ್ಲಿರುವ ಮಣ್ಣು ಮಾತ್ರ ಒಂದೇ. ಮಡಕೆ ಒಡೆದು ಹೋದ ಮೇಲೆ, ಮಡಕೆ ಎಂಬ ಹೆಸರು ಹೋಗಿಬಿಡುತ್ತದೆ. ಆದರೆ ಮಣ್ಣು ಮಾತ್ರ ಇದ್ದೇ ಇರುತ್ತದೆ. ಹೀಗೆ ಮಡಕೆಗಿಂತ ಮಣ್ಣಿಗೆ ಹೆಚ್ಚಿಗೆ ಇರುವಿಕೆ ಉಂಟು. ಅಂದರೇನೆಂದರೆ, ಯಾವುದೇ ಉಪಾದಾನ ಕಾರಣವೂ ಕಾರ್ಯಕ್ಕಿಂತ ಸೂಕ್ಷ್ಮವಾಗಿಯೂ ಸತ್ ರೂಪವಾಗಿಯೂ, ಅವ್ಯಯವಾಗಿಯೂ ಇರಬೇಕು. ಈಗ ನಮಗೆ ತೋರುತ್ತಿರುವ ಈ ಜಗತ್ತಿನ ಉಪಾದಾನ ಕಾರಣವೂ ಸಹ ಜಗತ್ತಿನ ಎಲ್ಲಾ ವಸ್ತುಗಳಿಗಿಂತಲೂ ಸೂಕ್ಷ್ಮ, ಎಲ್ಲಕ್ಕಿಂತಲೂ ಸತ್, ಎಲ್ಲಕ್ಕಿಂತಲೂ ಅವ್ಯಯವೂ ಆಗಿರಲೇಬೇಕು. ಆದರೆ ಈಗಾಗಲೇ ವಿಚಾರ ಮಾಡಿ, ಅಜ್ಞಾನದಿಂದಲೂ ಸಂಕಲ್ಪದಿಂದಲೂ ಜಗತ್ತು ತೋರುವುದು ಎಂಬ ನಿಶ್ಚಯಕ್ಕೆ ಬಂದಿದ್ದೇವೆ. ಆದ್ದರಿಂದ ಏಕ, ಸೂಕ್ಷ್ಮ, ಸತ್ ಹಾಗೂ ಅವ್ಯಯವಾದ ತತ್ವವೇ ಈ ಅಜ್ಞಾನ ಸಂಕಲ್ಪಗಳಿಗೂ ಹುಟ್ಟಿ, ತೋರಿ, ಲಯವಾಗುವುದಕ್ಕೆ ಆಧಾರವಾಗಿರಬೇಕು.

ಅಹಮೇಕೋಽಪಿ ಸೂಕ್ಷ್ಮಶ್ಚ ಜ್ಞಾತಾ ಸಾಕ್ಷೀ ತದವ್ಯಯಃ ।
ತದಹಂ ನಾತ್ರ ಸಂದೇಹೋ ವಿಚಾರಃ ಸೋಽಯಮೀದೃಶಃ ॥ ೧೬ ॥

ಅಹಂ=ನಾನು, **ಏಕಃ ಅಪಿ**=ಒಬ್ಬನೇ ಆಗಿದ್ದೇನೆ, **ಸೂಕ್ಷ್ಮಃ**=ಸೂಕ್ಷ್ಮನು, **ಚ**=ಮತ್ತು, **ಜ್ಞಾತಾ**=ಜ್ಞಾತೃವೂ, **ಸಾಕ್ಷೀ**=ಸಾಕ್ಷಿಯೂ, **ಸತ್**=ಸದ್ರೂಪನೂ, **ಅವ್ಯಯಃ**=ಅವ್ಯಯನೂ, (ಆಗಿದ್ದೇನೆ) (ಆದ್ದರಿಂದ) **ತತ್ ಅಹಂ**=ಅದೇ ನಾನು **ಅತ್ರ**=ಹೀಗೆ ಹೇಳುವುದರಲ್ಲಿ, **ನ ಸಂದೇಹಃ**=ಸಂದೇಹವಿಲ್ಲ, **ಅಯಮ್ ಈದೃಶಃ ಸಃ ವಿಚಾರಃ**=ಹೀಗೆಂದು ಆಲೋಚಿಸುವುದೇ ಆ ವಿಚಾರವು.

ನಾನು ಒಬ್ಬನೂ, ಸೂಕ್ಷ್ಮನೂ, ಜ್ಞಾತೃವೂ, ಸಾಕ್ಷಿಯೂ, ಸದ್ರೂಪನೂ, ಅವ್ಯಯನೂ ಆಗಿದ್ದೇನೆ. ಆದ್ದರಿಂದ ಅದೇ ನಾನು ಎಂಬುದರಲ್ಲಿ ಸಂದೇಹವಿಲ್ಲ, ಹೀಗೆಂದು ಆಲೋಚಿಸುವುದೇ ಜ್ಞಾನ ವಿಚಾರವು.

ನಾನು ಎಂಬ ವಸ್ತು ಒಂದೇ. ವ್ಯಾವಹಾರಿಕವಾಗಿ 'ನಾನು ನಾನು' ಎಂಬ ಶಬ್ದವನ್ನು ಎಲ್ಲರೂ ಉಪಯೋಗಿಸುವುದರಿಂದ ಅನೇಕ ನಾನುಗಳಿವೆ ಎಂದು ತೋರುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri
ಅಷ್ಟೆ. ಆದರೆ ಸ್ವಲ್ಪ ವಿಚಾರ ಮಾಡಿ ನೋಡಿದಾಗ, ಅಂದರೆ ಸದ್ಗುರುವಿನ ಸಂಪ್ರದಾಯಬದ್ಧ ಉಪದೇಶದ ಆಧಾರದಿಂದ, ದೇಹ, ಮನಸ್ಸು, ಬುದ್ಧಿ, ಇಂದ್ರಿಯ, ಅಹಂಕಾರಗಳೆಂಬ ಉಪಾಧಿಗಳಿಂದ ಬಿಡಿಸಿಕೊಂಡು, ನಾನು ಯಾರು ಎಂಬುದನ್ನು ಆಧ್ಯಾತ್ಮಿಕವಾಗಿ ಗುರುತಿಸಿದಾಗ ಅದು ಕೇವಲ ಇರುವಿಕೆ ಎಂದು ಗೊತ್ತಾಗುತ್ತದೆ. ನಾನು ಎಂಬ ಪದದಲ್ಲಿ ಅನೇಕವು ಇವೆ ಎಂದು ತಿಳಿಯುವುದಕ್ಕೆ ದೇಹ, ಮನಸ್ಸು, ಬುದ್ಧಿ, ಇಂದ್ರಿಯಗಳ ಸಂಬಂಧವೇ ಕಾರಣ. ಆಕಾಶವು ಒಂದೇ ಆಗಿದ್ದರೂ, ಒಂದು ಮನೆಯಲ್ಲಿನ ಕೊಠಡಿಗಳ ಸಂಬಂಧದಿಂದ ಆಕಾಶವನ್ನು ಮಲಗುವ ಮನೆ, ದೇವರ ಮನೆ, ಅಡಿಗೆ ಮನೆ ಇತ್ಯಾದಿ ಅನೇಕ ಆಕಾಶಗಳೆಂದು ವ್ಯವಹಾರ ಮಾಡುತ್ತೇವೆ. ಹೀಗೆಯೇ ಇರುವಿಕೆ ಮಾತ್ರವೇ ಆಗಿರುವ ನಾನು ಎಂಬ ವಸ್ತು ಒಂದೇ ಆಗಿದೆ.

ಆಕಾಶವು ಎಲ್ಲಕ್ಕಿಂತಲೂ ಸೂಕ್ಷ್ಮವೆನಿಸಿಕೊಂಡಿದೆ. ಇಂತಹ ಆಕಾಶವನ್ನೇ ಅರಿಯುತ್ತಿರುವ ನಾನು ಆಕಾಶಕ್ಕಿಂತಲೂ ಸೂಕ್ಷ್ಮವೇ ಆಗಿರಬೇಕು. ಆದ್ದರಿಂದ ಆತ್ಮ ವಸ್ತು ಪರಮ ಸೂಕ್ಷ್ಮ.

'ಜ್ಞಾತೃ' ಎಂದರೆ ಅರಿಯುವವನು. 'ಜ್ಞೇಯ' ಎಂದರೆ ಅರಿಯಲ್ಪಡುವ ವಸ್ತು. ಆತ್ಮನು ಅಹಂಕಾರದಿಂದ ಮೊದಲುಗೊಂಡು ಜಗತ್ತಿನ ಎಲ್ಲಾ ವಸ್ತುಗಳನ್ನೂ, ಅವುಗಳ ಬದಲಾವಣೆಯನ್ನೂ ಅರಿಯುತ್ತಿರುವುದರಿಂದ ಈ ಅರಿಯಲ್ಪಡುವ ವಸ್ತುಗಳ ದೃಷ್ಟಿಯಿಂದ ಅವನು 'ಜ್ಞಾತೃ' ಎನಿಸಿಕೊಂಡಿದ್ದಾನೆ. ಹಾಗೆಂದ ಮಾತ್ರಕ್ಕೆ ಅವನಲ್ಲಿ ಅರಿಯುವಿಕೆ ಎಂಬ ಕೆಲಸ ನಡೆಯುತ್ತಿದೆ ಎಂದು ತಿಳಿಯಬಾರದು. ಅದು ಅವನ ಸ್ವರೂಪವೇ ಆಗಿರುತ್ತದೆ ಅಥವಾ ಅವನು ಜ್ಞಾತೃ ಸ್ವರೂಪನು.

ಹೀಗೆ ಆತ್ಮನು ಯಾವ ಕೆಲಸವನ್ನು ಮಾಡದೆ, ತನ್ನ ಸನ್ನಿಧಿ ಮಾತ್ರದಿಂದ ನಡೆಯುತ್ತಿರುವ ಜಗತ್ತಿನ ಎಲ್ಲಾ ಕೆಲಸಗಳನ್ನು ಜ್ಞಾತೃ ಸ್ವರೂಪನಾಗಿ ಅರಿಯುತ್ತಿದ್ದಾನೆ. ಲೌಕಿಕವಾಗಿ ಇಬ್ಬರು ವ್ಯವಹಾರ ಮಾಡುತ್ತಿರುವಾಗ ಸಾಕ್ಷಿಯು ನೋಡುತ್ತಿದ್ದಾನೆ ಎಂದರೆ ಆ ನೋಡುವಿಕೆಯು ತಾನೇತಾನಾಗಿ ಆಯಿತೇ ಹೊರತು ಸಾಕ್ಷಿಯು ನೋಡುವುದೆಂಬ ಕೆಲಸವನ್ನು ಮಾಡುವವನಲ್ಲ, ಈ ಅರ್ಥದಲ್ಲಿಯೇ ಜ್ಞಾತೃ ಸ್ವರೂಪನಾದ ಆತ್ಮನನ್ನು ಸಾಕ್ಷಿ ಎಂದು ಕರೆದಿರುವುದು. ಇವನು ಸತ್ ಸ್ವರೂಪನಾಗಿದ್ದಾನೆ, ನಾನು ಇಲ್ಲ ಎನ್ನುವುದೇ ಇರುವುದಿಲ್ಲ. ನಾನು ಸದಾ ಇರುವವನೇ. ಇರುವಿಕೆಯೇ ನನ್ನ ಸ್ವಭಾವ. ಹೀಗೆ ಎಂದೆಂದಿಗೂ ಇರುವ ನನಗೆ ನಾಶವಿಲ್ಲವಾದ್ದರಿಂದ ಅವ್ಯಯನೇ.

ಈ ರೀತಿಯಾದ ವಿಚಾರದಿಂದ ತಿಳಿದು ಬರುವುದೇನೆಂದರೆ ಆತ್ಮನು ಒಬ್ಬನೂ ಪರಮ ಸೂಕ್ಷ್ಮನೂ, ಸದ್ರೂಪನೂ ಹಾಗೂ ಅವ್ಯಯನೂ ಆಗಿದ್ದಾನೆ. ಈ ಲಕ್ಷಣಗಳೆಲ್ಲವೂ ಹಿಂದಿನ ಶ್ಲೋಕದಲ್ಲಿ ತಿಳಿಸಿರುವ ಉಪಾದಾನ ಕಾರಣದ ಲಕ್ಷಣಗಳಾಗಿವೆ. ಆದ್ದರಿಂದ ಆತ್ಮನೇ ಅಜ್ಞಾನ ಸಂಕಲ್ಪಗಳ ಮೂಲಕ ಜಗತ್ತಿಗೆ ಉಪಾದಾನ ಕಾರಣವೆಂಬುದರಲ್ಲಿ ಸಂಶಯವೇ ಇಲ್ಲ.
Sri Vidyabharathi Book Centre, Sringeri

CC-O. In Public Domain. Digitized by eGangotri

೧೧. ಅಜ್ಞಾನ

ಆತ್ಮಾ ವಿನಿಷ್ಕಲೋ ಹ್ಯೇಕೊ ದೇಹೋ ಬಹುಭಿರಾವೃತಃ।
ತಯೋರೈಕ್ಯಂ ಪ್ರಪಶ್ಯಂತಿ ಕಿಮಜ್ಞಾನಮತಃ ಪರಮ್ ॥ ೧೭ ॥

ಆತ್ಮಾ=ಆತ್ಮನು, **ವಿನಿಷ್ಕಲಃ**=ನಿರವಯುವನು, **ಹಿ**=ಹಾಗೂ, **ಏಕಃ**=ಏಕರೂಪನೂ, **ದೇಹಃ**=ದೇಹವು, **ಬಹುಭಿಃ**= ಅನೇಕ(ಅವಯುವಗಳಿಂದ) **ಆವೃತಃ**=ಕೂಡಿರುವುದು, **ತಯೋಃ**=ಅವೆರಡರಲ್ಲಿ, **ಐಕ್ಯಂ**=ಒಂದೇ ಎಂಬ ಭಾವವನ್ನು, **ಪ್ರಪಶ್ಯಂತಿ**=ನಿಶ್ಚಯವಾಗಿ ನೋಡುತ್ತಾರೆ, **ಅತಃ ಪರಂ**=ಇದಕ್ಕಿಂತ ಹೆಚ್ಚಿನ, **ಅಜ್ಞಾನಂ**=ಅಜ್ಞಾನವು, **ಕಿಮ್**=ಯಾವುದಿದೆ.

ಆತ್ಮನು ನಿರವಯುವನೂ, ಏಕರೂಪನೂ ಆಗಿರುತ್ತಾನೆ. ದೇಹವಾದರೋ ಅನೇಕಾನೇಕ ಅವಯುವಗಳಿಂದ ಕೂಡಿದ ಒಂದು ಸಂಘಾತ. (ಹೀಗಿದ್ದಾಗ್ಯೂ) ದೇಹ, ಆತ್ಮ ಎರಡನ್ನೂ ಒಂದೇ ಎಂದು ತಿಳಿಯುತ್ತಾರಲ್ಲ. ಇದಕ್ಕಿಂತ ಹೆಚ್ಚಿನ ಅಜ್ಞಾನವೇ ನಿದೆ?

ಹಿಂದೆ ಹದಿಮೂರನೆಯ ಶ್ಲೋಕದಲ್ಲಿ "ನಾಹಂ ಭೂತಗಣಃ ದೇಹಃ" ನಾನು ದೇಹವಲ್ಲ ಎಂದು ಹೇಳಿದ್ದನ್ನು ಮುಂದಿನ ಐದು ಶ್ಲೋಕಗಳಲ್ಲಿ ಯುಕ್ತಿಯ ಮೂಲಕ ಸ್ಪಷ್ಟಪಡಿಸುತ್ತಾರೆ. ದೇಹವು ಆತ್ಮವಾಗಲಾರದು ಎಂಬುದಕ್ಕೆ ಪ್ರಸಿದ್ಧವಾದ ಕಾರಣ ಗಳಿದ್ದರೂ ಸಹ. ದೇಹವನ್ನೇ ಆತ್ಮವೆಂದು ತಿಳಿದು ವ್ಯವಹರಿಸುತ್ತಿರುವುದೇ ಅಜ್ಞಾನ. ಇದಕ್ಕಿಂತ ಹೆಚ್ಚಿನ ಅಜ್ಞಾನವಿಲ್ಲ ಎಂದು ಅಜ್ಞಾನದ ಸ್ವರೂಪವನ್ನು ವಿವರಿಸುತ್ತಿದ್ದಾರೆ, ಏಕೆಂದರೆ ಮೋಕ್ಷ ಪಡೆಯಬೇಕೆಂಬ ಇಚ್ಛೆಯುಳ್ಳ ಸಾಧಕನು ಬಂಧನಕ್ಕೆ ಕಾರಣವಾದ ಅಜ್ಞಾನದ ಸ್ವರೂಪವನ್ನು ಸಂಪೂರ್ಣವಾಗಿ ತಿಳಿಯುವುದು ಅವಶ್ಯ.

ನಾನು ಯಾರು ಎಂಬ ಅರಿವು ಇಲ್ಲದೇ ಇರುವ ಕಾರಣ, ನಾನೇ ದೇಹ ಎಂದು ಕೊಳ್ಳುತ್ತೇನೆ. ಆಗ ದೇಹಕ್ಕೆ ಸಂಬಂಧಪಟ್ಟ ಹೆಂಡತಿ, ಮಕ್ಕಳು, ಸ್ನೇಹಿತರು, ನೆಂಟರು ಇವರುಗಳಲ್ಲಿ ಹೆಚ್ಚಾದ ಅಭಿಮಾನ ಉಂಟಾಗುತ್ತದೆ. ಈ ಅಭಿಮಾನದ ಕಾರಣ ಇವರು ಗಳಿಗಾದ ಕಷ್ಟ ಸುಖಗಳು ನನ್ನದೇ ಎಂದುಕೊಂಡು ಸುಖ-ದುಃಖಗಳನ್ನು ಅನುಭವಿ ಸುತ್ತೇನೆ. ಇದೇ ಸಂಸಾರ. ಹೀಗೆ ದೇಹವನ್ನು ನಾನು ಎಂದುಕೊಳ್ಳುವುದೇ ಅಜ್ಞಾನ, ಸುಕೃತದಿಂದ ಪರಿಪಕ್ವವಾದ ಅಂತಃಕರಣದಲ್ಲಿ ಸ್ವಲ್ಪ ವಿಚಾರ ಮಾಡಿದ್ದೇ ಆದರೆ, ಆತ್ಮನು ದೇಹಕ್ಕಿಂತ ಅತ್ಯಂತ ವಿಲಕ್ಷಣನು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ರೀತಿಯಾದ ವಿಚಾರ ಕ್ರಮವು ಹೇಗಿರಬೇಕೆಂಬುದೇ ಮುಂದಿನ ಶ್ಲೋಕಗಳ ತಾತ್ಪರ್ಯ.

ಆತ್ಮನು ಕೇವಲ ಇರುವಿಕೆಯ ಸ್ವರೂಪದವನು. ಇವನು ಇದೆ ಇದೆ ಎಂಬ ಅನು ಭವದಿಂದ ಮಾತ್ರ ಗುರುತಿಸಲ್ಪಡುತ್ತಾನೆ. ಹೀಗೆ ಇವನು ಕೇವಲ ಇರುವಿಕೆಯ ಸ್ವರೂಪವಾಗಿರುವುದರಿಂದ, ಯಾವ ಅವಯುವಗಳಿಂದಲೂ ಕೂಡಿಲ್ಲ. ಈ ಆತ್ಮನ ಅನುಭವವು ಬ್ರಹ್ಮಾದಿ ಸ್ತಂಭ ಪರ್ಯಂತ ಎಲ್ಲಾ ದೇಹಗಳಲ್ಲಿಯೂ, ಎಲ್ಲಾ ಕಾಲಗಳ

Sri Vidyabharathi Book Centre, Sringeri

CC-O. In Public Domain. Digitized by eGangotri
ಲ್ಲಿಯೂ, ಏಕರೂಪವಾಗಿಯೂ ಪೂರ್ಣವಾಗಿಯೂ ಇದೆ. ಇದಿಷ್ಟೂ ಆತ್ಮನ ಲಕ್ಷಣಗಳಾದುವು. ದೇಹವು ತಲೆ, ಎದೆ, ಕೈಕಾಲು ಇತ್ಯಾದಿ ಅಂಗಾಂಗಗಳಿಂದ ಕೂಡಿರುವುದು ಎಲ್ಲರಿಗೂ ತಿಳಿದೇ ಇದೆ. ಇಷ್ಟೇ ಅಲ್ಲ, ದೇಹವು ಬಾಲ್ಯಾದಿ ಅವಸ್ಥೆಗಳನ್ನೂ, ಜಾಗ್ರದಾದಿ ಅವಸ್ಥೆಗಳನ್ನೂ ದಪ್ಪ, ಸಣ್ಣ, ಬಲಹೀನ ಇತ್ಯಾದಿ ಬದಲಾವಣೆಗಳನ್ನೂ ಪಡೆಯುತ್ತಲೇ ಇರುತ್ತದೆ. ದೇಹವು ಎಷ್ಟೋ ಬದಲಾವಣೆಗಳನ್ನು ಪಡೆಯುತ್ತಿದ್ದಾಗ್ಯೂ ಕೇವಲ ಇದೆ ಇದೆ ಎಂದು ಗುರುತಿಸಲ್ಪಡುವ ಆತ್ಮನು ಏಕರೂಪವಾಗಿಯೇ ಇರುವುದು. ಇಷ್ಟು ಸ್ಪಷ್ಟವಾಗಿ ತೋರುವ ವಿರುದ್ಧ ಸ್ವಭಾವವನ್ನು ಮರೆತು ಇವೆರಡೂ ಒಂದೇ ಎಂದು ತಿಳಿಯುತ್ತಾರಲ್ಲಾ! ಇದಕ್ಕಿಂತ ಹೆಚ್ಚಿನ ಅಜ್ಞಾನ ಏನಿದೆ?

ಆತ್ಮಾ ನಿಯಾಮಕಶ್ಚಾನ್ತರ್ದೇಹೋ ನಿಯಮ್ಯಕಃ ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃ ಪರಮ್ ॥ ೧೮ ॥

ಆತ್ಮಾ=ಆತ್ಮನು, **ಅಂತಃ**=ಒಳಗಿದ್ದು, **ನಿಯಾಮಕಃ**=ನಿಯಾಮಕನಾಗಿರುವನು, **ಚ**=ಮತ್ತು **ದೇಹಃ**=ದೇಹವು, **ಬಾಹ್ಯಃ**=ಹೊರಗಡೆ ಇದ್ದು, **ನಿಯಮ್ಯಕಃ**=ನಿಯಮಿಸಲ್ಪಡುವುದು (ಆಗಿದೆ) **ತಯೋಃ**=ಇವೆರಡರಲ್ಲಿಯೂ, **ಐಕ್ಯಂ**=ಒಂದೇ ಎಂಬ ಭಾವವನ್ನು, **ಪ್ರಪಶ್ಯಂತಿ**=ಸ್ಪಷ್ಟವಾಗಿ ನೋಡುತ್ತಾರಲ್ಲ, **ಅತಃ ಪರಂ**=ಇದಕ್ಕಿಂತ ಹೆಚ್ಚಿನ, **ಅಜ್ಞಾನಂ**=ಅಜ್ಞಾನವು, **ಕಿಂ**=ಯಾವುದಿದೆ.

ಆತ್ಮನು ಒಳಗಿದ್ದು ನಿಯಾಮಕನಾಗಿರುವನು ಮತ್ತು ದೇಹವು ಹೊರಗಿದ್ದು ನಿಯಮಿಸಲ್ಪಡುವುದಾಗಿದೆ. ಅವೆರಡರಲ್ಲಿಯೂ, ಒಂದೇ ಎಂಬ ಬುದ್ಧಿಯನ್ನು ಪಡೆದಿದ್ದಾರಲ್ಲ. ಇದಕ್ಕಿಂತ ಹೆಚ್ಚಿನ ಅಜ್ಞಾನ ಏನಿದ್ದೀತು?

ಈ ಶ್ಲೋಕದಲ್ಲಿ ಆತ್ಮ ಮತ್ತು ದೇಹಕ್ಕೆ ಇರುವ ಮತ್ತೊಂದು ತಾರತಮ್ಯವನ್ನು ತಿಳಿಸುತ್ತಿದ್ದಾರೆ.

ವ್ಯವಹಾರದಲ್ಲಿ ಒಳಗೆ ಹೊರಗೆ ಎಂಬ ಪದಗಳು ಅಪೇಕ್ಷಿಕವು ಆಗಿರುತ್ತದೆ. ಇವು ದೇಶಕ್ಕೆ ಸಂಬಂಧಪಟ್ಟದ್ದಾಗಿರುತ್ತವೆ. ಆಧ್ಯಾತ್ಮಿಕವಾಗಿಯಾದರೋ ಈ ಪದಗಳ ಅರ್ಥವನ್ನು ವಿವೇಕದಿಂದ ವಿಚಾರ ಮಾಡಿ ತಿಳಿದುಕೊಳ್ಳಬೇಕು. ಜಗತ್ತನ್ನು ನಾವು ನೋಡುತ್ತಿರುವಾಗ ಜಗತ್ತು ದೃಶ್ಯವಾಗಿ ಕಣ್ಣು 'ದೃಕ್' ಎನಿಸಿಕೊಳ್ಳುತ್ತದೆ. ಆಗ ಜಗತ್ತು ಹೊರಗೆ ಇದೆ, ಕಣ್ಣು ಒಳಗೆ ಇದೆ ಎನ್ನುತ್ತೇವೆ. ಮನಸ್ಸು ದೃಕ್ ಆಗಿ ಕಣ್ಣೇ ಮುಂತಾದ ಇಂದ್ರಿಯಗಳನ್ನು ದೃಶ್ಯಮಾಡಿಕೊಂಡಾಗ ಇಂದ್ರಿಯಗಳು ಹೊರಗೆ, ಮನಸ್ಸು ಒಳಗೆ ಎಂದಾಗುತ್ತದೆ. ಹೀಗೆಯೇ ದೃಕ್ ದೃಶ್ಯ ವಿವೇಕದಿಂದ ವಿಚಾರ ಮಾಡಿದ್ದೇ ಆದರೆ ಆತ್ಮನು ದೃಕ್ ಮಾತ್ರನೆಂದೂ, ಜಗತ್ತು ಇಂದ್ರಿಯ, ಮನಸ್ಸು ಬುದ್ಧಿಗಳು ದೃಶ್ಯಗಳೆಂದೂ, ತಿಳಿದು ಬರುತ್ತದೆ. ಹೀಗೆ ಆತ್ಮನು ಒಳಗೆ ಉಳಿದೆಲ್ಲವೂ ಹೊರಗೆ ಈ ಜಗತ್ತಿಗೆ ಸೇರಿರುವ ಇಂದ್ರಿಯ ಗೋಚರವಾಗಿ ದೃಶ್ಯವೆನಿಸಿರುವ ಈ ದೇಹವು ಹೊರಗೆ ಎಂದು ಸಿದ್ಧವಾಯಿತು. ಇಲ್ಲಿ ಒಳಗೆ ಹೊರಗೆ ಎಂಬ ಪದಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಶದ ಅಪೇಕ್ಷಿಕವಲ್ಲ ಎಂಬುದನ್ನು ಮರೆಯಬಾರದು. ಏಕೆಂದರೆ ದೇಶ ಕಾಲಗಳನ್ನು ಮೀರಿದ ಸರ್ವಾಂತರ ಆತ್ಮನು ದೇಶದಿಂದ ಪರಿಚ್ಛಿನ್ನನಲ್ಲ.

ಸೂರ್ಯನ ಸನ್ನಿಧಿ ಮಾತ್ರದಿಂದ ಪೃಥ್ವಿಯಲ್ಲಿ ಹಗಲು ರಾತ್ರಿಗಳೂ, ವಾಯುವಿನ ಚಲನೆಗಳೂ, ಮಳೆ ಬರುವಿಕೆ, ಬೇರೆ ಬೇರೆ ಗ್ರಹಗಳ ಚಲಿಸುವಿಕೆ ಇತ್ಯಾದಿಗಳು ಒಂದು ನಿಯಮಕ್ಕೆ ಒಳಪಟ್ಟಂತೆ ಜರುಗುತ್ತಿವೆ. ಆದ್ದರಿಂದ ಈ ಪ್ರಕೃತಿಯಲ್ಲಿನ ಕಾರ್ಯಗಳಿಗೆಲ್ಲಾ ಸೂರ್ಯನೇ ನಿಯಾಮಕನೆಂದು ಪ್ರಕೃತಿಯಲ್ಲಿರುವ ನಾವು ಹೇಳುತ್ತೇವೆ. ಸೂರ್ಯನಾದರೋ ತನ್ನ ದೃಷ್ಟಿಯಲ್ಲಿ ತಾನು ಏನೂ ಮಾಡುತ್ತಿಲ್ಲ. ತನ್ನ ಪಾಡಿಗೆ ತಾನು ಸುಮ್ಮನೆ ಇದ್ದಾನೆ. ಹೀಗೆಯೇ ಆತ್ಮನ ಸನ್ನಿಧಿ ಮಾತ್ರದಿಂದ ದೇಹದಲ್ಲಿನ ಕಾರ್ಯಗಳು ಶಿಸ್ತಿನಿಂದ ನಿಯಮಿಸಲ್ಪಟ್ಟಿವೆ. ದೇಹದಲ್ಲಿನ ಯಾವ ಮಾರ್ಪಾಡುಗಳೂ ಆತ್ಮನಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಆತ್ಮನು ಸ್ವತಂತ್ರ. ಆತ್ಮನು ದೇಹದಲ್ಲೇ ಇದ್ದುಕೊಂಡು ತನ್ನಲ್ಲಿ ಯಾವ ಕರ್ತೃತ್ವವನ್ನೂ ಇಟ್ಟುಕೊಳ್ಳದೆ, ಯಾವ ಆಯಾಸವೂ ಇಲ್ಲದೆ ತನ್ನ ಸನ್ನಿಧಿ ಮಾತ್ರದಿಂದ ದೇಹದಲ್ಲಾಗುವ ಮಾರ್ಪಾಡುಗಳು, ಮನಸ್ಸಿನ ಆಲೋಚನೆಗಳು, ಬುದ್ಧಿಯಲ್ಲಿನ ವಿಚಾರಗಳನ್ನು ಒಂದು ಶಿಸ್ತಿನಿಂದ ನಿಯಮಿಸುತ್ತಿದ್ದಾನೆ. ಆದ್ದರಿಂದ ಆತ್ಮನು ನಿಯಾಮಕ ಎನ್ನುವುದು. ದೇಹದ ದೃಷ್ಟಿಯಿಂದ ಅಷ್ಟೆ. ಹೀಗೆ ಪರತಂತ್ರವಾದ ದೇಹವನ್ನೇ ಆತ್ಮನೆಂದು ತಿಳಿಯುವುದಕ್ಕಿಂತ ಹೆಚ್ಚಿನ ಅಜ್ಞಾನವೇನಿದೆ.

ಆತ್ಮಾ ಜ್ಞಾನಮಯಃ ಪುಣ್ಯೋ ದೇಹೋ ಮಾಂಸಮಯೋಽಶುಚಿಃ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃ ಪರಂ ॥ ೧೯ ॥

ಆತ್ಮಾ=ಆತ್ಮನು, **ಜ್ಞಾನಮಯಃ**=ಅರಿವಿನ ಸ್ವರೂಪ, **ಪುಣ್ಯಃ**=ಪವಿತ್ರನು, **ದೇಹಃ**=ದೇಹವು, **ಮಾಂಸಮಯಃ**=ಮಾಂಸದ ಮುದ್ದೆ, **ಅಶುಚಿಃ**=ಕೊಳೆಯಿಂದ ತುಂಬಿದೆ, **ತಯೋಃ**=ಅವೆರಡರಲ್ಲಿ, **ಐಕ್ಯಂ**=ಒಂದೇ ಎಂಬ ಭಾವನೆಯನ್ನು, **ಪ್ರಪಶ್ಯಂತಿ**=ಪಡೆದಿದ್ದಾರಲ್ಲ, **ಅತಃ ಪರಂ**=ಇದಕ್ಕಿಂತ ಹೆಚ್ಚಿನ **ಅಜ್ಞಾನಂ**=ಅಜ್ಞಾನವು, **ಕಿಂ**=ಯಾವುದಿದೆ?

ಆತ್ಮನು ಕೇವಲ ಅರಿವಿನ ಸ್ವರೂಪನಾಗಿ ಸದಾ ಪವಿತ್ರನಾಗಿರುವನು. ದೇಹವಾದರೋ ಮಾಂಸದ ಮುದ್ದೆಯಾಗಿದ್ದು, ಸದಾ ಕೊಳೆಯುಳ್ಳದ್ದೇ ಆಗಿರುತ್ತದೆ. ಇವೆರಡನ್ನೂ ಒಂದೇ ಎಂದು ನೋಡುತ್ತಾರಲ್ಲಾ ಇದಕ್ಕಿಂತ ಹೆಚ್ಚಿನ ಅಜ್ಞಾನ ಮತ್ತೇನಿದೆ?

ಆತ್ಮನು ಜ್ಞಾನಮಯ. ಅಂದರೆ ಅರಿವಿನ ಸ್ವರೂಪ-ಚೈತನ್ಯ ಸ್ವರೂಪ. ಈ ಚೈತನ್ಯದ ಘಟ್ಟಿಯ ಸನ್ನಿಧಿ ಮಾತ್ರದಿಂದ ಬುದ್ಧಿ, ಮನಸ್ಸು, ಇಂದ್ರಿಯಗಳು ಚೈತನ್ಯಗೊಳ್ಳುತ್ತವೆ. ಜಡವಾದ ದೇಹವಾದರೋ ಮಾಂಸದ ಮುದ್ದೆಯಾಗಿದ್ದು ಅರಿಯಲ್ಪಡುವುದಾಗಿರುತ್ತದೆ. ದೇಹವು ತನ್ನ ಇರುವಿಕೆಗೆ, ತೋರುವಿಕೆಗೆ ಆತ್ಮನನ್ನೇ ಆಶ್ರಯಿ

Sri Vidyabharathi Book Centre, Sringeri

CC-O. In Public Domain. Digitized by eGangotri
ಸಿದೆ. ದೇಹದ ಒಳಗೆ ಹೊರಗೆ ಎಲ್ಲಾ ಅಸಹ್ಯವಾದ ಕೊಳೆಯೇ ತುಂಬಿದೆ. ಮನಸ್ಸು ಬುದ್ಧಿಗಳೂ ಸಹ ಅನೇಕಾನೇಕ ಕೆಟ್ಟ ಕೆಟ್ಟ ಆಲೋಚನೆ ಭಾವನೆಗಳಿಂದ ತುಂಬಿವೆ. ಈ ದೇಹ ಮನಸ್ಸು ಬುದ್ಧಿಗಳು ಅರಿಯಲ್ಪಡುವುದಾಗಿದ್ದು ಇವುಗಳ ಯಾವ ಕಲ್ಮಶವೂ ನಿರವಯವನಾದ, ಜ್ಞಾತೃ ಸ್ವರೂಪನಾದ ಆತ್ಮನಿಗೆ ಅಂಟುವುದಿಲ್ಲ. ಆದ್ದರಿಂದ ಆತ್ಮನು ಸದಾ ಪವಿತ್ರನೇ, ಹೀಗೆ ನಿತ್ಯ ಶುದ್ಧ ಜ್ಞಾನ ಸ್ವರೂಪನಾದ ಆತ್ಮ ವಸ್ತುವನ್ನೂ, ಸದಾ ಅಶುಚಿಯ ಮನೆಯಾದ ಹಾಗೂ ಜಡವಾದ ದೇಹವನ್ನೂ ಒಂದೇ ಎಂದು ತಿಳಿಯುವುದಕ್ಕಿಂತ ಹೆಚ್ಚಿನ ಅಜ್ಞಾನವೇನಿರುವುದು ?

ಆತ್ಮಾ ಪ್ರಕಾಶಕಃ ಸ್ವಚ್ಛೋ ದೇಹಸ್ತಾಮಸ ಉಚ್ಯತೇ ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃ ಪರಂ ॥ ೨೦ ॥

ಆತ್ಮಾ=ಆತ್ಮನು, **ಪ್ರಕಾಶಕಃ**=ಸ್ವಯಂ ಜ್ಯೋತಿಯು, **ಸ್ವಚ್ಛಃ**=ಶುದ್ಧನಾಗಿರುವವನು, **ದೇಹಃ**=ದೇಹವಾದರೋ, **ತಾಮಸಃ**=ಜಡವಾಗಿದೆ, **ತಯೋಃ** ಇವೆರಡರಲ್ಲಿ, **ಐಕ್ಯಂ**=ಐಕ್ಯವನ್ನು, **ಪ್ರಪಶ್ಯಂತಿ**=ಭಾವಿಸುತ್ತಾರಲ್ಲ, **ಅತಃ ಪರಂ** ಇದಕ್ಕಿಂತ ಹೆಚ್ಚಿನ, **ಅಜ್ಞಾನಂ**=ಅಜ್ಞಾನವು, **ಕಿಂ**=ಯಾವುದು?

ಆತ್ಮನು ಸ್ವಯಂ ಜ್ಯೋತಿಯೂ ಶುದ್ಧನೂ ಆಗಿರುವನು, ದೇಹವಾದರೋ ಜಡವಾಗಿದ್ದು, ಅಶುದ್ಧವಾಗಿರುತ್ತದೆ. ಇವೆಡನ್ನೂ ಒಂದೆಂದು ತಿಳಿಯುವುದಕ್ಕಿಂತ ಹೆಚ್ಚಿನ ಅಜ್ಞಾನವೇನಿದೆ ?

ಹಿಂದಿನ ಶ್ಲೋಕದಲ್ಲಿ ಆತ್ಮನು ಜ್ಞಾನಮಯ ಅರಿವಿನ ಸ್ವರೂಪವೆಂದು ತಿಳಿಸಿದ್ದಾಯಿತು. ಈ ಜ್ಞಾನವನ್ನು ತಿಳಿಯಲು ಬೇರೊಂದು ಜ್ಞಾನದ ಆವಶ್ಯಕತೆ ಇಲ್ಲ. ಅದು ತಾನೇ ತಾನಾಗಿ ತನ್ನ ಇರುವಿಕೆಯನ್ನು ಪ್ರಕಟಗೊಳಿಸುತ್ತಿರುತ್ತದೆ. ಕತ್ತಲೆ ಕೋಣೆಯಲ್ಲಿ ನನ್ನ ಇರುವಿಕೆಯನ್ನು ತಿಳಿಯಲು ಬೇರೆ ಹೊರಗಿನ ಬೆಳಕಿನ ಆವಶ್ಯಕತೆ ಇಲ್ಲ. ನಾನು ಸದಾ ಇದ್ದೇನೆ ಎಂಬುದು ಎಲ್ಲರಿಗೂ ಅನುಭವದಲ್ಲಿರುವ ಪ್ರಸಿದ್ಧವಾದ ವಿಚಾರ. ಹೀಗೆ ನಾನು ಸದಾ ಬೆಳಗುತ್ತಿರುವುದು, ತಾನೇ ತಾನಾಗಿ ಗುರುತಿಸಲ್ಪಡುತ್ತಿರುವುದರಿಂದ ನನ್ನ ಇರುವಿಕೆಯೇ ಪ್ರಕಾಶ ಸ್ವರೂಪ. ನನ್ನ ಪ್ರಕಾಶವು ಅನಾದಿಯೂ ಅನಂತವೂ ಆಗಿ ನಿತ್ಯವಾಗಿದೆ. ಅನಿತ್ಯತೆ ಎಂಬ ಮಲಿನದಿಂದ ಮುಚ್ಚಲ್ಪಡದೆ ಸದಾ ಸ್ವಚ್ಛ ಅಥವಾ ಶುದ್ಧವಾಗಿದೆ. ದೇಹವಾದರೋ ತಾಮಸ ಅಂದರೆ ಜಡವಾಗಿದೆ. ಅದರ ಇರುವಿಕೆಯನ್ನು ತಿಳಿಯಲು ಬೇರೊಂದು ಬೆಳಕು ಬೇಕೇ ಬೇಕು. ಈ ದೇಹವು ರೋಗ, ಮುಪ್ಪು, ಸಾವುಗಳಿಂದ ಸದಾ ನರಳುತ್ತಿರುತ್ತದೆ. ಪ್ರತಿಯೊಂದು ಕ್ಷಣದಲ್ಲಿಯೂ ಯಾವುದಾದರೊಂದು ಬದಲಾವಣೆಯನ್ನು ಪಡೆಯುತ್ತಾ ಅನಿತ್ಯವಾಗಿರುತ್ತದೆ. ದೇಹದ ಇರುವಿಕೆಯು ತಿಳಿಯಬೇಕಾದರೆ ಆತ್ಮನ ಸನ್ನಿಧಿಯಲ್ಲಿ ಚೈತನ್ಯ ಪಡೆದ ಬುದ್ಧಿ, ಮನಸ್ಸು ಇಂದ್ರಿಯಗಳೇ ಬೇಕು. ಹೀಗೆ ಆತ್ಮ ಪ್ರಕಾಶದಿಂದ ತೋರುವ ದೇಹವನ್ನು ಹಾಗೂ ತಾನೇ ತಾನಾಗಿ ಬೆಳಗುವ ಆತ್ಮನನ್ನು ಒಂದೆಂದು ತಿಳಿಯುವುದಲ್ಲ, ಇದಕ್ಕಿಂತ ಹೆಚ್ಚಿನ ಅಜ್ಞಾನವೇನಿದೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮಾ ನಿತ್ಯೋ ಹಿ ಸದ್ರೂಪೋ ದೇಹೋ ನಿತ್ಯೋ ಹ್ಯಸನ್ಮಯಃ ।
ತಯೋರೈಕ್ಯಂ ಪ್ರಪಶ್ಯನ್ತಿ ಕಿಮಜ್ಞಾನಮತಃ ಪರಂ ॥ ೨೦ ॥

ಆತ್ಮಾ=ಆತ್ಮನು, **ನಿತ್ಯಃ**=ನಿತ್ಯನಾಗಿರುವನು, **ಹಿ**=ಏಕೆಂದರೆ, **ಸದ್ರೂಪಃ** ಸತ್ಸ್ವರೂಪನು, **ದೇಹಃ**=ದೇಹವಾದರೋ, **ಅನಿತ್ಯ**=ಅನಿತ್ಯವು, **ಹಿ**=ಏಕೆಂದರೆ **ಅಸನ್ಮಯಃ**=ಅಸತ್ ರೂಪವಾಗಿದೆ, **ತಯೋಃ**=ಅವೆರಡರಲ್ಲಿ, **ಐಕ್ಯಂ**=ಒಂದೇ ಎಂಬ ಭಾವವನ್ನು **ಪ್ರಪಶ್ಯಂತಿ**=ನೋಡುತ್ತಾರಲ್ಲ, **ಅತಃ ಪರಂ**=ಇದಕ್ಕಿಂತ ಹೆಚ್ಚಿನ, **ಅಜ್ಞಾನಂ**=ಅಜ್ಞಾನವು, **ಕಿಂ**=ಯಾವುದಿದ್ದೀತು ?

ಆತ್ಮನು ಸದ್ರೂಪನಾಗಿರುವುದರಿಂದ, ನಿತ್ಯನಾಗಿರುವನು. ದೇಹವಾದರೋ, ಅಸದ್ರೂಪವಾಗಿರುವುದರಿಂದ ಅನಿತ್ಯವಾಗಿರುವುದು. ಇವೆರಡರಲ್ಲಿಯೂ (ಜನರು) ಒಂದೇ ಭಾವವನ್ನು ಪಡೆದಿದ್ದಾರಲ್ಲ. ಇದಕ್ಕಿಂತ ಹೆಚ್ಚಿನ ಅಜ್ಞಾನ ಯಾವುದಿದ್ದೀತು ?

ಆತ್ಮನು ಸದ್ರೂಪನು ಅವನು ಇರುವುದಿಲ್ಲಾ ಎಂಬುದೇ ಇಲ್ಲ. ಕೇವಲ ಇರುವಿಕೆಯೇ ಅವನ ಸ್ವಭಾವ. ಹೀಗೆ ಅವನು ಸದ್ರೂಪನಾಗಿದ್ದು ಎಲ್ಲವನ್ನೂ ಅರಿಯುತ್ತಿರುವುದರಿಂದ ಕಾಲವನ್ನೂ ಅರಿಯುತ್ತಿದ್ದಾನೆ. ಅಂದರೆ ಕಾಲವೂ ಇವನ ಅರಿವಿಗೆ ವಿಷಯವಾಗಿರುತ್ತದೆ. ವಿಷಯವಾದ ಕಾಲದ ಧರ್ಮವು ವಿಷಯಿಯಾದ ಆತ್ಮನಿಗೆ ಅಂಟುವ ಸಂಭವವೇ ಇಲ್ಲ. ಆದ್ದರಿಂದ ಅವನ ಇರುವಿಕೆಯು ಕಾಲಾಧೀನವಲ್ಲ. ಅವನು ಕಾಲಾತೀತನು ಅಂದರೆ ನಿತ್ಯನೇ ಆಗಿದ್ದಾನೆ. ದೇಹವಾದರೋ ಅಸದ್ರೂಪ. ಹುಟ್ಟುವುದಕ್ಕೆ ಮೊದಲು ಇರಲಿಲ್ಲ. ಹುಟ್ಟಿದ ಮೇಲೆ ಕಣಕಣಗಳಲ್ಲಿಯೂ ಪ್ರತಿ ಕ್ಷಣದಲ್ಲಿಯೂ ವೃದ್ಧಿ ಅಥವಾ ಕ್ಷಯವನ್ನು ಪಡೆಯುತ್ತಿರುತ್ತದೆ. ಅದು ಯಾವಾಗಲೂ ಒಂದೇ ರೂಪದಲ್ಲಿ ಇರುವುದಿಲ್ಲ. ಅದು ಅಸದ್ರೂಪವೇ ಸರಿ. ಹೀಗೆ ವಿಕಾರವನ್ನು ಪಡೆಯುತ್ತಿರುವ ದೇಹವು ಒಂದಾನೊಂದು ದಿನ ಇಲ್ಲದೆಯೇ ಹೋಗುತ್ತದೆ. ಹೀಗೆ ಕಾಲದಲ್ಲಿಯೇ ಹುಟ್ಟಿ, ಕಾಲದಲ್ಲಿಯೇ ಇದ್ದು, ಕಾಲದಲ್ಲಿ ನಾಶವಾಗುವುದರಿಂದ, ಈ ದೇಹದ ಇರುವಿಕೆಯು ಕಾಲಕ್ಕೆ ಕಟ್ಟು ಬಿದ್ದಿದೆ. ಅಂದರೆ ಅನಿತ್ಯವಾಗಿದೆ. ಹೀಗೆ ಜರಾಮರಣಗಳಿಂದ ನರಳುತ್ತಿರುವ ದೇಹವನ್ನೇ ತಾವೆಂದುಕೊಂಡುತ್ತಿರುವುದರಿಂದ ಜನರು ಮುಪ್ಪು ಸಾವುಗಳ ಭಯದಿಂದ ನರಳುತ್ತಿದ್ದಾರಲ್ಲಾ ಇದಕ್ಕಿಂತ ಹೆಚ್ಚಿನ ಅಜ್ಞಾನ ಏನಿದೆ ?

೧೨. ಆತ್ಮ-ಅನಾತ್ಮ

ಆತ್ಮನಸ್ತತ್ಪ್ರಕಾಶತ್ವಂ ಯತ್ಪದಾರ್ಥವ ಭಾಸನಮ್ ।
ನಾಗ್ನ್ಯಾದಿದೀಪ್ತಿವದ್ದೀಪ್ತಿರ್ಭವತ್ಯಾಂಧ್ಯಂ ಯತೋ ನಿಶಿ ॥ ೨೨ ॥

ಯತ್=ಯಾವ, **ಪದಾರ್ಥ**=ಜಗತ್ತಿನ ವಸ್ತುಗಳ, **ಅವಭಾಸನಂ**=ತೋರುವಿಕೆಯ ಅನುಭವವಾಗುತ್ತಿದೆಯೋ, **ತತ್**=ಅದೇ, **ಆತ್ಮನಃ**=ಆತ್ಮನ, **ಪ್ರಕಾಶತ್ವಂ**=ಪ್ರಕಾಶಸ್ವರೂಪಿಕೆ ಆಗಿದೆ, **ಅಗ್ನಿ ಆದಿ**=ಅಗ್ನಿಯೇ ಮುಂತಾದ, **ದೀಪ್ತಿ**

Sri Vidyabharathi Book Centre, Sringeri

CC-O. In Public Domain. Digitized by eGangotri

ವತ್=ಬೆಳಗುವ ಪದಾರ್ಥಗಳ ಹಾಗೆ, **ದೀಪ್ತಿಃ**=ಬೆಳಗುವಿಕೆಯು **ನ**=ಅಲ್ಲ, **ಯತಃ**=ಏಕೆಂದರೆ, **ನಿಸಿ**=ರಾತ್ರಿಯಲ್ಲಿ, **ಆಂಧ್ಯಂ**=ಕತ್ತಲೆಯು, **ಭವತಿ**= ಉಂಟಾಗುತ್ತದೆ.

ಜಗತ್ತಿನ ಪದಾರ್ಥಗಳ ತೋರುವಿಕೆಯ ಅನುಭವ ಆಗುತ್ತಿರುವುದೇ ಆತ್ಮನ ಪ್ರಕಾಶಿಸುವಿಕೆ. ಅಗ್ನಿಯೇ ಮುಂತಾದವು ಬೆಳಕು ಕೊಡುವ ಹಾಗೆ ಈ (ಆತ್ಮನ) ಬೆಳಗುವಿಕೆಯು ಅಲ್ಲ. ಏಕೆಂದರೆ ರಾತ್ರಿಯಲ್ಲಿ ಕತ್ತಲೆಯು ಉಂಟಾಗುತ್ತದೆ.

ಹಿಂದೆ ಇಪ್ಪತ್ತನೆಯ ಶ್ಲೋಕದಲ್ಲಿ ಆತ್ಮನು ಪ್ರಕಾಶಕನು ಎಂದು ಹೇಳಿರುವುದರಿಂದ ಆತ್ಮನು ಬೆಂಕಿ, ದೀಪ, ಸೂರ್ಯ-ಚಂದ್ರಾದಿಗಳಂತೆ ಕತ್ತಲೆಯನ್ನು ಹೋಗಲಾಡಿಸುವ ಬೆಳಕುಳ್ಳವನು ಎಂದು ಜನರು ಅರ್ಥಮಾಡಿಕೊಳ್ಳಬಹುದು. ಆತ್ಮನ ಪ್ರಕಾಶವು ಇಂತಹುದಲ್ಲವೆಂದು ಅನುಭವ ಆಧಾರಿತ ಯುಕ್ತಿಯಿಂದ ವಿವರಿಸಲು ಈ ಶ್ಲೋಕವು ಬಂದಿದೆ.

ರಾತ್ರಿಯಲ್ಲಿ ಕತ್ತಲೆ ಇರುವುದು ಎಲ್ಲರ ಅನುಭವದಲ್ಲಿಯೂ ಇದೆ. ಆದರೆ ಈ ಕತ್ತಲೆಯನ್ನು ಅಗ್ನಿ ಸೂರ್ಯಾದಿಗಳು ಬೆಳಗಿ ತೋರಿಸಲಾರವು. ಏಕೆಂದರೆ ಅವುಗಳ ಬೆಳಕಿಗೆ ಕತ್ತಲೆಯು ವಿರುದ್ಧವಾಗಿದೆ. ಅವುಗಳು ಇಲ್ಲದಾಗಲೇ ಕತ್ತಲೆಯ ಇರುವಿಕೆಯು ನಮಗೆ ತಿಳಿದು ಬರುತ್ತದೆ. ಒಂದು ವೇಳೆ ಆತ್ಮನ ಪ್ರಕಾಶ ರೂಪವೂ ಸೂರ್ಯಾದಿಗಳಂತೆ ಬೆಳಕನ್ನು ಚೆಲ್ಲುವುದಾಗಿದ್ದರೆ ರಾತ್ರಿ ಕತ್ತಲೆಯಾಗುತ್ತಿರಲಿಲ್ಲ. ಏಕೆಂದರೆ ಆತ್ಮನು ರಾತ್ರಿಯಲ್ಲೂ ಇರುವವನೇ. ಇದರಿಂದ ತಿಳಿದು ಬರುವುದು ಏನೆಂದರೆ ಆತ್ಮನ ಪ್ರಕಾಶತ್ವವು, ಅಗ್ನಿ ಸೂರ್ಯಾದಿಗಳಂತೆ ಬೆಳಕನ್ನು ಕೊಡುವಂತಹುದಲ್ಲ. ಹಾಗಾದರೆ ಆತ್ಮನ ಪ್ರಕಾಶತ್ವ ಎಂದರೇನು ಎಂದು ಸ್ವಲ್ಪ ವಿಚಾರ ಮಾಡೋಣ. ಸೂರ್ಯಾದಿಗಳು ಬೆಳಗದೇ ಇರುವಾಗ ಜಗತ್ತಿನ ಪದಾರ್ಥಗಳ ರೂಪವು ತಿಳಿಯುವುದಿಲ್ಲ. ಏಕೆಂದರೆ ಪದಾರ್ಥಗಳ ತೋರುವಿಕೆಯು ಸೂರ್ಯಾದಿ ದೀಪದ ಬೆಳಕನ್ನು ಅವಲಂಬಿಸಿದೆ. ಆತ್ಮನ ಪ್ರಕಾಶವು ಇಂತಹುದಲ್ಲ. ಆತ್ಮನ ಪ್ರಕಾಶ ಎಂದರೆ ಪದಾರ್ಥಗಳ ಇರುವಿಕೆಯನ್ನು ತಿಳಿಯ ಪಡಿಸುವ ಶಕ್ತಿಯಾಗಿರುತ್ತದೆ. ಅರಿವಿನ ಸ್ವರೂಪವಾದ ಆತ್ಮನ ಸನ್ನಿಧಿಯಲ್ಲಿ ಅಹಂಕಾರ, ಬುದ್ಧಿ, ಮನಸ್ಸು ಇಂದ್ರಿಯಗಳು, ಚೈತನ್ಯಗೊಂಡು ಅವುಗಳ ಮೂಲಕ ಜಗತ್ತಿನ ಪದಾರ್ಥಗಳ ಇರುವಿಕೆಯನ್ನು ಅರಿಯುವಂತೆ ಮಾಡುತ್ತಾನೆ. ಕುರುಡನಿಗೆ ಕಣ್ಣುಗಳು ಇಲ್ಲದೆ ಹೋದರೂ, ಪದಾರ್ಥಗಳು ದೀಪಾದಿಗಳಿಂದ ಬೆಳಗದೇ ಇದ್ದರೂ ಕೂಡ, ಪದಾರ್ಥಗಳ ಇರುವಿನ ಅರಿವು ಆತ್ಮನ ಸನ್ನಿಧಿಯಿಂದ ಚೈತನ್ಯಗೊಂಡ ಸ್ಪರ್ಶ ಇತ್ಯಾದಿಗಳ ಜ್ಞಾನದಿಂದ ಮೂಡುತ್ತದೆ. ಈ ರೀತಿಯಾಗಿ ಪದಾರ್ಥಗಳ ಇರುವಿಕೆಯ ಅರಿವನ್ನು ಮೂಡಿಸುವ ಲಕ್ಷಣವನ್ನೇ ಆತ್ಮ ಪ್ರಕಾಶ ಎಂದಿರುವುದು.

ಇಷ್ಟೇ ಅಲ್ಲ. ಆತ್ಮನ ಪ್ರಕಾಶಕ್ಕೂ ಅಗ್ನ್ಯಾದಿ ದೀಪಗಳ ಪ್ರಕಾಶಕ್ಕೂ ಅನೇಕ ತಾರತಮ್ಯಗಳುಂಟು. ಆತ್ಮನ ಪ್ರಕಾಶವು ನಿತ್ಯ, ನಿರಂತರ, ಏಕರಸ ಹಾಗೂ ಸ್ವಯಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಯೋತಿಯಾಗಿ ತಾನೇ ತನ್ನ ಇರುವಿಕೆಯನ್ನು ತಿಳಿದುಕೊಳ್ಳುತ್ತದೆ. ಅಗ್ನಿ ಆದಿ ಜ್ಯೋತಿಗಳಾದರೋ ಕ್ರಮಕ್ರಮವಾಗಿ ಆರಿ ಹೋಗುತ್ತವೆ. ಸೂರ್ಯ ಚಂದ್ರಾದಿಗಳೂ ಸಹ ಪ್ರಲಯದಲ್ಲಿ ಇಲ್ಲವಾಗುತ್ತವೆ. ಆದ್ದರಿಂದ ನಿತ್ಯವಲ್ಲ. ಈ ಬೆಳಕುಗಳು ಒಂದೇ ಸಮನಾಗಿರುವುದಿಲ್ಲ. ಹೆಚ್ಚು ಕಡಿಮೆಯಾಗುತ್ತಿರುತ್ತವೆ. ಆದ್ದರಿಂದ ನಿರಂತರವೂ ಅಲ್ಲ ಏಕರಸವೂ ಅಲ್ಲ. ಇವುಗಳು ಜಡವಾದ್ದರಿಂದ ತಮಗೆ ತಾವೇ ತಮ್ಮ ಇರುವಿಕೆಯನ್ನು ಅರಿತುಕೊಳ್ಳಲಾರವು. ಅವುಗಳಲ್ಲಿ ಬೆಳಕಿರುವುದೆಂದು ಗೊತ್ತಾಗುವುದಕ್ಕೂ ಆತ್ಮನ ಪ್ರಕಾಶವೇ ಬೇಕು. ಹೀಗೆ ಸೂರ್ಯಾದಿಗಳ ಬೆಳಕನ್ನು ಆತ್ಮನ ಪ್ರಕಾಶಕ್ಕೆ ಹೋಲಿಸುವುದಕ್ಕೆ ಸಾಧ್ಯವೇ ಇಲ್ಲ.

ದೇಹೋಽಹಮಿತ್ಯಯಂ ಮೂಢೋ ಧೃತ್ವಾ ತಿಷ್ಠತ್ಯಹೋ ಜನಃ ।
ಮಮಾಯಮಿತ್ಯಪಿ ಜ್ಞಾತ್ವಾ ಘಟದ್ರಷ್ಟೇವ ಸರ್ವದಾ ॥ ೨೩ ॥

ಘಟದ್ರಷ್ಟಾ ಇವ=ಮಡಕೆಯನ್ನು ನೋಡುವವನಂತೆ, (ದೇಹದ್ರಷ್ಟಾ=ದೇಹವನ್ನೂ ನೋಡುವವನೇ ಆಗಿ) **ಮಮ**=ನನ್ನದು, **ಅಯಂ**=ಈ ದೇಹವು, **ಇತಿ**=ಹೀಗೆಂದು **ಸರ್ವದಾ**=ಯಾವಾಗಲೂ, **ಜ್ಞಾತ್ವಾ ಅಪಿ**=ತಿಳಿದಿದ್ದರೂ ಸಹ **ಮೂಢಃ ಜನಃ**=ಬುದ್ಧಿ ಹೀನನು, **ಅಯಂ**=ಈ, **ದೇಹೋಽಹಂ**=ದೇಹವೇ ತಾನು, **ಇತಿ**=ಹೀಗೆಂದು, **ಧೃತ್ವಾ**=ನಿಶ್ಚಯ ಮಾಡಿಕೊಂಡು, **ತಿಷ್ಠತಿ**=ನಿಂತಿರುವನಲ್ಲಾ, **ಅಹೋ**=ಇದೆಂತಹ ಆಶ್ಚರ್ಯ !

ಮಡಕೆಯನ್ನು ನೋಡುವವನಂತೆಯೇ ದೇಹವನ್ನೂ ನೋಡುವವನೇ ಆಗಿ ನನ್ನದು ಈ ದೇಹ ಎಂದು ಯಾವಾಗಲೂ ತಿಳಿದಿದ್ದರೂ ಸಹಾ, ಈ ಬುದ್ಧಿ ಹೀನನು ದೇಹವೇ ತಾನು ಎಂದು ನಿಶ್ಚಯ ಮಾಡಿಕೊಂಡು ನಿಂತಿರುವನಲ್ಲಾ, ಅಯ್ಯೋ ಅವನ ಅಜ್ಞಾನಕ್ಕೆ ಏನು ಹೇಳಲಿ !

ನಾನು ದೃಕ್, ಚೈತನ್ಯ ಸ್ವರೂಪನಾಗಿರುವ ಕಾರಣ ದೃಶ್ಯ ಹಾಗೂ ಜಡವಾದ ಮಡಕೆಯನ್ನು ನೋಡುತ್ತಿದ್ದೇನೆ, ಆದ್ದರಿಂದ ವಿರುದ್ಧ ಸ್ವಭಾವಗಳುಳ್ಳ ದೃಕ್ ದೃಶ್ಯಗಳು ಒಂದೇ ಆಗಲು ಸಾಧ್ಯವಿಲ್ಲ. ಈ ಅನುಭವಾನುಸಾರಿಯಾದ ಯುಕ್ತಿ ಆಧಾರದ ಮೇಲೆ, ನಾನು ದೇಹವನ್ನು ನೋಡುತ್ತಿರುವುದರಿಂದ, ನಾನು ದೃಕ್, ದೇಹವು ದೃಶ್ಯ. ದೇಹವು ನಾನಲ್ಲ, ದೇಹವು ನನ್ನದು ಎಂದು ಚೆನ್ನಾಗಿ ತಿಳಿದಿದ್ದರೂ ಸಹ, ದೇಹವು ಕಷ್ಟ ಅಥವಾ ಸುಖಕ್ಕೆ ಒಳಗಾದಾಗ, ದೇಹವು ನನ್ನದು ಎಂಬುದನ್ನು ಮರೆತುಬಿಡುತ್ತೇನೆ. ಆಗ ದೇಹವೇ ನಾನೆಂದುಕೊಂಡು, ಆ ಕಷ್ಟ ಸುಖಗಳು ನನಗೆ ಎಂದುಕೊಂಡು ತಳಮಳಕ್ಕೆ ಒಳಗಾಗುತ್ತೇನೆ. ಅಯ್ಯೋ ಇದೆಂತಹ ದಡ್ಡತನ !

೧೭ ರಿಂದ ೨೩ನೇ ಶ್ಲೋಕದ ವರೆಗೆ ದೇಹ ಮತ್ತು ಆತ್ಮರುಗಳಲ್ಲಿರುವ ಅತ್ಯಂತ ವಿರುದ್ಧ ಸ್ವಭಾವಗಳನ್ನು ತಿಳಿಸಿ, ದೇಹವು ಎಂದೆಂದಿಗೂ ಆತ್ಮವಾಗಲಾರದು, ದೇಹವನ್ನು ಆತ್ಮವೆಂದು ತಿಳಿಯುವುದು ಅತ್ಯಂತ ಮೂಢತನ ಎಂದು ಪ್ರತಿಪಾದಿಸಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri
ಇಲ್ಲಿ, ದೇಹ ಎಂದರೆ ಸ್ಥೂಲ ದೇಹವಷ್ಟೇ ಅಲ್ಲ, ಸೂಕ್ಷ್ಮ ದೇಹಕ್ಕೂ ಅನ್ವಯಿಸುತ್ತದೆ. ಸೂಕ್ಷ್ಮದೇಹವೂ ಕೂಡ ಆತ್ಮನಂತೆ ಒಂದೇ ಅಲ್ಲ. ಚಿತ್ತ, ಅಹಂಕಾರ, ಮನಸ್ಸು ಬುದ್ಧಿಗಳೆಂಬ ರೂಪಗಳಿಂದ ತೋರುತ್ತಿರುತ್ತದೆ. ಹೀಗೆ ತೋರುವ ಅನೇಕಾನೇಕ ಅಂತಃಕರಣದ ವೃತ್ತಿಗಳನ್ನು ಆತ್ಮ ಚೈತನ್ಯವು ದೃಕ್ಕಾಗಿ ಅರಿಯುತ್ತಿರುವುದರಿಂದ ಈ ಸೂಕ್ಷ್ಮ ದೇಹವೂ ಆತ್ಮ ಚೈತನ್ಯವಲ್ಲ. ಆದರೂ ಮೂಢ ಜನರು ಅಜ್ಞಾನದಿಂದ ಮನಸ್ಸಿನ ಶೋಕ ಮೋಹಗಳನ್ನೂ, ಬುದ್ಧಿಯ ದಡ್ಡತನ ಚುರುಕನ್ನೂ, ಚಿತ್ತದಲ್ಲಿನ ಚಿಂತನೆಯನ್ನೂ, ಅಹಂಕಾರದ ಕರ್ತೃತ್ವ ಭೋಕ್ತೃತ್ವಗಳನ್ನೂ ತಮ್ಮ ಮೇಲೆ ಆರೋಪಿಸಿಕೊಂಡು ಕಷ್ಟಪಡುತ್ತಿದ್ದಾರೆ. ಇದೇ ಅಜ್ಞಾನದ ಪರಿಣಾಮ. ಈ ಕಷ್ಟದಿಂದ ಬಿಡುಗಡೆಯಾಗಲು ಅಜ್ಞಾನ ಇಲ್ಲವಾಗಬೇಕು. ಅದಕ್ಕೆ ಜ್ಞಾನ ಒಂದೇ ಸಾಧನವಾಗಿರುವುದರಿಂದ ಮುಂದಿನ ಐದು ಶ್ಲೋಕಗಳಲ್ಲಿ, ಜ್ಞಾನವೆಂದರೇನು ಎಂಬುದನ್ನು ವಿವರಿಸುತ್ತಿದ್ದಾರೆ.

೧೩. ಜ್ಞಾನ

ಬ್ರಹ್ಮೈವಾಹಂ ಸಮಃ ಶಾಂತಃ ಸಚ್ಚಿದಾನಂದ ಲಕ್ಷಣಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ ॥

ಅಹಂ=ನಾನು, **ಸಮಃ**=ಸಮನೂ, **ಶಾಂತಃ**=ಶಾಂತನೂ, **ಸಚ್ಚಿದಾನಂದ ಲಕ್ಷಣಃ**=ಸಚ್ಚಿದಾನಂದ ಸ್ವರೂಪನು, (**ಅಥ**=ಆದ್ದರಿಂದ) **ಬ್ರಹ್ಮ ಏವ**=ಬ್ರಹ್ಮನೇ ಆಗಿದ್ದೇನೆ, **ಅಸದ್ರೂಪಃ**=ಅಸದ್ರೂಪವಾದ, **ದೇಹಃ**=ದೇಹವು, **ನ ಅಹಂ ಹಿ**=ನಾನಲ್ಲವೇ ಅಲ್ಲ, **ಇತಿ**=ಹೀಗೆಂದು ತಿಳಿಯುವುದೇ, **ಜ್ಞಾನಂ**=ಜ್ಞಾನವೆಂದು, **ಬುಧೈಃ**=ಬಲ್ಲವರಿಂದ **ಉಚ್ಯತೇ**=ಹೇಳಲ್ಪಡುತ್ತದೆ.

ನಾನು ಸಮನೂ, ಶಾಂತನೂ, ಸಚ್ಚಿದಾನಂದ ಸ್ವರೂಪನೂ ಆಗಿರುವುದರಿಂದ ಬ್ರಹ್ಮವೇ ಹೊರತು ಅಸದ್ರೂಪವಾದ ದೇಹವಲ್ಲವೇ ಅಲ್ಲ ಎಂಬ ನಿಶ್ಚಯದಲ್ಲಿ ನಿಲ್ಲುವುದೇ ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ಅಧಿಕಾರಿಯಾದ ಸಾಧಕನು ಸದ್ಗುರುವಿನ ಸಂಪ್ರದಾಯಬದ್ಧ ಉಪದೇಶದಿಂದ ನಿದಿಧ್ಯಾಸನ ಕಾಲದಲ್ಲಿ ಸಮನೂ, ಶಾಂತನೂ, ಸಚ್ಚಿದಾನಂದ ಸ್ವರೂಪನೂ ಆದ ಆತ್ಮನನ್ನು ಗುರುತಿಸಿಕೊಳ್ಳುತ್ತಾನೆ. ಶ್ರುತಿಗಳು ಇದೇ ಲಕ್ಷಣವುಳ್ಳ ಬ್ರಹ್ಮನು 'ಏಕಃ, ಅದ್ವಿತೀಯಃ' ಎಂದು ಸಾರುತ್ತಿರುವುದರಿಂದ, ನಾನು ಬ್ರಹ್ಮಸ್ವರೂಪವೇ ಹೊರತು ಈ ಅಸದ್ರೂಪವಾಗಿರುವ ದೇಹವಲ್ಲ ಎಂಬ ಈ ಅರಿವಿನಲ್ಲಿ ಅಲುಗಾಡದೇ ನಿಲ್ಲುವುದೇ ಜ್ಞಾನವೆಂದು ವೇದಾಂತ ಸಿದ್ಧಾಂತವನ್ನು ಬಲ್ಲವರು ಹೇಳುತ್ತಾರೆ.

ಸ್ಥೂಲ ಸೂಕ್ಷ್ಮ ದೇಹಗಳೆರಡೂ ಅಸದ್ರೂಪವೇ. ಏಕೆಂದರೆ ಅವುಗಳು ಕ್ಷಣ ಕ್ಷಣಕ್ಕೂ ಬದಲಾವಣೆ ಹೊಂದುತ್ತಾ ಬಾಲ್ಯಾದಿ ಅವಸ್ಥೆಗಳನ್ನೂ, ಜಾಗ್ರದಾದಿ ಅವಸ್ಥೆಗಳನ್ನೂ ಪಡೆಯುತ್ತಿವೆ. ಇವುಗಳು ಸ್ವತಂತ್ರವಾಗಿ ಇರುವುದಿಲ್ಲ. ಆತ್ಮನ ಅರಿವಿಗೆ
Sri Vidyabharathi Book Centre, Sringeri

CC-O. In Public Domain. Digitized by eGangotri

ಅಧೀನವಾಗಿ ಮಾತ್ರ ತೋರಬಲ್ಲವು. ಆತ್ಮನಾದರೊ ಸದ್ರೂಪ. ಸ್ವತಂತ್ರವಾಗಿ ತಾನೇ ತಾನಾಗಿ ತೋರಬಲ್ಲ ಸ್ವಯಂ ಜ್ಯೋತಿ. ದೇಶತಃ, ವಸ್ತುತಃ, ಕಾಲತಃ ಪರಿಮಿತಿಯನ್ನು ಪಡೆಯದೇ ಇರುವ ಕಾರಣ ಯಾವಾಗಲೂ ಒಂದೇ ಸಮನಾಗಿ ಯಾವ ಏರುಪೇರೂ ಇಲ್ಲದೇ ಇರುತ್ತಾನೆ. ಆದ್ದರಿಂದ ಸದ್ರೂಪನು. ಸದ್ರೂಪನಾದ ಆತ್ಮನೇ ತಾನು. ಅಸದ್ರೂಪವಾದ ದೇಹವು ತಾನಲ್ಲವೇ ಅಲ್ಲ ಎಂಬ ದೃಢ ನಿಶ್ಚಯದಲ್ಲಿ ಮರೆಯದೇ ಇರುವುದೇ ಜ್ಞಾನವೆಂದು ಅನುಭವಿಗಳು ಹೇಳುತ್ತಾರೆ.

ನಿರ್ವಿಕಾರೋ ನಿರಾಕಾರೋ ನಿರವದ್ಯೋಽಹಮವ್ಯಯಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ
॥ ೨೫ ॥

ಅಹಂ=ನಾನು. **ನಿರ್ವಿಕಾರಃ**=ನಿರ್ವಿಕಾರನು. **ನಿರಾಕಾರಃ**=ಆಕಾರವಿಲ್ಲದವನು. **ನಿರವದ್ಯಃ**=ಗುಣದೋಷಗಳಿಲ್ಲದವನು. (ಆದ್ದರಿಂದ) **ಅವ್ಯಯಃ**=ನಾಶರಹಿತನು ಆಗಿರುತ್ತೇನೆ. **ಅಸದ್ರೂಪಃ**=ಅಸದ್ರೂಪವಾದ, **ದೇಹಃ**=ದೇಹವು, **ನ ಅಹಂ ಹಿ**=ನಾನಲ್ಲವೇ ಅಲ್ಲ, **ಇತಿ**=ಹೀಗೆಂದು ತಿಳಿಯುವುದೇ, **ಜ್ಞಾನಂ**=ಜ್ಞಾನವೆಂದು, **ಬುಧೈಃ**=ಬಲ್ಲವರಿಂದ, **ಉಚ್ಯತೇ**=ಹೇಳಲ್ಪಡುತ್ತದೆ.

ನಾನು ಯಾವ ವಿಕಾರವೂ ಇಲ್ಲದವನು, ಆಕಾರವೇ ಇಲ್ಲದವನು, ಗುಣದೋಷಗಳೂ ಇಲ್ಲದವನು ಆಗಿರುವುದರಿಂದಲೇ ನಾಶರಹಿತನೂ ಆಗಿದ್ದೇನೆ. ಅಸದ್ರೂಪವಾದ ದೇಹವು ನಾನು ಅಲ್ಲವೆ ಅಲ್ಲ, ಎಂಬ ನಿಶ್ಚಯದಲ್ಲಿ ನಿಲ್ಲುವುದೇ ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ವಿಕಾರ ಎಂದರೆ ಯಾವುದಾದರೊಂದು ಕಾರಣದಿಂದ ಉಂಟಾದ ಕಾರ್ಯವೆಂದೂ ಅರ್ಥವಾಗುತ್ತದೆ. ಆತ್ಮನು ಅನಾದಿ ಎಂದು ಶ್ರುತಿಯು ಹೇಳುವುದರಿಂದ ಅದು ಯಾವುದರ ಕಾರ್ಯವೂ ಅಲ್ಲ, ನಿರ್ವಿಕಾರವೇ ಆಗಿರುತ್ತದೆ. ಆದ್ದರಿಂದಲೇ ಯಾವ ಆಕಾರ ಅಥವಾ ರೂಪವೂ ಇಲ್ಲದ ನಿರಾಕಾರವಾಗಿದೆ. ಆಕಾರವಿರುವುದಕ್ಕೆ ಗುಣದೋಷಗಳಿರುವುದು ಕಂಡುಬರುತ್ತದೆ. ಇದಕ್ಕೆ ಆಕಾರವೇ ಇಲ್ಲದ ಕಾರಣ ಇದು ನಿರವದ್ಯ ಆಗಿರುತ್ತದೆ. ಗುಣದೋಷಗಳಿರುವ ವಸ್ತು ಗುಣದೋಷಗಳು ಹೆಚ್ಚು ಕಡಿಮೆಯಾಗುವುದರ ಮೂಲಕ ವ್ಯಯ ಅಥವಾ ನಾಶವನ್ನು ಹೊಂದುತ್ತದೆ. ಆತ್ಮನಲ್ಲಿ ಗುಣದೋಷಗಳೇ ಇಲ್ಲದ ಕಾರಣ, ನಾಶವಿಲ್ಲದ ಅವ್ಯಯನೇ ಆಗಿರುತ್ತಾನೆ.

ದೇಹವಾದರೋ ಅಸದ್ರೂಪ, ಅಂದರೆ ಕ್ಷಣ ಕ್ಷಣಕ್ಕೂ ಬದಲಾವಣೆ ಹೊಂದುತ್ತಿರುವುದು. ಇದು ಪ್ರಾರಬ್ಧ ಕರ್ಮದ ಕಾರ್ಯವಾಗಿರುತ್ತದೆ. ಆರು ವಿಧವಾದ ವಿಕಾರಗಳನ್ನು ಪಡೆಯುತ್ತಿರುತ್ತದೆ. ಇವು ಯಾವುವೆಂದರೆ ಹುಟ್ಟುವುದು, ಇರುವುದು, ಬೆಳೆಯುವುದು, ಬದಲಾವಣೆ ಹೊಂದುವುದು, ಕ್ಷೀಣವಾಗುವುದು ಹಾಗೂ ನಾಶವಾಗು

Sri Vidyabharathi Book Centre, Sringeri

CC-O. In Public Domain. Digitized by eGangotri
ವುದು. ಆದ್ದರಿಂದ ಈ ದೇಹವು ನಿರ್ವಿಕಾರವೂ ಅಲ್ಲ. ಪರಿಚ್ಛಿನ್ನವಾದ ಪುರುಷಾಕಾರವಿರುವುದರಿಂದ, ನಿರಾಕಾರವೂ ಅಲ್ಲ. ಅನೇಕಾನೇಕ ಗುಣದೋಷಗಳಿಂದ ಕೂಡಿದ್ದಾಗಿರುತ್ತದೆ. ಆದ್ದರಿಂದ ನಾಶವನ್ನು ಹೊಂದುವುದೇ ಆಗಿದೆ.

ಹೀಗೆ ಆತ್ಮನಿಗಿಂತ ಅತ್ಯಂತ ವಿಲಕ್ಷಣವಾದ ದೇಹವು ನಾನಲ್ಲವೇ ಅಲ್ಲ ಎಂಬ ದೃಢ ನಿಶ್ಚಯದಲ್ಲಿ ನಿಲ್ಲುವುದೇ ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ನಿರಾಮಯೋ ನಿರಾಭಾಸೋ ನಿರ್ವಿಕಲ್ಪೋಽಹಮಾತತಃ ।
ನಾಹಂ ದೇಹೋ ಹ್ಯಸದ್ರೂಪೋ ಜ್ಞಾನಮಿತ್ಯುಚ್ಯತೇ ಬುಧೈಃ
॥ ೨೬ ॥

ನಿರಾಮಯಃ=ಕಲ್ಮಷವಿಲ್ಲದವನು, **ನಿರಾಭಾಸಃ**=ಸ್ವಪ್ರಕಾಶನು, **ನಿರ್ವಿಕಲ್ಪಃ**=ವಿಕಲ್ಪಗಳೇ ಇಲ್ಲದವನು, **ಅಹಂ**=ನಾನು, **ಆತತಃ**=ಎಲ್ಲೆಲ್ಲಿಯೂ ವ್ಯಾಪಿಸಿರುವವನು ಆಗಿರುತ್ತೇನೆ, **ಅಸದ್ರೂಪ**=ಅಸದ್ರೂಪವಾದ, **ದೇಹಃ**=ದೇಹವು, **ನ ಅಹಂ ಹಿ**=ನಾನಲ್ಲವೇ ಅಲ್ಲ, **ಇತಿ**=ಹೀಗೆಂದು ತಿಳಿಯುವುದೇ, **ಜ್ಞಾನಂ**=ಜ್ಞಾನವೆಂದು, **ಬುಧೈಃ**=ಬಲ್ಲವರಿಂದ, **ಉಚ್ಯತೇ**=ಹೇಳಲ್ಪಡುತ್ತದೆ.

ಯಾವ ಕಲ್ಮಷವೂ ಇಲ್ಲದವನೂ, ಸ್ವಪ್ರಕಾಶನೂ, ಯಾವ ಕಲ್ಪನೆಗೂ ಅವಕಾಶ ಕೊಡದವನೂ, ಎಲ್ಲೆಲ್ಲಿಯೂ ವ್ಯಾಪಿಸಿರುವವನೂ ಆಗಿರುತ್ತೇನೆ. ಅಸದ್ರೂಪವಾದ ದೇಹವು ನಾನು ಅಲ್ಲವೇ ಅಲ್ಲವೆಂಬ ನಿಶ್ಚಯದಲ್ಲಿ ನಿಲ್ಲುವುದೇ ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ನಿರಾಮಯನೆಂದರೆ ಯಾವ ಕಲ್ಮಷವೂ ಇಲ್ಲದೆ ಅತ್ಯಂತ ಸ್ವಚ್ಛನಾಗಿರುವವನು. ಆತ್ಮನು ಸ್ಥೂಲ ಸೂಕ್ಷ್ಮಗಳೆರಡೂ ಅಲ್ಲವಾದ್ದರಿಂದ ಸ್ಥೂಲ ದೇಹಕ್ಕೆ ಉಂಟಾಗುವ ಮುಪ್ಪು ಸಾವುಗಳಿಲ್ಲ. ಹಸಿವು ಬಾಯಾರಿಕೆಗಳು ಪ್ರಾಣಕ್ಕೆ ಆಗುತ್ತವೆಯೇ ಹೊರತು ಆತ್ಮನಿಗಲ್ಲ. ಮನಸ್ಸನ್ನು ತಳಮಳಗೊಳಿಸುವ ಶೋಕ ಮೋಹಗಳು ಆತ್ಮನನ್ನು ಮುಟ್ಟಲೇ ಆರವು. ಹೀಗೆ ಷಡೂರ್ಮಿಗಳೆಂಬ ಈ ಆರು ಕಶ್ಮಲಗಳು ಇವನನ್ನು ಮುಟ್ಟಲಾರವು. ಆತ್ಮನು ಏಕಃ ಅದ್ವಿತೀಯಃ ಹಾಗೂ ನಿರವಯವನೂ ಆಗಿರುವುದರಿಂದ ಸ್ವಜಾತಿ, ವಿಜಾತಿ ಹಾಗೂ ಸ್ವಗತ–ಭೇದಗಳೆಂಬ ಕಲ್ಮಷಗಳಿಲ್ಲದವನು. ದೇಶತಃ, ವಸ್ತುತಃ, ಕಾಲತಃ ಪರಿಚ್ಛಿನ್ನತೆಯನ್ನು ಪಡೆಯುವುದು ಒಂದು ಕಲ್ಮಷವೇ. ಅನಂತನೂ, ಸರ್ವವ್ಯಾಪಿಯೂ ಆದ ಇವನಲ್ಲಿ ಇಂತಹ ಕಲ್ಮಷವೂ ಇಲ್ಲ. ಆಭಾಸ ಎಂದರೆ ಬೇರೆಯದರ ಸಹಾಯದಿಂದ ಬೆಳಗುವಿಕೆ. ಆತ್ಮನು ನಿರಾಭಾಸನು. ಸ್ವಪ್ರಕಾಶನಾಗಿ ತಾನೇ ತಾನಾಗಿ ಬೆಳಗುವವನೇ ಹೊರತು ತನ್ನ ಇರುವಿಕೆಗೆ ಬೇರೆಯ ಬೆಳಕನ್ನು ಅಪೇಕ್ಷಿಸುವುದಿಲ್ಲ. ಆತ್ಮನು ಜ್ಞಾನ ಘನನಾಗಿ ಅರಿವಿನ ಸ್ವರೂಪದಿಂದ ತನ್ನ ಇರುವಿಕೆಯನ್ನು ತಾನೇ ಪ್ರಕಾಶಿಸುತ್ತಾನೆ. ಅಂದರೆ ದೀಪದಂತಹ ಬೆಳಕಿನ ಸ್ವರೂಪವಲ್ಲ ಇವನದು. ಆತ್ಮನು ನಿರ್ವಿಕಲ್ಪನು ಎಂದರೆ ಯಾವ ವಿಕಲ್ಪಗಳೂ ಇಲ್ಲದವನು. ಸ್ಥೂಲ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಹಕ್ಕೆ ಇರುವ ಬಾಲ್ಯಾದಿ ಅವಸ್ಥೆಗಳೂ, ಷಡ್ವಿಕಾರಗಳೂ, ಕರ್ತೃತ್ವ ಭೋಕ್ತೃತ್ವಗಳೂ ಹಾಗೂ ಸೂಕ್ಷ್ಮದೇಹದಲ್ಲಿ ತೋರುವ ಸುಖದುಃಖಾದಿಗಳೂ ಕಾಮ ಕ್ರೋಧಾದಿಗಳೂ ಈ ಯಾವ ವಿಕಲ್ಪಗಳೂ ಆತ್ಮನನ್ನು ಮುಟ್ಟಲಾರವು. ಏಕೆಂದರೆ ಏಕನೂ ಅದ್ವಿತೀಯನೂ ಆದ ಆತ್ಮನ ಪಾರಮಾರ್ಥಿಕ ಸತ್ಯದಲ್ಲಿ ಇವುಗಳಿಗೆಲ್ಲಾ ಅಸ್ತಿತ್ವವೇ ಇಲ್ಲ. ಆದ್ದರಿಂದ ನಿರ್ವಿಕಲ್ಪನು. ಆತತಃ ಅಂದರೆ ಆತ್ಮನು ಸರ್ವವ್ಯಾಪಕನು. ಆತ್ಮನು ಸರ್ವವ್ಯಾಪಕನೇ ಆಗಿದ್ದರೂ ಅಜ್ಞಾನಿಯು ಚೈತನ್ಯಾಭಾಸವುಳ್ಳ ಪುರುಷಾಕಾರ ದೇಹವನ್ನೇ ತಾನೆಂದುಕೊಂಡಿದ್ದಾನೆ. ಅವನ ದೃಷ್ಟಿಯಲ್ಲಿ ಆತ್ಮನು ದೇಹಕ್ಕೆ ಕಟ್ಟುಬಿದ್ದಿರುವಂತೆ ತೋರುತ್ತಾನೆ. ಸದ್ಗುರುವಿನ ಉಪದೇಶದಿಂದ ಇದು ಸರಿಯಲ್ಲವೆಂದು ಗೊತ್ತಾಗುತ್ತದೆ. ನೀರಿನ ಮೇಲೆ ತೋರುವ ಅಲೆ, ನೊರೆ, ತೆರೆಗಳು ನೀರಿನಿಂದ ವ್ಯಾಪ್ತವಾಗಿದೆ ಎನ್ನುವುದು ಅಲೆ, ನೊರೆ, ತೆರೆಗಳ ದೃಷ್ಟಿಯಿಂದ. ನೀರಿನ ದೃಷ್ಟಿಯಲ್ಲಿ ಅಲೆ, ನೊರೆ, ತೆರೆಗಳು ಇಲ್ಲವೇ ಇಲ್ಲ. ಇರುವುದೆಲ್ಲಾ ನೀರೊಂದೇ. ಹಾಗೆಯೇ ಈ ಜಗತ್ತೆಲ್ಲವನ್ನೂ ನೋಡುತ್ತಿರುವ ಸಾಧಕನಿಗೆ ಆತ್ಮನು ಸರ್ವವ್ಯಾಪಕನೆಂಬ ಪದದಿಂದ ಲಕ್ಷಿತನಾಗಿ ತಿಳಿಸಲ್ಪಡುತ್ತಾನೆ. ಪಾರಮಾರ್ಥಿಕ ದೃಷ್ಟಿಯಲ್ಲಿ ಜಗತ್ತೂ ಇಲ್ಲ, ಅದನ್ನು ವ್ಯಾಪಿಸುವಿಕೆಯೂ ಇಲ್ಲ. ಇರುವುದೆಲ್ಲಾ ಆತ್ಮ ಒಂದೇ.

ನಿರ್ಗುಣೋ ನಿಷ್ಕ್ರಿಯೋ ನಿತ್ಯೋ ನಿತ್ಯಮುಕ್ತೋಽಹಮಚ್ಯುತಃ ।
ನಾಹಂ ದೇಹೋ ಹ್ಯಸದ್ರೂಪಃ ಜ್ಞಾನಮಿತ್ಯುಚ್ಯತೇ ಬುಧೈಃ ॥
॥ ១೭ ॥

ನಿರ್ಗುಣಃ=ಗುಣಗಳಿಲ್ಲದವನು, **ನಿಷ್ಕ್ರಿಯಃ**=ಕ್ರಿಯೆಗಳಿಲ್ಲದವನು, **ನಿತ್ಯಃ**=ನಿತ್ಯನು, **ನಿತ್ಯ ಮುಕ್ತಃ**=ಸದಾ ಮುಕ್ತನು (ಆದ) **ಅಹಂ**=ನಾನು, **ಅಚ್ಯುತಃ**=ಚ್ಯುತಿ ಇಲ್ಲದವನು, **ಅಸದ್ರೂಪಃ**=ಅಸದ್ರೂಪವಾದ, **ದೇಹಃ**=ದೇಹವು, **ನ ಅಹಂ ಹಿ**=ನಾನು ಅಲ್ಲವೇ ಅಲ್ಲ, **ಇತಿ**=ಹೀಗೆಂದು ತಿಳಿಯುವುದೇ **ಜ್ಞಾನಂ**=ಜ್ಞಾನವೆಂದು, **ಬುಧೈಃ**=ಬಲ್ಲವರಿಂದ, **ಉಚ್ಯತೇ**=ಹೇಳಲ್ಪಡುತ್ತದೆ.

ಗುಣಗಳಿಲ್ಲದವನೂ, ಕ್ರಿಯೆ ಇಲ್ಲದವನೂ, ನಿತ್ಯನೂ, ನಿತ್ಯಮುಕ್ತನೂ, ಚ್ಯುತಿ ಇಲ್ಲದ ಸ್ವಭಾವದವನೂ ಆದ ನಾನು ಅಸದ್ರೂಪವಾದ ದೇಹವು ಅಲ್ಲವೇ ಅಲ್ಲ ಎಂಬ ನಿಶ್ಚಯದಲ್ಲಿ ನಿಲ್ಲುವುದೇ ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ಆತ್ಮನು ತ್ರಿಗುಣಾತೀತನು. ಗುಣಗಳಿದ್ದರೆ ವಾಸನೆಯು ಚಟುವಟಿಕೆಗೊಂಡು ಸಂಕಲ್ಪಾದಿಗಳ ಮೂಲಕ ಕರ್ಮವು ಪ್ರಾರಂಭವಾಗುತ್ತದೆ. ಗುಣಗಳೇ ಇಲ್ಲದ್ದರಿಂದ ಕರ್ಮವು ಹೇಗೆ ತಾನೇ ಆದೀತು ? ಆದ್ದರಿಂದ ನಿಷ್ಕ್ರಿಯನೇ ಸರಿ. ದೈಹಿಕ, ಮಾನಸಿಕ, ಬೌದ್ಧಿಕ ಬದಲಾವಣೆಗಳನ್ನು ನಾನು ಗುರುತಿಸುತ್ತೇನೆ. ನಾನು ಬದಲಾವಣೆಗೆ ಒಳಪಟ್ಟಿದ್ದವನಾಗಿದ್ದ ಪಕ್ಷದಲ್ಲಿ ಅವುಗಳನ್ನು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ನಾನು ಯಾವ ಬದಲಾವಣೆಗಳೂ ಇಲ್ಲದ ಸದ್ರೂಪ. ಆದ್ದರಿಂದಲೇ ನಿತ್ಯನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗಿರುತ್ತೇನೆ. ಯಾವಾಗಲೂ ಮುಕ್ತನಾಗಿರುವ ಸದ್ರೂಪವೇ ನಾನು ಎಂದು ತಿಳಿಯದ ಬಂಧಿತರು ಎಂದುಕೊಂಡಿದ್ದೇವೆ. ಬಂಧನವೆಂಬುದು ಇರಲೇ ಇಲ್ಲ, ಇಲ್ಲವೂ ಇಲ್ಲ, ಎಂದೆಂದಿಗೂ ಇರುವುದೂ ಇಲ್ಲ ಎಂದು ತಿಳಿದುಕೊಳ್ಳುವುದೇ ಮುಕ್ತಿ. ಇಂತಹ ನಿತ್ಯ ಮುಕ್ತ ಸದ್ರೂಪ ಆತ್ಮನಿಗೆ ಚ್ಯುತಿ ಎಂದರೆ ಲೋಪ ದೋಷಗಳಿಂದ ಹೆಚ್ಚು ಕಡಿಮೆ ಯಾಗುವುದು ಸಾಧ್ಯವೇ ಇಲ್ಲ. ಆದ್ದರಿಂದ ಅಚ್ಯುತನೇ ಆಗಿರುತ್ತೇನೆ.

ನಿರ್ಮಲೋ ನಿಶ್ಚಲೋಽನನ್ತಃ ಶುದ್ಧೋಽಹಮಜರೋಽಮರಃ ।
ನಾಹಂ ದೇಹೋ ಹ್ಯಸದ್ರೂಪಃ ಜ್ಞಾನಮಿತ್ಯುಚ್ಯತೇ ಬುಧೈಃ ॥೨೮॥

ನಿರ್ಮಲಃ=ದೋಷವಿಲ್ಲದವನು, **ನಿಶ್ಚಲಃ**=ಚಲನವಿಲ್ಲದವನು, **ಅನಂತಃ** =ಅಂತವಿಲ್ಲದವನು, ಶುದ್ಧಃ=ಶುದ್ಧನು, **ಅಜರಃ**=ಮುಪ್ಪಿಲ್ಲದವನು, **ಅಮರಃ** =ಮರಣವಿಲ್ಲದವನು, (ಆದ ನಾನು) **ಅಸದ್ರೂಪಃ**=ಅಸದ್ರೂಪವಾದ **ದೇಹಃ** =ದೇಹವು, **ನ ಅಹಂ ಹಿ**=ನಾನು ಅಲ್ಲವೇ ಅಲ್ಲ. **ಇತಿ**=ಹೀಗೆಂದು ತಿಳಿಯುವುದೇ, **ಜ್ಞಾನಂ**=ಜ್ಞಾನವೆಂದು. **ಬುಧೈಃ**=ಬಲ್ಲವರಿಂದ, **ಉಚ್ಯತೇ**=ಹೇಳಲ್ಪಡುತ್ತದೆ.

ದೋಷವಿಲ್ಲದವನೂ, ಚಲನವಿಲ್ಲದವನೂ, ಕೊನೆಯಿಲ್ಲದವನೂ, ಶುದ್ಧನೂ ಮುಪ್ಪು ಸಾವುಗಳಿಲ್ಲದವನೂ ಆದ ನಾನು ಅಸದ್ರೂಪವಾದ ದೇಹವು ಅಲ್ಲವೇ ಅಲ್ಲ, ಎಂಬ ನಿಶ್ಚಯದಲ್ಲಿ ನಿಲ್ಲುವುದೇ ಜ್ಞಾನವೆಂದು ಬಲ್ಲವರು ಹೇಳುತ್ತಾರೆ.

ದೇಶತಃ ಕಾಲತಃ ವಸ್ತುತಃ ಇರುವ ಬಂಧನಗಳೇ ಮಲ ಅಥವಾ ದೋಷ. ತ್ರಿಕಾಲಾತೀತನೂ ಸರ್ವವ್ಯಾಪಿಯೂ ಆದ ನಾನು ನಿರ್ಮಲನೇ ಸರಿ. ಸರ್ವವ್ಯಾಪಿಯಾಗಿರುವುದರಿಂದ ಚಲಿಸಲು ನಾನಿಲ್ಲದ ಜಾಗವೇ ಇಲ್ಲ. ಆದ್ದರಿಂದ ನಿಶ್ಚಲನೂ, ಅನಂತನೂ ಆಗಿರುತ್ತೇನೆ. ಏಕಃ ಅದ್ವಿತೀಯಃ ಆಗಿರುವುದರಿಂದ, ಆ ಪಾರಮಾರ್ಥಿಕ ಸತ್ಯದಲ್ಲಿ ನನ್ನನ್ನು ಮುಟ್ಟಿ ಅಶುದ್ಧ ಮಾಡಲು, ಏನೂ ಇಲ್ಲವೇ ಇಲ್ಲ. ಆದ್ದರಿಂದ ನಾನು ಶುದ್ಧನು. ಈ ಸ್ಥೂಲ ದೇಹವು ಮುಪ್ಪು ಸಾವನ್ನು ಪಡೆಯುತ್ತದೆ. ದೇಹಕ್ಕಿಂತ ವಿಲಕ್ಷಣನಾದ ಆತ್ಮನು ಮುಪ್ಪು ಸಾವುಗಳಿಲ್ಲದವನು. ಅಮರ ಎಂದರೆ ಸಾವಿಲ್ಲದವನಷ್ಟೇ ಅಲ್ಲ, ಹುಟ್ಟಿಲ್ಲದವನೂ ಎಂದು ಅರ್ಥ ಮಾಡಿಕೊಳ್ಳಬೇಕು.

ಅನಾದಿ ಕಾಲದಿಂದ ನಾನೇ ದೇಹವೆಂದು ಘಟ್ಟಿಯಾಗಿ ತಿಳಿದುಕೊಂಡು ವ್ಯವಹರಿಸುತ್ತಿರುವ ಅಜ್ಞಾನಿಯು ಸಂಸಾರದಲ್ಲಿ ಸಿಕ್ಕಿಕೊಂಡು ಸುಖ, ದುಃಖ, ಜರಾಮರಣ ಆದಿಗಳನ್ನು ಪಡೆದು ಬಹಳ ಕಷ್ಟಪಡುತ್ತಿದ್ದಾನೆ. ಹೀಗೆ ದೇಹವೆ ತಾನೆಂದುಕೊಳ್ಳುವುದೇ ಸಂಸಾರದ ಕಷ್ಟ–ಕೋಟಲೆಗಳಿಗೆ ಮುಖ್ಯ ಕಾರಣವಾಗಿರುವುದರಿಂದ, ದೇಹವೇ ತಾನಲ್ಲ ಎಂದು ಮೇಲಿನ ಐದು ಶ್ಲೋಕಗಳಲ್ಲಿ ವಿವರಿಸಿ ತಿಳಿಸಿದ್ದಾರೆ. ಪುನಃ ೩೧ನೆಯ ಶ್ಲೋಕದಿಂದ ೩೭ರ ವರೆಗೂ ದೇಹವು ತಾನಲ್ಲವೆಂದು ಮತ್ತೆ ಮತ್ತೆ ವಿವರಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೪. ದೇಹಾತ್ಮವಾದದ ನಿರಾಕರಣೆ

ಸ್ವದೇಹೇ ಶೋಭನಂ ಸನ್ತಂ ಪುರುಷಾಖ್ಯಂ ಚ ಸಮ್ಮತವï |
ಕಿಂ ಮೂರ್ಖ ಶೂನ್ಯಮಾತ್ಮಾನಂ ದೇಹಾತೀತಂ ಕರೋಷಿ ಭೋಃ||

ಭೋಃ ಮೂರ್ಖ=ಎಲೈ ಮೂರ್ಖನೇ, **ಸ್ವದೇಹೇ**=ನಿನ್ನ ದೇಹದಲ್ಲಿಯೇ, **ಶೋಭನಂ**=ಮಂಗಳಕರನಾಗಿ, **ಸನ್ತಂ**=ಇದ್ದುಕೊಂಡು, **ಪುರುಷಾಖ್ಯಂ**=ಪುರುಷನೆಂಬ ಹೆಸರಿನಿಂದ, **ಸಮ್ಮತವï**=ಪ್ರಸಿದ್ಧನಾಗಿರುವ, **ದೇಹಾತೀತಂ**=ದೇಹಾತೀತನಾದ, **ಆತ್ಮಾನಂ**=ಆತ್ಮನನ್ನು, **ಕಿಂ**=ಏತಕ್ಕೆ, **ಶೂನ್ಯಂ ಕರೋಷಿ**=ಇಲ್ಲವೆಂದು ಮಾಡುತ್ತೀಯೇ ?

ಎಲೈ ಮೂರ್ಖನೇ ನಿನ್ನ ದೇಹದಲ್ಲಿಯೇ ಮಂಗಳಕರನಾಗಿದ್ದುಕೊಂಡು ಪುರುಷನೆಂಬ ಹೆಸರಿನಿಂದ(ಶಾಸ್ತ್ರದಲ್ಲಿ) ಪ್ರಸಿದ್ಧನಾಗಿರುವ ದೇಹಾತೀತನಾದ ಆತ್ಮನ ಇರುವಿಕೆಯನ್ನು ಏಕೆ ಅಲ್ಲಗಳೆಯುತ್ತೀಯೇ?

ಇದುವರೆಗೂ ಆತ್ಮನು ಸ್ಥೂಲ ಸೂಕ್ಷ್ಮ ದೇಹಗಳೆರಡೂ ಅಲ್ಲವೆಂದು ಹೇಳಿದ್ದಾಯಿತು. ನಾವು ವ್ಯವಹಾರ ಮಾಡುವಾಗ ಇವೆರಡು ದೇಹಗಳಲ್ಲಿ ಅಂದರೆ ದೇಹ, ಮನಸ್ಸು, ಬುದ್ಧಿ, ಇಂದ್ರಿಯಗಳು, ಯಾವುದನ್ನಾದರೂ ನಾನು ಅಥವಾ ಆತ್ಮಾ ಎಂದುಕೊಂಡೇ ಹೊರಗಿನ ಪ್ರಪಂಚದೊಡನೆ ವ್ಯವಹರಿಸುತ್ತೇವೆ. ಅನುಭವಾನುಸಾರಿಯಾದ ಯುಕ್ತಿಯಿಂದ ಇವು ಯಾವುವೂ ಆತ್ಮನಲ್ಲವೆಂದು ವಿವರಿಸಿರುವ ಕಾರಣ, ಆತ್ಮನೇ ಇಲ್ಲವೆಂದು ಭಾವಿಸುವ ಸಾಧ್ಯತೆ ಇದೆ. ಇದು ಕೇವಲ ಮೂರ್ಖತನವೇ ಸರಿ. ಏಕೆಂದರೆ ಶ್ರುತಿಗಳಲ್ಲಿ, ಈ ಆತ್ಮನು ಪುರುಷನೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಪುರುಷ ಎಂದರೆ ಸ್ಥೂಲ ಸೂಕ್ಷ್ಮ ದೇಹಗಳೆಂಬ ಪುರದಲ್ಲಿ ಇರುವವನು ಅಥವಾ ದೇಹವನ್ನೆಲ್ಲಾ ಪೂರ್ಣವಾಗಿ ತುಂಬಿರುವವನು. ಇಷ್ಟೇ ಅಲ್ಲ, ಅನುಭವದಲ್ಲಿಯೂ ಆತ್ಮನು ದೇಹಕ್ಕಿಂತ ಭಿನ್ನನಾಗಿ ಮಂಗಳ ಸ್ವರೂಪನಾಗಿದ್ದಾನೆಂದು ತಿಳಿದು ಬರುತ್ತದೆ. ಹೀಗಿರುವ ಆತ್ಮನ ಇರುವಿಕೆಯನ್ನು ಅಲ್ಲಗಳೆಯುವುದು ಸರಿಯಲ್ಲ. ಹಾಗೆ ಮಾಡಿದ್ದೇ ಆದರೆ ಅಂತಹವನು ಪಂಡಿತ ಮೂರ್ಖ ಎನಿಸಿಕೊಳ್ಳುತ್ತಾನೆ. ಈ ಮೂಲಕ ಆಚಾರ್ಯರು ಶಾಸ್ತ್ರವನ್ನು ಅಪಾರ್ಥ ಮಾಡುವ ಶೂನ್ಯವಾದಿಗಳನ್ನು ತಳ್ಳಿ ಹಾಕುತ್ತಿದ್ದಾರೆ.

ಸ್ವಾತ್ಮಾನಂ ಶೃಣು ಮೂರ್ಖತ್ವಂ ಶ್ರುತ್ಯಾ ಯುಕ್ತ್ಯಾ ಚ
ಪೂರುಷಮï |
ದೇಹಾತೀತಂ ಸದಾಕಾರಂ ಸುದುರ್ದಶಂ ಭವಾದೃಶೈಃ || ೩೦ ||

ಮೂರ್ಖ=ಎಲೈ ಮೂರ್ಖನೇ!, **ಶ್ರುತ್ಯಾ**=ಶ್ರುತಿಯಿಂದಲೂ, **ಚ**=ಮತ್ತು, **ಯುಕ್ತ್ಯಾ**=ಯುಕ್ತಿಯಿಂದಲೂ, **ಪೂರುಷಂ**=ಪುರುಷನೆನಿಸಿಕೊಂಡವನಾಗಿ, **ದೇಹಾತೀತಂ**=ದೇಹಗಳೆರಡಕ್ಕೂ ಭಿನ್ನನಾಗಿ, **ಸದಾಕಾರಂ**=ಸತ್ಸ್ವರೂಪ

Sri Vidyabharathi Book Centre, Sringeri

CC-O. In Public Domain. Digitized by eGangotri
ನಾಗಿಯೂ, **ಭವಾದೃಶೈಃ**=ನಿನ್ನಂತಹವರಿಗೆ, **ಸುದುರ್ದಶಂ**=ಕಾಣಲು ಬಹು ಕಷ್ಟ ಸಾಧ್ಯವಾಗಿರುವ, **ಸ್ವಾತ್ಮಾನಂ**=ನಿನ್ನ ಆತ್ಮನನ್ನು, **ತ್ವಂ ಶ್ರುಣು**=ತಿಳಿಸಿ ಹೇಳುವೆನು ಕೇಳು.

ಎಲೈ ಮೂರ್ಖನೇ, ಶ್ರುತಿಯಿಂದಲೂ ಯುಕ್ತಿಯಿಂದಲೂ ಪುರುಷ ಎನಿಸಿ ಕೊಂಡವನೂ, ಎರಡು ದೇಹಗಳಿಗಿಂತ ವಿಲಕ್ಷಣವಾಗಿದ್ದರೂ ಸತ್ಸ್ವರೂಪನೇ ಆಗಿ ರುವ, ನಿನ್ನಂತಹವರಿಗೆ ಕಾಣಲು ಬಹು ಕಷ್ಟ ಸಾಧ್ಯವಾಗಿರುವ ನಿನ್ನ ಆತ್ಮನನ್ನು ತಿಳಿಸಿ ಹೇಳುವೆನು ಕೇಳು.

ಆತ್ಮನನ್ನು ತಿಳಿಯಲು ಶ್ರುತಿಯೊಂದೇ ಪ್ರಮಾಣ. ಅದು ಪೂರ್ಣಾನುಭವದ ಆಧಾರದಿಂದ ಕೂಡಿದ ಯುಕ್ತಿಯಿಂದ ಆತ್ಮನನ್ನು ಪುರುಷನೆಂಬ ಹೆಸರಿನಿಂದ ತಿಳಿಸಿ ಹೇಳು ತ್ತದೆ. ಆತ್ಮನು ದೇಹಾತೀತನಾಗಿರುತ್ತಾನೆ. ಆದ್ದರಿಂದ ಇಲ್ಲವೇ ಇಲ್ಲವೆಂದುಕೊಳ್ಳ ಬೇಡ.ಏಕೆಂದರೆ ಅವನು ಸತ್ಸ್ವರೂಪನಾಗಿ ನಿನ್ನಲ್ಲೇ ಇದ್ದಾನೆಂದು ಶ್ರುತಿಯು ತೋರಿಸಿ ಕೊಡುತ್ತದೆ. ಸಾಮಾನ್ಯವಾಗಿ ಜನರು ಇಂದ್ರಿಯಗಳಿಂದ ಹೊರಗಿನ ವಸ್ತುಗಳನ್ನು ತಿಳಿಯುತ್ತಾರೆ. ಇಂದ್ರಿಯಾನುಭವ ಅಭ್ಯಾಸ ಮಾತ್ರ ಇರುವ ಇವರಿಗೆ, ಇಂದ್ರಿಯ ಗಳಿಗೆ ಸಿಕ್ಕದ ವಸ್ತು ಒಂದು ಇದೆ ಎಂಬ ಕಲ್ಪನೆಯೂ ಸಹ ಬರವುದಿಲ್ಲ. ಹೀಗೆ ಇಂದ್ರಿಯಗಳಿಂದ ಆತ್ಮನನ್ನು ತಿಳಿಯುವುದಕ್ಕೆ ಹೊರಟರೆ ಆತ್ಮನು ಸಿಗುವುದಿಲ್ಲ. ಏಕೆಂದರೆ, ಆತ್ಮನಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಗುಣಗಳು ಇಲ್ಲ. ಅವರು ಯುಕ್ತಿಯಿಂದ ತಿಳಿದುಕೊಳ್ಳಲು ಪ್ರಯತ್ನಿಸಿದರೂ ಆತ್ಮನು ಸಿಗುವುದಿಲ್ಲ. ಏಕೆಂದರೆ ಅವರ ಯುಕ್ತಿಯೂ ಕೂಡ ಇಂದ್ರಿಯಾನುಭವದ ಆಧಾರದ ಮೇಲೆಯೇ ನಿಂತಿದೆ. ಹೀಗೆ ಇಂದ್ರಿಯಗಳ ಮೂಲಕ ತಿಳಿದುಕೊಳ್ಳುತ್ತೇವೆಂದು ಹೊರಟಿರುವ ಮೂರ್ಖರಿಗೆ ಆತ್ಮವು ಇಲ್ಲವೇ ಇಲ್ಲವೆಂದಾಗುತ್ತದೆ. ಆದರೆ ಸಂಪ್ರದಾಯಬದ್ಧ ಸದ್ಗುರುವಿನ ಉಪದೇಶದಲ್ಲಿ ಪೂರ್ಣಾನುಭವಕ್ಕೆ ಹೊಂದಿಕೆಯಾದ ಯುಕ್ತಿಯಿಂದ ತಿಳಿಸಲ್ಪಟ್ಟಾಗ ಆತ್ಮನನ್ನು ಗುರುತಿಸಬಲ್ಲನು.

ಅಹಂ ಶಬ್ದೇನ ವಿಖ್ಯಾತ ಏಕ ಏವ ಸ್ಥಿತಃ ಪರಃ ।
ಸ್ಥೂಲಸ್ತ್ವನೇಕತಾಂ ಪ್ರಾಪ್ತಃ ಕಥಂ ಸ್ಯಾದ್ದೇಹಕಃ ಪುಮಾನ್
॥ ೩೦ ॥

ಅಹಂ ಶಬ್ದೇನ=ನಾನು ಎಂಬ ಮಾತಿನಿಂದ, **ವಿಖ್ಯಾತಃ**=ಪ್ರಸಿದ್ಧನಾದ, **ಪರಃ**=ಪರಮಾತ್ಮನು, **ಏಕ ಏವ**=ಒಬ್ಬನೇ, **ಸ್ಥಿತಃ**=ಆಗಿರುವನು, **ಸ್ಥೂಲಃ ತು**=ಸ್ಥೂಲ ದೇಹವಾದರೋ, **ಅನೇಕತಾಂ ಪ್ರಾಪ್ತಃ**=ಅನೇಕವಾಗಿರುವುದು, (ಹೀಗಿರುವಲ್ಲಿ) **ದೇಹಕಃ**= ಈ ಕೆಟ್ಟ ದೇಹವು, **ಕಥಂ**=ಹೇಗೆ, **ಪುಮಾನ್ ಸ್ಯಾತ್**=ಪುರುಷನಾದೀತು ?

'ನಾನು' ಎಂಬ ಮಾತಿನಿಂದ ಪ್ರಸಿದ್ಧನಾದ ಪರಮಾತ್ಮನು ಒಬ್ಬನೇ ಆಗಿರುವನು.
Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಥೂಲ ದೇಹವಾದರೋ ಅನೇಕವಾಗಿರುವುದು. ಹೀಗಿರುವಾಗ ಈ ಕುತ್ಸಿತವಾದ ದೇಹವು ಪುರುಷ ಹೇಗೆ ಆದೀತು ?

ಸಂಪ್ರದಾಯಬದ್ಧ ಸದ್ಗುರುವಿನ ಉಪದೇಶದಲ್ಲಿ ದೃಕ್ ದೃಶ್ಯ ವಿವೇಕದಿಂದ 'ನಾನು' 'ನಾನು' ಎಂದು ಸದಾ ಪ್ರಕಾಶಿಸುತ್ತಿರುವ ಯಾವ ಆತ್ಮನು ಗುರುತಿಸಲ್ಪಟ್ಟಿತೋ ಅವನು ದೇಹದಿಂದ ಅಹಂಕಾರದವರೆಗೆ ಎಲ್ಲಕ್ಕಿಂತಲೂ ಪರಃ ಉತ್ತಮನು. ಇವನೇ ಶ್ರುತಿಯಲ್ಲಿ ಪ್ರಸಿದ್ಧವಾಗಿರುವ ಪುರುಷನು. ಸ್ಥೂಲ ದೇಹವಾದರೋ ಬಾಲ್ಯಾದಿ ಅವಸ್ಥೆಗಳನ್ನೂ, ಜಾಗ್ರದಾದಿ ಅವಸ್ಥೆಗಳನ್ನೂ ಹೊಂದುತ್ತಾ ಅನೇಕಾನೇಕ ಬದಲಾವಣೆಗಳಿಗೆ ಒಳಗಾಗುತ್ತಿದೆ. ಈ ಬದಲಾವಣೆಗಳನ್ನು ಗುರುತಿಸುತ್ತಿರುವ ನಾನು 'ಏಕಃ ಏವ' ಬದಲಾವಣೆಗಳನ್ನು ಪಡೆಯದೆ ಏಕನೂ ಅದ್ವಿತೀಯನೂ ಆಗಿರಲೇ ಬೇಕು. ಹೀಗೆ ಅತ್ಯಂತ ವಿಲಕ್ಷಣವೂ, ಕೀಳುಮಟ್ಟದಲ್ಲಿಯೂ ಇರುವ ದೇಹವು ಪುರುಷನಾಗಲು ಸಾಧ್ಯವೇ ಇಲ್ಲ.

ಅಹಂ ದ್ರಷ್ಟೃತಯಾ ಸಿದ್ಧೋ ದೇಹೋ ದೃಶ್ಯತಯಾ ಸ್ಥಿತಃ ।
ಮಮಾಯಮಿತಿ ನಿರ್ದೇಶಾತ್ ಕಥಂ ಸ್ಯಾದ್ದೇಹಕಃ ಪುಮಾನ್ ॥ ೩೨ ॥

ಅಹಂ='ನಾನು' ಎನ್ನಿಸಿಕೊಳ್ಳುವ ಆತ್ಮನು, **ದ್ರಷ್ಟೃತಯಾ**=ನೋಡುವವನಾಗಿ, **ಸಿದ್ಧಃ**=ಇರುತ್ತಾನೆ, **ದೇಹಃ**=ದೇಹವು, **ದೃಶ್ಯತಯಾ**=ನೋಡಲ್ಪಡತಕ್ಕದ್ದಾಗಿ ಇದೆ, (ಏಕೆಂದರೆ) **ಅಯಂ**=ಈ (ದೇಹವು), **ಮಮ**=ನನ್ನದು, **ಇತಿ**=ಹೀಗೆಂದು, **ನಿರ್ದೇಶಾತ್**=ತೋರಿಸಲ್ಪಡುತ್ತದೆ (ಹೀಗಿರುವಾಗ) **ದೇಹಕಃ**=ಈ ಕೀಳು ದೇಹವು, **ಪುಮಾನ್**=ಪುರುಷನು, **ಕಥಂ ಸ್ಯಾತ್**=ಹೇಗೆ ಆದೀತು ?

'ನಾನು' ಎನಿಸಿಕೊಳ್ಳುವ ಆತ್ಮನು ನೋಡುವಾತನು ಎಂದು ಸ್ವಯಂ ಸಿದ್ಧನಾಗಿರುತ್ತಾನೆ. ದೇಹವಾದರೋ ನೋಡಲ್ಪಡತಕ್ಕದ್ದು ಆಗಿದೆ. ಏಕೆಂದರೆ ಇದು ನನ್ನದು ಎಂದು ತೋರಿಸಿ ಹೇಳುತ್ತೇವೆ. ಹೀಗಿರುವಾಗ ಈ ಕೀಳು ದೇಹವು ಹೇಗೆ ತಾನೆ ಪುರುಷನಾದೀತು ?

ದೃಕ್ ದೃಶ್ಯ ವಿವೇಕದಿಂದ 'ನಾನು' 'ನಾನು' ಎಂದು ದೃಕ್ ಸ್ವರೂಪದಿಂದ ಸ್ವಯಂ ಸಿದ್ಧನಾಗಿ ಅನುಭವಕ್ಕೆ ನಿಲ್ಲುವ ಆತ್ಮನು, ಸದಾ ದೃಶ್ಯವೇ ಆಗಿರುವ ದೇಹವು ಆಗುವುದಿಲ್ಲ. ವ್ಯವಹಾರದಲ್ಲಿ ಸಹ "ಅಯಂ ದೇಹಃ ಮಮ" ಈ ದೇಹವು ನನ್ನದು ಎಂದು ತೋರಿಸಿ ವ್ಯವಹಾರ ಮಾಡುತ್ತೇವೆ. ಹೀಗಿರುವಾಗ, ಈ ಕೀಳು ದೇಹವು 'ತಾನು' 'ತಾನು' ಎಂಬ ಸ್ವಯಂ ಸಿದ್ಧನಾದ ಪುರುಷನು ಆಗಲು ಸಾಧ್ಯವೇ ಇಲ್ಲ.

ಅಹಂ ವಿಕಾರಹೀನಸ್ತು ದೇಹೋ ನಿತ್ಯಂ ವಿಕಾರವಾನ್ ।
ಇತಿ ಪ್ರತೀಯತೇ ಸಾಕ್ಷಾತ್ ಕಥಂ ಸ್ಯಾದ್ದೇಹಕಃ ಪುಮಾನ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಹಂ=ತಾನು ಎನಿಸಿಕೊಳ್ಳುವ ಆತ್ಮನು. **ವಿಕಾರ ಹೀನಃ**=ಯಾವ ಬದಲಾವಣೆಗಳೂ ಇಲ್ಲದವನು, **ತು**=ಆದರೆ **ದೇಹಃ**=ದೇಹವು, **ನಿತ್ಯಂ**=ಯಾವಾಗಲೂ, **ವಿಕಾರವಾನ್**=ಬದಲಾವಣೆ ಪಡೆಯುತ್ತಿರುವುದು, **ಇತಿ**=ಹೀಗೆಂದು, **ಸಾಕ್ಷಾತ್**=ಪ್ರತ್ಯಕ್ಷವಾಗಿ, **ಪ್ರತೀಯತೇ**=ಕಾಣಿಸುತ್ತಿದೆ. (ಹೀಗಿರುವಾಗ) **ದೇಹಕಃ**=ಈ ಕೀಳು ದೇಹವು, **ಪುಮಾನ್**=ಪುರುಷನು, **ಕಥಂ ಸ್ಯಾತ್**=ಹೇಗೆ ಆದೀತು ?

ತಾನು ತಾನು ಎನ್ನಿಸಿಕೊಳ್ಳುವ ಆತ್ಮನು ಯಾವ ಬದಲಾವಣೆಯೂ ಇಲ್ಲದವನು, ದೇಹವಾದರೋ, ಯಾವಾಗಲೂ ಬದಲಾವಣೆಗಳನ್ನು ಪಡೆಯುತ್ತಿರುವುದಂ ಪ್ರತ್ಯಕ್ಷವಾಗಿ ಕಾಣಿಸುತ್ತಿದೆ. ಹೀಗಿರುವಾಗ ಈ ಕುತ್ಸಿತ ದೇಹವು ಹೇಗೆ ತಾನೇ ಪುರುಷನಾದೀತು ?

ಕ್ಷಣ ಕ್ಷಣಕ್ಕೂ ಬೆಳೆಯುವಿಕೆ ಅಥವಾ ಕುಗ್ಗುವಿಕೆ ಎಂಬ ಬದಲಾವಣೆಗಳನ್ನು ದೇಹವು ಕಣಕಣಗಳಲ್ಲಿಯೂ ಪಡೆಯುತ್ತಿದೆ. ಇದನ್ನು ನಾನು ಚೈತನ್ಯಸ್ವರೂಪನಾಗಿ ಗುರುತಿಸುತ್ತಿರುವುದರಿಂದ ನಾನು ಬದಲಾವಣೆಗಳನ್ನು ಪಡೆಯದವನೇ ಆಗಿರಬೇಕು, ಅಂದರೆ ನಿರ್ವಿಕಾರಿಯಾಗಿರಬೇಕು. ಹೀಗೆ ದೇಹವು ಬದಲಾವಣೆಗಳನ್ನು ಉಳ್ಳದ್ದಷ್ಟೇ ಅಲ್ಲ, ನನ್ನಿಂದ ಸಾಕ್ಷಾತ್ತಾಗಿ ನೋಡಲ್ಪಡುತ್ತದೆ. ಆದ್ದರಿಂದ ದೇಹವು ನನಗೆ ವಿಷಯ, ನಾನು ವಿಷಯಿ ಆಗಿರುತ್ತೇನೆ. ಇಂತಹ ದೇಹವು ಎಂದೆಂದಿಗೂ ಪುರುಷನಾಗಲಾರದು, ನಾನು ದೇಹ ಅಲ್ಲ ಎಂಬುದನ್ನು ಮರೆಯಲೇ ಬಾರದು.

ಯಸ್ಮಾತ್ ಪರಮಿತಿ ಶ್ರುತ್ಯಾ ತಯಾ ಪುರುಷ ಲಕ್ಷಣಮ್ ।
ವಿನಿರ್ಣೀತಂ ವಿಮೂಢೇನ ಕಥಂ ಸ್ಯಾದ್ದೇಹಕಃ ಪುಮಾನ್ ॥ ೩೪ ॥

"ಯಸ್ಮಾತ್ ಪರಂ"=ಯಾವನಿಗಿಂತ ಹೆಚ್ಚಿನದು ಇಲ್ಲವೋ, **ಇತಿ**=ಹೀಗೆಂದು, **ತಯಾ ಶ್ರುತ್ಯಾ**=ಆ ಶ್ರುತಿಯಿಂದ (ತಿಳಿಸಲ್ಪಟ್ಟ) **ಪುರುಷ ಲಕ್ಷಣಂ**=ಪುರುಷನ ಸ್ವರೂಪವು, **ವಿಮೂಢೇನ**=ಮೂಢತನವನ್ನು ಹೋಗಲಾಡಿಸಿಕೊಂಡ ಜ್ಞಾನಿಯಿಂದ, **ವಿನಿರ್ಣೀತಂ**=ದೃಢವಾಗಿ ನಿಶ್ಚಯಿಸಲ್ಪಟ್ಟಿದೆ. (ಹೀಗಿರುವಾಗ) **ಕಥಂ ಸ್ಯಾತ್ ದೇಹಕಃ ಪುಮಾನ್**=ಈ ಕನಿಷ್ಠವಾದ ದೇಹವು ಪುರುಷನು ಹೇಗಾದೀತು ?

ಯಾವನಿಗಿಂತ ಹೆಚ್ಚಿನದು ಏನೂ ಇಲ್ಲವೇ ಇಲ್ಲ ಎಂದು ಶ್ರುತಿಯಿಂದ ತಿಳಿಸಲ್ಪಟ್ಟ ಪುರುಷನ ಸ್ವರೂಪವು ಜ್ಞಾನಿಯಿಂದ ಅನುಭವ ಪೂರ್ವಕ ನಿಶ್ಚಯಿಸಲ್ಪಟ್ಟಿದೆ. ಹೀಗಿರುವಾಗ ಈ ದೇಹವು ಪುರುಷನು ಹೇಗಾದೀತು ?

ವಿಮೂಢಃ ಎಂದರೆ ವಿಗತಃ ಮೌಢ್ಯಃ ಯಸ್ಯ ಸಃ—ಯಾವನ ಮೌಢ್ಯವು ಸಂಪೂರ್ಣವಾಗಿ ಹೋಗಿ ಬಿಟ್ಟಿದೆಯೋ ಅವನೇ ವಿಮೂಢನು. ಅಂದರೆ ಜ್ಞಾನದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಜ್ಞಾನವನ್ನು ಇಲ್ಲವಾಗಿಸಿಕೊಂಡ ಜ್ಞಾನಿ. ಇಂತಹ ಜ್ಞಾನಿಯು ಶ್ರುತಿಯಲ್ಲಿ ಹೇಳಿದ ಲಕ್ಷಣಗಳುಳ್ಳ ಪುರುಷನನ್ನು ಅನುಭವ ಪೂರ್ವಕ ನಿಶ್ಚಯಿಸಿರುತ್ತಾನೆ. ಪುರುಷನು ಕೂಟಸ್ಥ, ಸರ್ವವ್ಯಾಪಿ. ಏಕಃ, ಎಲ್ಲವೂ ಈತನಿಂದಲೇ ತುಂಬಿರುವುದರಿಂದ ಈತನನ್ನು ಬಿಟ್ಟುಕೊಟ್ಟು ಏನೂ ಇಲ್ಲವೇ ಇಲ್ಲ. ದೇಹವಾದರೋ ಪರಿಚ್ಛಿನ್ನವಾಗಿ ಇರುವುದರಿಂದ, ಅಪರಿಚ್ಛಿನ್ನವಾದ ಪುರುಷನು ಆಗಲಾರದು.

ಸರ್ವಂ ಪುರುಷ ಏವೇತಿ ಸೂಕ್ತೇ ಪುರುಷಸಂಜ್ಞಿತೇ ।
ಅಪ್ಯುಚ್ಯತೇ ಯತಃ ಶ್ರುತ್ಯಾ ಕಥಂ ಸ್ಯಾದ್ದೇಹಕಃ ಪುಮಾನ್
॥ ೩೫ ॥

ಪುರುಷ ಸಂಜ್ಞಿತೇ ಸೂಕ್ತೇ=ಪುರುಷ ಸೂಕ್ತವೆಂಬ ಹೆಸರಿನ ಸೂಕ್ತಿಯಲ್ಲಿ, **"ಸರ್ವಂ ಪುರುಷ ಏವ"**=ಎಲ್ಲವೂ ಪುರುಷನೇ. **ಇತಿ**=ಹೀಗೆಂದೂ, (ಹೇಳಿದೆ) **ಯತಃ**=ಏಕೆಂದರೆ, **ಶ್ರುತ್ಯಾ ಅಪಿ** =ಶ್ರುತಿಯಿಂದ ಕೂಡ, **ಉಚ್ಯತೇ**=ಹೇಳಲ್ಪಟ್ಟಿದೆ. (ಆದ್ದರಿಂದ) **ಕಥಂ ಸ್ಯಾತ್ ದೇಹಕಃ ಪುಮಾನ್**=ಈ ದೇಹವು ಪುರುಷನು ಹೇಗೆ ಆದೀತು ?

ಪುರುಷ ಸೂಕ್ತದಲ್ಲಿ ಎಲ್ಲವೂ ಪುರುಷನೇ ಎಂದು ಹೇಳಿದೆ. ಶ್ರುತಿಯಲ್ಲಿಯೂ ಇದೇ ಹೇಳಲ್ಪಟ್ಟಿರುವುದರಿಂದ, ಈ ದೇಹವು ಹೇಗೆ ಪುರುಷನಾದೀತು ?

ಪುರುಷ ಸೂಕ್ತದಲ್ಲಿ "ಪುರುಷ ಏವೇದಗುಂ ಸರ್ವಂ ಯದ್ಭೂತಂ, ಯಚ್ಚ ಭವ್ಯಂ" ಎಂಬ ಮಂತ್ರವಿದೆ. ಇದರ ಅರ್ಥವೇನೆಂದರೆ ಇದೆಲ್ಲವೂ ಪುರುಷನೇ; ಈಗ ತೋರುತ್ತಿರುವ ಜಗತ್ತಷ್ಟೇ ಅಲ್ಲ, ಹಿಂದೆ ಸೃಷ್ಟಿಯಾಗಿ ಪ್ರಲಯದಲ್ಲಿ ಅಡಗಿಹೋದ ಜಗತ್ತೂ ಹಾಗೂ ಮುಂದೆ ಸೃಷ್ಟಿಯಾಗಲಿರುವ ಜಗತ್ತೂ ಸಹ ಆತನೇ ಆಗಿರುತ್ತಾನೆ. ಹೀಗಿರಬೇಕಾದರೆ ಕೇವಲ ವರ್ತಮಾನ ಜಗತ್ತಿನ ಒಂದು ಭಾಗವಾದ ಈ ದೇಹವು ಪೂರ್ಣ ಪುರುಷ ಹೇಗಾದೀತು ?

ಅಸಂಗಃ ಪುರುಷಃ ಪ್ರೋಕ್ತೋ ಬೃಹದಾರಣ್ಯಕೇಽಪಿ ಚ ।
ಅನಂತಮಲಸಂಶ್ಲಿಷ್ಟಃ ಕಥಂ ಸ್ಯಾದ್ದೇಹಕಃ ಪುಮಾನ್
॥ ೩೬ ॥

ಬೃಹದಾರಣ್ಯಕೇ = ಬೃಹದಾರಣ್ಯಕ ಉಪನಿಷತ್ತಿನಲ್ಲಿ, **ಅಪಿ** = ಕೂಡ, **"ಪುರುಷಃ ಅಸಂಗಃ"**=ಪುರುಷನು ಅಸಂಗನು, (ಎಂದು) **ಪ್ರೋಕ್ತಃ**=ಹೇಳಿರುತ್ತದೆ. **ಅನಂತಮಲಸಂಶ್ಲಿಷ್ಟಃ**=ಅನೇಕಾನೇಕ ಕಶ್ಮಲಗಳಿಂದ ಕೂಡಿಕೊಂಡಿರುವ, **ದೇಹಕಃ**=ದೇಹವು, **ಪುಮಾನ್ ಕಥಂ ಸ್ಯಾತ್**=ಪುರುಷನು ಹೇಗಾದೀತು ?

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಈ ಪುರುಷನು ಅಸಂಗನು ಎಂದು ಹೇಳಿರು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತದೆ. ಅನೇಕಾನೇಕ ಕಶ್ಮಲಗಳಿಂದ ಕೂಡಿಕೊಂಡಿರುವ ಈ ದೇಹವು ಅಂತಹ ಪುರುಷನು ಹೇಗೆ ತಾನೆ ಆದೀತು ?

ಬೃಹದಾರಣ್ಯಕ ಉಪನಿಷತ್ತಿನ "ಅಸಂಗಃ ಹಿ ಅಯಂ ಪುರುಷಃ" ಈ ಪುರುಷನಿಗೆ ಯಾವುದರ ಸಂಬಂಧವೂ ಇರುವುದಿಲ್ಲ ಎಂಬ ಮಂತ್ರವು ಇದನ್ನೇ ಪ್ರತಿಪಾದಿಸುತ್ತದೆ. ದೇಹವು ಸದಾ ಕಶ್ಮಲಗಳಿಂದ ಕೂಡಿದೆ. ಮುಪ್ಪು, ರೋಗ, ಮರಣ ತಪ್ಪಿದ್ದಲ್ಲ. ರಕ್ತಮಾಂಸಾದಿಗಳ ಮುದ್ದೆಯೇ ಈ ದೇಹ. ಪುರುಷನಾದರೋ ಸದ್ರೂಪ, ನಿರವಯವ, ಏಕನೂ ಅದ್ವಿತೀಯನೂ ಆಗಿರುವುದರಿಂದ ಅವನಲ್ಲಿ ಸಕ್ತಿಯನ್ನುಂಟು ಮಾಡಿಕೊಳ್ಳಲು ಅವನನ್ನು ಬಿಟ್ಟುಕೊಟ್ಟು ಏನೂ ಇಲ್ಲ. ಹೀಗೆ ಸಂಗ ಅಥವಾ ಸಕ್ತಿ ರಹಿತನಾದ ಅಸಂಗ ಪುರುಷನು ಸದಾ ಪವಿತ್ರನೇ. ಹೀಗೆ ಅನೇಕಾನೇಕ ಕಶ್ಮಲಗಳಿಂದ ಅಪವಿತ್ರವಾದ ದೇಹವು ನಿತ್ಯ ಶುದ್ಧನಾದ ಪುರುಷನು ಹೇಗೆ ತಾನೇ ಆದಾನು ?

ತತ್ರೈವ ಚ ಸಮಾಖ್ಯಾತಃ ಸ್ವಯಂಜ್ಯೋತಿರ್ಹಿ ಪೂರುಷಃ ।
ಜಡಃ ಪರಪ್ರಕಾಶ್ಯೋಽಸೌ ಕಥಂ ಸ್ಯಾದ್ದೇಹಕಃ ಪುಮಾನ್
॥ ೩೨ ॥

ತತ್ರ ಏವ=ಅಲ್ಲಿಯೇ. **"ಪೂರುಷಃ ಸ್ವಯಂ ಜ್ಯೋತಿಃ ಹಿ"**=ಪುರುಷನು ಸ್ವಯಂಜ್ಯೋತಿಯೇ ಆಗಿರುತ್ತಾನೆ (ಎಂದು) **ಸಮಾಖ್ಯಾತಃ**=ಚೆನ್ನಾಗಿ ಪ್ರತಿಪಾದಿಸಿದೆ. **ಜಡಃ**=ಜಡವೂ. **ಪರಪ್ರಕಾಶ್ಯಃ**=ಬೇರೆಯದರಿಂದ ಬೆಳಗಲ್ಪಡತಕ್ಕದ್ದೂ. ಆದ, **ಅಸೌ ದೇಹಕಃ**=ಈ ದೇಹವು. **ಪುಮಾನ್**=ಪುರುಷನು. **ಕಥಂ ಸ್ಯಾತ್**=ಹೇಗೆ ಆದೀತು ?

ಬೃಹದಾರಣ್ಯಕ ಉಪನಿಷತ್ತಿನಲ್ಲಿಯೇ ಪುರುಷನು ಸ್ವಯಂಜ್ಯೋತಿಯೇ ಆಗಿರುತ್ತಾನೆ ಎಂದು ಪ್ರತಿಪಾದಿಸಿದೆ. ಜಡವೂ ಪರಪ್ರಕಾಶ್ಯವೂ ಆದ ಈ ಕನಿಷ್ಠ ದೇಹವು ಪುರುಷನು ಹೇಗೆ ತಾನೇ ಆಗಲು ಸಾಧ್ಯ ?

ಬೃಹದಾರಣ್ಯಕ ಉಪನಿಷತ್ತಿನಲ್ಲಿ "ಅತ್ರ ಅಯಂ ಪುರುಷಃ ಸ್ವಯಂ ಜ್ಯೋತಿಃ ಭವತಿ" ಇಲ್ಲಿ ಆ ಪುರುಷನು ಸ್ವಯಂಜ್ಯೋತಿ ಆಗಿರುತ್ತಾನೆ ಎಂಬ ಮಂತ್ರದಲ್ಲಿ ಸ್ವಪ್ನಾವಸ್ಥೆಯ ದೃಷ್ಟಾಂತದಿಂದ ಆತ್ಮನು ಸ್ವಯಂ ಪ್ರಕಾಶನೆಂಬುದನ್ನು ತೋರಿಸಿ ಕೊಟ್ಟಿದೆ. ಜಾಗ್ರದಾವಸ್ಥೆಯಲ್ಲಿ ಆತ್ಮನಿಂದ ಚೈತನ್ಯಗೊಂಡ ಇಂದ್ರಿಯ ಬುದ್ಧಿಗಳ ಮೂಲಕ ದೇಹದ ಇರುವಿಕೆಯು ಗೊತ್ತಾಗುತ್ತದೆ. ಸ್ವಪ್ನ ಹಾಗೂ ಸುಷುಪ್ತಿಯಲ್ಲಿ ಈ ಇಂದ್ರಿಯಗಳು ಉಪರಮವಾದಾಗ ಸ್ಥೂಲದೇಹದ ಇರುವಿಕೆಯೇ ತಿಳಿಯುವುದಿಲ್ಲ.

ಹೀಗೆ ಎಚ್ಚರದಲ್ಲಿ ಮಾತ್ರ ತೋರುವ ಸ್ಥೂಲ ದೇಹವು ಸದ್ರೂಪವಲ್ಲ. ಅಸತ್ ಆದದ್ದು ಅಂದರೆ ಜಡವಾಗಿರುತ್ತದೆ. ಜಡವಾದ ಕಾರಣ ಮತ್ತೊಂದರಿಂದ ಬೆಳಗಲ್ಪಟ್ಟಾಗ ಮಾತ್ರ ತನ್ನ ಇರುವಿಕೆಯು ಗೊತ್ತಾಗುತ್ತದೆ. ಪುರುಷನಾದರೋ ಮೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಸ್ಥೆಗಳಲ್ಲಿಯೂ ಯಾವುದರ ಅವಲಂಬನೆಯೂ ಇಲ್ಲದೆ ತಾನೇ ತಾನಾಗಿ ತನ್ನ ಇರುವಿಕೆಯನ್ನು ಜ್ಞಾನ ಸ್ವರೂಪದ ಮೂಲಕ ಪ್ರಕಾಶಿಸಿಕೊಳ್ಳುತ್ತಿದ್ದಾನೆ. ಈ ಜಡ ಕನಿಷ್ಟ ದೇಹವು ಸದ್ರೂಪವೂ, ಸ್ವಯಂ ಪ್ರಕಾಶವೂ ಆದ ಪುರುಷನು ಹೇಗೆ ತಾನೇ ಆಗಲು ಸಾಧ್ಯ?

ಪ್ರೋಕ್ತೋಽಪಿ ಕರ್ಮಕಾಂಡೇನ ಹ್ಯಾತ್ಮಾ ದೇಹಾದ್ವಿಲಕ್ಷಣಃ ।
ನಿತ್ಯಶ್ಚ ತತ್ಫಲಂ ಭುಂಕ್ತೇ ದೇಹಪಾತಾದನಂತರಂ ॥ ೨೮ ॥

ಆತ್ಮಾ=ಆತ್ಮನು, **ದೇಹಾತ್ ವಿಲಕ್ಷಣಃ**=ದೇಹಕ್ಕಿಂತ ವಿಲಕ್ಷಣನೆಂದು, **ಕರ್ಮ ಕಾಂಡೇನ**=ಕರ್ಮಕಾಂಡದಲ್ಲಿ, **ಅಪಿ**=ಕೂಡ, **ಪ್ರೋಕ್ತಃ**=ಹೇಳಿರುತ್ತದೆ. **ಹಿ**=ಏಕೆಂದರೆ, **ದೇಹಾಪಾತಾತ್ ಅನಂತರಂ**=ದೇಹವು ಬಿದ್ದು ಹೋದ ನಂತರವು, **ನಿತ್ಯಃ**=ಇದ್ದುಕೊಂಡು, **ತತ್ಫಲಂ**=ಆ ಕರ್ಮಗಳ ಫಲವನ್ನು, **ಭುಂಕ್ತೇ** =ಅನುಭವಿಸುತ್ತಾನೆ.

ಆತ್ಮನು ದೇಹಕ್ಕಿಂತ ವಿಲಕ್ಷಣನೆಂದು ಕರ್ಮಕಾಂಡದಲ್ಲಿಯೂ ಕೂಡ ಹೇಳಿರುತ್ತದೆ. ಏಕೆಂದರೆ ದೇಹ ಬಿದ್ದು ಹೋದ ನಂತರವೂ ಆತ್ಮನು ಇದ್ದುಕೊಂಡು ಆ ಕರ್ಮಗಳ ಫಲವನ್ನು ಅನುಭವಿಸುತ್ತಾನೆ.

ದೇಹವೇ ಆತ್ಮವೆಂದುಕೊಂಡಿರುವ ನಾಸ್ತಿಕರಿಗೆ ಅರ್ಥ- ಕಾಮಗಳು ಎರಡೇ ಸಾಕು. ಇವರಿಗೆ ಧರ್ಮ ಬೇಕಿರುವುದಿಲ್ಲ. ಇವರಿಗಿಂತಲೂ ಸ್ವಲ್ಪ ಉತ್ತಮರಾದ ಆಸ್ತಿಕರು 'ದೇಹಾತೀತನಾದ ಆತ್ಮ ಒಂದಿದೆ. ಅದು ದೇಹಾಂತರದಲ್ಲಿ ಈ ಜನ್ಮದ ಕರ್ಮಫಲಗಳನ್ನು ಅನುಭವಿಸುತ್ತದೆ' ಎಂದು ಹೇಳುವ ಕರ್ಮಕಾಂಡವನ್ನು ನಂಬುತ್ತಾರೆ. ಈ ಕರ್ಮಕಾಂಡದಲ್ಲಿ ನಿಷಿದ್ಧ ವಿಹಿತ ಹಾಗೂ ಕಾಮ್ಯಕರ್ಮಗಳನ್ನು ತಿಳಿಸುವ ಮೂಲಕ ಸಾಧಕನು ಧರ್ಮ ಮಾರ್ಗದಲ್ಲಿಯೇ ನಡೆಯುವಂತೆ ಮಾಡಿ ಅವನು ಇನ್ನೂ ಹೆಚ್ಚು ಹೆಚ್ಚು ಪರಿಪಕ್ವವಾಗಲು ಕಾರಣವಾಗಿದೆ. ಹೀಗೆ ಕರ್ಮಕಾಂಡದಲ್ಲಿ ಮಾತ್ರ ವಿಶ್ವಾಸವುಳ್ಳ ಸಾಧಕನ ದೃಷ್ಟಿಯಲ್ಲಿ ಈ ಶ್ಲೋಕವನ್ನು ಕೊಟ್ಟಿದೆ. ಇದರಿಂದ ತಿಳಿದು ಬರುವುದು ಏನೆಂದರೆ–ಉಪನಿಷತ್ತಿನ ಜ್ಞಾನಕಾಂಡವಷ್ಟೇ ಅಲ್ಲ, ಕರ್ಮಕಾಂಡವೂ ಸಹ ಆತ್ಮನು ದೇಹಕ್ಕಿಂತ ವಿಲಕ್ಷಣನು, ನಿತ್ಯನು ಎಂದು ತಿಳಿಸುತ್ತದೆ.

ಕರ್ಮಕಾಂಡದ ಆಧಾರದಿಂದಲೂ ಪುರುಷನು ದೇಹಾತೀತನೆಂದು ತಿಳಿಸಿದರೂ ದೇಹವು ಬಿದ್ದು ಹೋದ ಮೇಲೆ ಕರ್ಮಫಲವನ್ನು ಭೋಗಿಸುವ ಜೀವಾತ್ಮನೇ ಪುರುಷನು ಎಂದು ಬರಬಹುದಾದ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲು ಈ ಶ್ಲೋಕವು ಬಂದಿದೆ–

ಲಿಂಗಂ ಚಾನೇಕ ಸಂಯುಕ್ತಂ ಚಲಂ ದೃಶ್ಯಂ ವಿಕಾರಿ ಚ ।
ಅವ್ಯಾಪಕಮಸದ್ರೂಪಂ ತತ್ಕಥಂ ಸ್ಯಾತ್ಪುಮಾನಯಂ ॥ ೨೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಲಿಂಗಂ=ಲಿಂಗಶರೀರವು, **ಚ**=ಕೂಡ, **ಅನೇಕ ಸಂಯುಕ್ತಂ**=ಅನೇಕ ಅವಯುವಗಳಿಂದ ಕೂಡಿದ್ದಾಗಿರುತ್ತದೆ, **ಚಲಂ**=ಅದು ಚಂಚಲವಾದದ್ದು, **ದೃಶ್ಯಂ** =ದೃಶ್ಯವಾದದ್ದು, **ವಿಕಾರೀ**=ವಿಕಾರಗಳುಳ್ಳದ್ದು, **ಅವ್ಯಾಪಕಂ**=ಪರಿಮಿತಿ ಉಳ್ಳದ್ದು, **ಅಸದ್ರೂಪಂ**=ಒಂದೇ ರೂಪದಲ್ಲಿ ಇರುವಂತಹುದಲ್ಲ, **ತತ್** =ಇಂತಹ ಸೂಕ್ಷ್ಮ ಶರೀರವು, **ಅಯಂ**=ಈ ಪುರುಷನು, **ಕಥಂ ಸ್ಯಾತ್** =ಹೇಗೆ ಆದೀತು.

ಸೂಕ್ಷ್ಮ ಶರೀರವೂ ಕೂಡ(ಸ್ಥೂಲ ಶರೀರದಂತೆಯೇ) ಅನೇಕ ಅವಯವಗಳಿಂದ ಕೂಡಿದ್ದಾಗಿರುತ್ತದೆ. ಅದು ಚಂಚಲವಾದದ್ದು, ದೃಶ್ಯವಾದದ್ದು, ವಿಕಾರಗಳುಳ್ಳದ್ದು, ಪರಿಮಿತಿಯುಳ್ಳದ್ದು ಹಾಗೂ ಬದಲಾವಣೆಗಳುಳ್ಳದ್ದು. ಇಂತಹ ಸೂಕ್ಷ್ಮ ಶರೀರವು. (ನಿರವಯುವ, ಸರ್ವವ್ಯಾಪಿ, ನಿರ್ವಿಕಾರಿ ಇತ್ಯಾದಿ ಲಕ್ಷಣಗಳಿಂದ ತಿಳಿಸಿರುವ) ಈ ಪುರುಷನು ಹೇಗೆ ಆದೀತು ?

ಸ್ಥೂಲ ಶರೀರದ ಹಾಗೆಯೇ ಲಿಂಗಶರೀರ ಅಥವಾ ಸೂಕ್ಷ್ಮ ಶರೀರವೂ ಪುರುಷ ನಾಗಲು ಸಾಧ್ಯವಿಲ್ಲ. ಸೂಕ್ಷ್ಮ ಶರೀರವು ಹದಿನೇಳು ಅವಯುವಗಳಿಂದ ಕೂಡಿದೆ. ಅವು ಗಳು ಯಾವುವೆಂದರೆ ಪಂಚಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ಪ್ರಾಣಗಳು ಹಾಗೂ ಮನಸ್ಸು ಮತ್ತು ಬುದ್ಧಿ. ವಾಗಾದಿ ಕರ್ಮೇಂದ್ರಿಯಗಳು ಒಂದು ಕಾಲದಲ್ಲಿ ಮಾಡಿದ ಕರ್ಮವನ್ನು ಮತ್ತೊಂದು ಕಾಲದಲ್ಲಿ ಮಾಡುವುದಿಲ್ಲ. ಒಂದು ವೇಳೆ ಮಾಡಬೇಕಾಗಿ ಬಂದಲ್ಲಿ ಒಂದೇ ರೀತಿಯಾಗಿ ಮಾಡುವುದಿಲ್ಲ. ಹೀಗೆ ಚಂಚಲವಾ ಗಿವೆ. ಉಸಿರಾಡುವುದು, ಜೀರ್ಣವಾಗುವುದು ಇತ್ಯಾದಿ ಪಂಚ ಪ್ರಾಣಗಳ ಕರ್ಮಗಳು ಕಾಲದಿಂದ ಕಾಲಕ್ಕೆ ಹೆಚ್ಚು ಕಡಿಮೆಯಾಗುವುದು ಕಂಡುಬರುತ್ತದೆ. ಕಣ್ಣೇ ಮುಂತಾದ ಜ್ಞಾನೇಂದ್ರಿಯಗಳು ಆಯಾ ಅಧಿದೇವತೆಯ ಅನುಗ್ರಹಕ್ಕೆ ಅನುಗುಣವಾಗಿ ಚುರುಕು, ಅಥವಾ ಮಂದವಾಗುವುದು ತಿಳಿದೇ ಇದೆ. ವೃತ್ತಿಗಳ ಕಂತೆಯಾದ ಮನಸ್ಸಿನಲ್ಲಿ ಸುಖ ದುಃಖ, ರಾಗ, ದ್ವೇಷಾದಿಗಳೆಂಬ ವೃತ್ತಿಗಳು ಪ್ರತಿಕ್ಷಣವೂ ಅತಿವೇಗದಿಂದ ಹರಿಯುತ್ತಾ ಮನಸ್ಸನ್ನು ಮರ್ಕಟಕ್ಕೆ ಹೋಲುವಂತೆ ಮಾಡಿದೆ. ಇದನ್ನೇ ಅರ್ಜುನನು "ಚಂಚಲಂ ಹಿ ಮನಃ ಕೃಷ್ಣ" ಎಂದು ಭಗವದ್ಗೀತೆಯಲ್ಲಿ ಹೇಳಿರುವುದು. ಬುದ್ಧಿಯಲ್ಲಿ ಸಹ ಮೇಧಾಶಕ್ತಿಯು ಹೆಚ್ಚು ಕಡಿಮೆಯಾಗುವುದು ನಮಗೆ ಗೊತ್ತಾಗುತ್ತದೆ. ಇಂತಹ ಚಂಚಲವಾದ ಅವಯುವಗಳಿಂದ ಕೂಡಿದ ಲಿಂಗ ಶರೀರವು ಚಂಚಲವಾಗಿಯೇ ಇರು ವುದು. ಇದೆಲ್ಲವೂ ಗುರುತಿಸಲ್ಪಡುತ್ತಿರುವುದರಿಂದ ಆ ಶರೀರವೂ ದೃಶ್ಯವೇ ಆಗಿದೆ. ಈ ಶರೀರದಲ್ಲಿ ಅನೇಕಾನೇಕ ಕಾರ್ಯಗಳು ನಡೆಯುತ್ತಿರುವುದರಿಂದ, ಇದು ವಿಕಾರದಿಂದ ಕೂಡಿದೆ. ಇಲ್ಲಿ ವಿಕಾರಿ ಎಂಬ ಪದವು ಷಡ್ವಿಕಾರಗಳನ್ನು ತಿಳಿಸುವುದಕ್ಕಲ್ಲ. "ವಿಕಾರ್ಯಂ ಕರ್ಮ" ಎಂಬ ಉಕ್ತಿಯು ತಿಳಿಸುವಂತೆ ಈ ಶರೀರದಲ್ಲಿ ಅನೇಕಾನೇಕ ಬದಲಾವಣೆ ಅಥವಾ ಮಾರ್ಪಾಡುಗಳು ಆಗುತ್ತಲೇ ಇರುವುದರಿಂದ ಇದು ವಿಕಾರಿ ಎನಿಸಿಕೊಂಡಿದೆ. ಇದರ ಅವಯುವಗಳಾದ ಪ್ರಾಣಗಳೂ, ಜ್ಞಾನೇಂದ್ರಿಯಗಳೂ ಹಾಗೂ ಕರ್ಮೇಂದ್ರಿಯ ಗಳೂ ತಮ್ಮ ತಮ್ಮ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿವೆ. ಆದ್ದರಿಂದ ಇದು ಅವ್ಯಾಪಕ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಶರೀರದಲ್ಲಿ ಕರ್ಮಗಳು ನಡೆಯುತ್ತಿದ್ದು ವಿಕಾರ ಉಂಟಾಗುವುದರಿಂದ ಈ ಶರೀರದ ರೂಪವು ಬದಲಾವಣೆ ಹೊಂದದೆ ಸದಾ ಒಂದೇ ಆಗಿರುವಂತಹ ಸದ್ರೂಪವಲ್ಲ. ಈ ಶರೀರದ ಅವಯವಗಳು ಯಾವನ ಆಧಾರದಿಂದ ಇದ್ದುಕೊಂಡು, ಯಾವನ ಚೈತನ್ಯ ದಿಂದ ಚೈತನ್ಯಯುಕ್ತವಾಗಿದೆಯೋ ಅವನೇ ಆತ್ಮನು ಎಂದು ಮತ್ತೊಬ್ಬರಿಗೆ ಆತ್ಮತತ್ತ್ವ ವನ್ನು ತಿಳಿಸುವುದಕ್ಕೆ ಈ ಹದಿನೇಳು ಅವಯವಗಳ ಕಾರ್ಯಗಳೂ ಗುರುತಾಗಿರುವುವು. ಆದ್ದರಿಂದ ಸೂಕ್ಷ್ಮ ಶರೀರಕ್ಕೆ ಲಿಂಗ ಶರೀರ ಅಂದರೆ ಆತ್ಮನನ್ನು ಗುರುತಿಸುವುದಕ್ಕೆ ಶರೀರ ಎಂಬ ಹೆಸರು ಬಂದಿದೆ. ಈ ಲಿಂಗಶರೀರದ ಸ್ವಭಾವವು ಶ್ರುತಿಯಲ್ಲಿ ತಿಳಿಸಿರುವ ಪುರುಷನ ಲಕ್ಷಣಗಳಿಗೆ ಅತ್ಯಂತ ವಿರುದ್ಧವಾಗಿರುವುದರಿಂದ ಇದು ಹೇಗೆ ತಾನೇ ಪುರುಷ ನಾದೀತು?

ಇದುವರೆಗೂ ಶ್ರುತಿ ಆಧಾರಿತ ಯುಕ್ತಿಯಿಂದ ಆತ್ಮನು ಸ್ಥೂಲ ಸೂಕ್ಷ್ಮ ದೇಹ ಗಳಿಗಿಂತ ಬೇರೆ, ಅವನೇ ಪುರುಷನು ಎಂದು ಹೇಳಿದ್ದಾಯಿತು. ಆ ಪುರುಷನಾದ ನಾನೇ ಈಶ್ವರ, ಸರ್ವಾತ್ಮ, ಸರ್ವರೂಪ ಹಾಗೂ ನಾಶರಹಿತ ಎಂಬುದನ್ನು ಸಾರ್ವತ್ರಿಕ ಅನು ಭವದಿಂದ ತೋರಿಸಿಕೊಡಬೇಕೆಂಬ ತಾತ್ಪರ್ಯವುಳ್ಳ ಮುಂದಿನ ಗ್ರಂಥ ಭಾಗಕ್ಕೆ ಈಗಲೇ ಬೀಜವನ್ನು ಹಾಕುತ್ತಿದ್ದಾರೆ.

ಏವಂ ದೇಹದ್ವಯಾದನ್ಯ ಆತ್ಮಾ ಪೂರುಷ ಈಶ್ವರಃ ।
ಸರ್ವಾತ್ಮಾ ಸರ್ವರೂಪಶ್ಚ ಸರ್ವಾತೀತೋಽಹಮವ್ಯಯಃ ॥ ೪೦ ॥

ಏವಂ=ಹೀಗೆ, **ಅಹಂ**=ನಾನು, **ದೇಹದ್ವಯಾತ್**=ಎರಡು ಬಗೆಯ ದೇಹಗಳಿಗೂ, **ಅನ್ಯಃ**=ಬೇರೆಯಾಗಿರುವ, **ಆತ್ಮಾ**=ಆತ್ಮನೂ, **ಪೂರುಷಃ**= ಪುರುಷನೂ, **ಈಶ್ವರಃ**=ಈಶ್ವರನೂ, **ಸರ್ವಾತ್ಮಾ**=ಸರ್ವಾತ್ಮನೂ, **ಸರ್ವ ರೂಪಶ್ಚ**=ಸರ್ವರೂಪನೂ, **ಸರ್ವಾತೀತ**=ಸರ್ವವನ್ನೂ ಮೀರಿದವನೂ, **ಅವ್ಯಯಃ**=ನಾಶವಿಲ್ಲದವನೂ ಆಗಿರುವನು.

ಹೀಗೆ ನಾನು, ಎರಡು ಬಗೆಯ ದೇಹಗಳಿಗೂ ಬೇರೆಯಾಗಿರುವ ಆತ್ಮನೂ, ಪುರುಷನೂ, ಈಶ್ವರನೂ, ಸರ್ವಾತ್ಮನೂ ಸರ್ವರೂಪನೂ, ಸರ್ವವನ್ನೂ ಮೀರಿರು ವವನೂ, ನಾಶವಿಲ್ಲದವನೂ ಆಗಿರುವೆನು.

ಸ್ಥೂಲ–ಸೂಕ್ಷ್ಮ ದೇಹಗಳೆರಡಕ್ಕಿಂತಲೂ ಭಿನ್ನನಾದ ಆತ್ಮಾ ಅಂದರೆ ನಾನೇ ಪುರುಷನು–ನಾನೇ ಈಶ್ವರನು. ಈಶ್ವರ ಅಂದರೆ ತ್ರಿಮೂರ್ತಿಗಳಲ್ಲಿ ಒಬ್ಬನಾದ ಈಶ್ವರ ನೆಂದು ಅರ್ಥಮಾಡಬಾರದು. ಈಶ್ವರ ಎಂದರೆ ಆಳುವವನು, ಸ್ವತಂತ್ರನು ಎಂದರ್ಥ, ಚೈತನ್ಯ ಸ್ವರೂಪನಾದ ನನ್ನ ಸನ್ನಿಧಿಯಲ್ಲಿ ಅಹಂಕಾರ, ಬುದ್ಧಿ, ಮನಸ್ಸು, ಇಂದ್ರಿಯ ಗಳು ಚೈತನ್ಯಗೊಂಡು ಜಗತ್ತಿನ ಇರುವಿಕೆ ಹಾಗೂ ತೋರುವಿಕೆಗೆ ಕಾರಣವಾಗಿದೆ; ನಾನಾದರೋ ಸ್ವತಂತ್ರ. ನನ್ನನ್ನು ಆಧರಿಸಿಕೊಂಡೇ ಪರತಂತ್ರವಾದ ದೇಹ ಜಗತ್ತು ಗಳು ತೋರುತ್ತಿವೆ. ದೇಹಾದಿ ಸಕಲ ಬಾಹ್ಯವಸ್ತುಗಳನ್ನೂ ಆಳುವ ಸ್ವಾತಂತ್ರ್ಯ ಆತ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಚೈತನ್ಯದ್ದೇ ಆಗಿರುವುದರಿಂದ ನಾನೇ ಈಶ್ವರ-ಆಳುವವನು. ಈ ಆತ್ಮನು ಪರಿಚ್ಛಿನ್ನ ನಲ್ಲ. ಬ್ರಹ್ಮಾದಿಸ್ತಂಬ ಪರ್ಯಂತದವರೆಗೆ ಇರುವ ದೇಹಗಳಲ್ಲೆಲ್ಲಾ ಬೇರೆ ಬೇರೆ ಆತ್ಮ ಇದ್ದಾನೆ ಎಂದರೆ, ಆತ್ಮನೇ ಈಶ್ವರನಾಗಿರುವುದರಿಂದ ಅನೇಕ ಈಶ್ವರರು ಇದ್ದಾರೆ ಎಂದಾಗುತ್ತದೆ. ಇದನ್ನು ಶಾಸ್ತ್ರವು ಒಪ್ಪುವುದಿಲ್ಲ, ಹೀಗೆ ಸಕಲರಿಗೂ ಆತ್ಮನು ಒಬ್ಬನೇ -ಅವನೇ ಸರ್ವಾತ್ಮ. ಏಕೆಂದರೆ ಈ ತೋರುತ್ತಿರುವ ದೇಹಾದಿಗಳು ಪಾರಮಾರ್ಥಿಕ ವಾಗಿ ಆತ್ಮಸ್ವರೂಪವೇ ಆಗಿರುತ್ತವೆ, ಆದ್ದರಿಂದ ಇವನು ಸರ್ವರೂಪನು. ತೆರೆ, ನೊರೆ, ಗುಳ್ಳೆ, ಬೇರೆ ಬೇರೆ ನಾಮರೂಪಗಳುಳ್ಳ ನೀರಿನ ರೂಪಗಳೇ. ನಾಮರೂಪಗಳ ದೃಷ್ಟಿಯಿಂದ ನೋಡಿದಾಗ ಇವುಗಳು ಬೇರೆ ಬೇರೆಯಾಗಿ ತೋರಿದರೂ ಸಹ, ನೀರಿನ ದೃಷ್ಟಿಯಿಂದ ನೋಡಿದಾಗ ಎಲ್ಲವೂ ನೀರೇ ನೀರು-ನೀರಿನ ರೂಪ ಮಾತ್ರ. ಹೀಗೆಯೇ ವ್ಯಾವಹಾರಿಕ ದೃಷ್ಟಿಯಿಂದ ಅನೇಕಾನೇಕ ನಾಮರೂಪಗಳುಳ್ಳ ಜಗತ್ತು ತೋರು ತ್ತಿದ್ದರೂ ಸಹ ಪಾರಮಾರ್ಥಿಕ ದೃಷ್ಟಿಯಿಂದ ಎಲ್ಲವೂ ಕೇವಲ ಆತ್ಮ-ಹೀಗೆ ಜಗತ್ತು ಹಾಗೂ ಅದರಲ್ಲಿ ತೋರುತ್ತಿರುವ ಬ್ರಹ್ಮಾದಿಸ್ತಂಬ ಪರ್ಯಂತ ದೇಹಗಳೂ ಪರಮಾ ತ್ಮನು ತೋರುತ್ತಿರುವ ರೂಪ ಎಂಬ ಅರ್ಥದಲ್ಲಿ ಸರ್ವರೂಪ ಎನಿಸಿಕೊಂಡಿದ್ದಾನೆ. ಹೀಗೆ ಆತ್ಮನು ಸರ್ವರೂಪನೇ ಆಗಿದ್ದರೂ ಸರ್ವಾತೀತನು. ಏಕೆಂದರೆ ಶ್ರುತಿಯು ಹೇಳುವಂತೆ ಏಕಃ ಅದ್ವಿತೀಯಃ ಆಗಿರುವ ಇವನು ವ್ಯಾವಹಾರಿಕ ನಾಮರೂಪಗಳಿಂದ ಮುಟ್ಟಲ್ಪಡದೆ ಎಲ್ಲಕ್ಕೂ ಅತೀತನಾಗಿದ್ದಾನೆ. ಇವನು ಏಕಃ ಅದ್ವಿತೀಯಃ ಆಗಿರುವುದರಿಂದ ಇವನನ್ನು ನಾಶಮಾಡಬಲ್ಲ ಬೇರೆ ಯಾವ ವಸ್ತುವೇ ಇಲ್ಲವಾಗಿ ಇವನು ಅವ್ಯಯನು ಅಂದರೆ ನಾಶ ವಿಲ್ಲದವನು ಆಗಿದ್ದಾನೆ. ಸರ್ವಾತ್ಮ ಅಂದರೆ ಆತ್ಮಾ ಇಲ್ಲದೆ ಏನೂ ಇಲ್ಲ. ಸರ್ವಾತೀತ ಅಂದರೆ ಆತ್ಮಾ ಯಾವುದೂ ಅಲ್ಲ.

ಇತ್ಯಾತ್ಮ ದೇಹ ಭಾಗೇನ ಪ್ರಪಂಚಸ್ಯೈವಸತ್ಯತಾ ।
ಯಥೋಕ್ತಾ ತರ್ಕ ಶಾಸ್ತ್ರೇಣ ತತಃ ಕಿಂ ಪುರುಷಾರ್ಥತಾ ॥ ೪೧ ॥

ಇತಿ=ಹೀಗೆ **ಆತ್ಮದೇಹಭಾಗೇನ**=ಆತ್ಮನನ್ನೂ ದೇಹವನ್ನೂ ಬೇರ್ಪಡಿಸಿ, **ಯಥಾ**=ಹೇಗೆ **ತರ್ಕಶಾಸ್ತ್ರೇಣ**=ತರ್ಕಶಾಸ್ತ್ರದಲ್ಲಿ, **ಉಕ್ತಾ**=ಹೇಳಿದೆಯೋ. (**ತಥಾ**=ಹಾಗೆಯೇ) **ಪ್ರಪಂಚಸ್ಯ**=ಪ್ರಪಂಚದ, **ಸತ್ಯಥಾ ಏವ**=ಸತ್ಯತೆಯನ್ನೇ (ವೇದಾಂತಿಗಳೂ ಒಪ್ಪಿದಂತಾಯಿತು) **ತತಃ**=ಅದರಿಂದ, **ಕಿಂ**=ಯಾವ, **ಪುರುಷಾರ್ಥತಾ**=ಪುರುಷಾರ್ಥ ಉಂಟು ?

ಹೀಗೆ ಆತ್ಮನನ್ನೂ ದೇಹವನ್ನೂ ವಿಂಗಡಿಸಿ ತರ್ಕಶಾಸ್ತ್ರದಲ್ಲಿ ಹೇಳಿರುವಂತೆಯೇ ಪ್ರಪಂಚವೇ ಸತ್ಯವೆಂದು ವೇದಾಂತಿಗಳೂ ತಿಳಿಸಿದ ಪಕ್ಷದಲ್ಲಿ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೫. ದೇಹಗಳು ಅಸತ್ಯ

ಇತ್ಯಾತ್ಮದೇಹಭೇದೇನ ದೇಹಾತ್ಮತ್ವಂ ನಿವಾರಿತಂ ।
ಇದಾನೀಂ ದೇಹಭೇದಸ್ಯ ಹ್ಯಸತ್ತ್ವಂ ಸ್ಫುಟಮುಚ್ಯತೇ ॥ ೪೨ ॥

ಇತಿ=ಹೀಗೆ **ಆತ್ಮ ದೇಹ ಭೇದೇನ**=ಆತ್ಮನನ್ನೂ ದೇಹವನ್ನೂ ಬೇರೆ ಬೇರೆ ಮಾಡಿ, **ದೇಹಾತ್ಮತ್ವಂ**=ದೇಹವೇ ಆತ್ಮ ಎಂಬುದನ್ನು, **ನಿವಾರಿತಂ**=ಅಲ್ಲಗಳೆದಿದ್ದಾಯಿತು. **ಇದಾನೀಂ**=ಈಗ, **ದೇಹಭೇದಸ್ಯ**=ಆತ್ಮನಿಗಿಂತ ಬೇರೆಯಾದ ದೇಹದ, **ಅಸತ್ವಂ**=ಇಲ್ಲದೆ ಇರುವಿಕೆಯನ್ನು **ಸ್ಫುಟಂ**=ಸ್ಪಷ್ಟವಾಗಿ, **ಉಚ್ಯತೇ ಹಿ**=ಹೇಳಲ್ಪಡುತ್ತದೆಯಷ್ಟೆ.

ಹೀಗೆ ಆತ್ಮಾ ದೇಹಗಳೆರಡನ್ನೂ ಬೇರೆ ಬೇರೆ ಎಂದು ವಿಂಗಡಿಸಿ, ದೇಹವೇ ಆತ್ಮಾ ಎಂಬುದನ್ನು ಅಲ್ಲಗಳೆದದ್ದಾಯಿತು. ಈಗ ಮುಂದಿನ ಗ್ರಂಥವು ಆತ್ಮನಿಗಿಂತ ಬೇರೆಯಾದ ದೇಹವು ಇಲ್ಲವೇ ಇಲ್ಲವೆಂದು ತಿಳಿಸುತ್ತದೆ.

ಇದುವರೆಗೆ ಶ್ರುತಿ, ಯುಕ್ತಿ ಅನುಭವಾನುಸಾರವಾಗಿ ಸ್ಥೂಲ ಸೂಕ್ಷ್ಮ ದೇಹಗಳಿಗಿಂತ ವ್ಯತಿರಿಕ್ತನಾದ ಆತ್ಮನೊಬ್ಬನಿದ್ದಾನೆ ಎಂಬುದನ್ನು ತೋರಿಸಿಕೊಟ್ಟಾಯಿತು. ಆದರೆ ತೋರುತ್ತಿರುವ ಜಗತ್ತು ಹಾಗೂ ಪ್ರಕೃತಿಯ ಜಿಜ್ಞಾಸೆ ಇನ್ನೂ ಮೂಡಿಲ್ಲವಾಗಿ ಜಗತ್ತೂ ಹಾಗೂ ಅದರಲ್ಲಿನ ದೇಹವೂ ಸತ್ಯವೆಂಬ ಭಾವ ಅಳಿಸಿಹೋಗಿಲ್ಲ. ಇಂತಹ ಭಾವ ಇರುವವರೆಗೂ ದೇಹವೂ ನಿಜ, ಜಗತ್ತೂ ನಿಜ. ಅದರಲ್ಲಿನ ವ್ಯವಹಾರಗಳೂ ನಿಜ. ಈ ವ್ಯವಹಾರಗಳಿಂದ ಆಗುವ ಸುಖ, ದುಃಖ, ರಾಗ, ದ್ವೇಷಾದಿಗಳು ನಿಜವೆಂದೇ ಅಂದುಕೊಂಡಿರುವುದರಿಂದ ಸಾಧಕನಿಗೆ ಶಾಂತಿ ಸಿಗುವುದಿಲ್ಲ ಅವನು ಏನನ್ನೂ ಸಾಧಿಸಿದಂತಾಗುವುದಿಲ್ಲ.

ನಿದಿಧ್ಯಾಸನ ಕಾಲದಲ್ಲಿ ಆತ್ಮನಲ್ಲಿ ನಿಂತು ಆನಂದ ಅನುಭವಿಸಿದ ಸಾಧಕನು, ವ್ಯವಹಾರ ಕಾಲದಲ್ಲಿ ಮತ್ತೆ ಮತ್ತೆ ಸುಖ-ದುಃಖ, ರಾಗ-ದ್ವೇಷಾದಿ ಹೊಡೆತಗಳಿಂದ ತತ್ತರಿಸಿ ಹೋಗುತ್ತಾನೆ. ಇದನ್ನು ಗುರುತಿಸಿ ಸ್ವಲ್ಪ ಸೂಕ್ಷ್ಮವಾಗಿ ಜಿಜ್ಞಾಸೆ ಮಾಡುವ ಸಾಧಕನಿಗೆ ತಿಳಿಯುವುದೇನೆಂದರೆ ತನ್ನ ಈ ಸುಖ-ದುಃಖಾದಿಗಳಿಗೆ ತಾನು ಈ ಜಗತ್ತು ಹಾಗೂ ದೇಹದ ಮಿಥ್ಯತೆಯನ್ನು ತತ್ವತಃ ಕಂಡುಕೊಳ್ಳದೇ ಇರುವುದೇ ಕಾರಣ.

ವೇದಾಂತಿಗಳು ಇರುವುದೆಲ್ಲಾ ಆತ್ಮ ಒಂದೇ ಎಂಬ ತತ್ವವನ್ನು ಪ್ರತಿಪಾದಿಸುತ್ತಾರೆ. ಈ ಜಗತ್ತು, ದೇಹ, ವ್ಯಾವಹಾರಿಕ ಸತ್ಯ ಮಾತ್ರ ಉಳ್ಳದ್ದಾಗಿರುತ್ತದೆ. ಪಾರಮಾರ್ಥಿಕವಾಗಿ ಇವು ಇಲ್ಲವೇ ಇಲ್ಲ. ಇದನ್ನು ತತ್ವತಃ ತಿಳಿದವನು ಜಗತ್ತಿನ ಮಿಥ್ಯತೆಯನ್ನು ಗುರುತಿಸಿ, ಜಗತ್ತಿನಲ್ಲೇ ಇದ್ದು ವ್ಯವಹಾರ ಮಾಡುತ್ತಿದ್ದಾಗ್ಯೂ ಶಾಶ್ವತ ಶಾಂತಿಯನ್ನು ಪಡೆಯಬಲ್ಲನು.

ಚೈತನ್ಯಸ್ಯೈಕರೂಪತ್ವಾದ್ಭೇದೋ ಯುಕ್ತೋ ನ ಕರ್ಹಿಚಿತ್ ।
ಜೀವತ್ವಂ ಚ ಮೃಷಾ ಜ್ಞೇಯಂ ರಜ್ಜೌ ಸರ್ಪಗ್ರಹೋ ಯಥಾ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚೈತನ್ಯಸ್ಯ=ಚೈತನ್ಯದ, **ಏಕರೂಪತ್ವಾತ್**=ಒಂದೇ ರೂಪವಾಗಿರುವಿಕೆಯಿಂದ, **ಭೇದಃ**=ಚೈತನ್ಯದ ಭೇದವು, **ಕರ್ಹಿಚಿತ್**=ಎಂದೆಂದಿಗೂ, **ನಯುಕ್ತಃ**=ಸರಿ ಬರುವುದಿಲ್ಲ. **ಯಥಾ**=ಹೇಗೆ, **ರಜ್ಜ್ವಾಂ**=ಹಗ್ಗದಲ್ಲಿ, **ಸರ್ಪಗ್ರಹಃ**=ಹಾವೆಂಬ ಬುದ್ಧಿಯು, **ಮೃಷಾ**=ಸುಳ್ಳೇ ಆಗಿದೆಯೋ, (**ತಥಾ**=ಹಾಗೆಯೆ) (ಚೈತನ್ಯದಲ್ಲಿ) **ಜೀವತ್ವಂ**=ಜೀವತ್ವವು, **ಮೃಷಾಚ**=ಸುಳ್ಳೇ ಸುಳ್ಳು.

ಚೈತನ್ಯದ ಒಂದೇ ರೂಪವಾಗಿರುವಿಕೆಯಿಂದ ಚೈತನ್ಯದಲ್ಲಿ ಭೇದವು ಎಂದೆಂದಿಗೂ ಸರಿಬರುವುದಿಲ್ಲ. ಹೇಗೆ ಹಗ್ಗದಲ್ಲಿ ಹಾವೆಂಬ ಬುದ್ಧಿಯು ಸುಳ್ಳೇ ಆಗಿದೆಯೋ ಹಾಗೆಯೇ ಚೈತನ್ಯದಲ್ಲಿ ಜೀವತ್ವ ಇದೆ ಎಂಬ ಬುದ್ಧಿಯೂ ಸುಳ್ಳೇ ಸುಳ್ಳು.

ಜೀವತ್ವ ಎಂದರೆ ಸುಖ–ದುಃಖಾದಿಗಳನ್ನು ಅನುಭವಿಸುವಿಕೆ. ವೇದಾಂತ ಸಿದ್ಧಾಂತವನ್ನು ಸರಿಯಾಗಿ ತಿಳಿಯದ ಅಜ್ಞಾನಿಗಳು ದೇಹ ವಿಲಕ್ಷಣನಾದ ಆತ್ಮನಿದ್ದಾನೆಂದು ಒಪ್ಪಿದರೂ ಸಹ ಅವರು, "ಬೇರೆ ಬೇರೆ ದೇಹಗಳಲ್ಲಿ ಬೇರೆಬೇರೆ ಆತ್ಮ ಇದ್ದು ತಾರ-ತಮ್ಯವುಳ್ಳ ಸುಖ–ದುಃಖಾದಿಗಳನ್ನು ಅನುಭವಿಸುತ್ತಾರೆ" ಎಂದು ಹೇಳುತ್ತಾ ಆತ್ಮನಲ್ಲಿ ಜೀವತ್ವವಿದೆ ಎನ್ನುತ್ತಾರೆ. ವೇದಾಂತಿಗಳು ಇದನ್ನು ಒಪ್ಪುವುದಿಲ್ಲ.

ಅವರು ಹೇಳುವುದೇನೆಂದರೆ ಚೈತನ್ಯನು ಏಕಃ. ಅವನನ್ನು ಬಿಟ್ಟುಕೊಟ್ಟು ಏನೂ ಇಲ್ಲ. ಹಾಗೆ ಇದೆಯೆಂದು ನೋಡಿದ್ದೇ ಆದರೆ ಅದು ಕಲ್ಪಿತವೇ ಆಗಿರಬೇಕು. ನಾವು ಸುಖ-ದುಃಖಾದಿಗಳನ್ನು ಗುರುತಿಸುತ್ತೇವೆ. ಇವು ಚೈತನ್ಯಕ್ಕೆ ವಿಷಯವಾಗಿದೆ. ಆದ್ದರಿಂದ ಚೈತನ್ಯದ ಧರ್ಮವಲ್ಲ. ಸುಖ-ದುಃಖಾದಿಗಳನ್ನು ಅನುಭವಿಸುತ್ತಿದ್ದಾನೆ ಎಂದು ಹೇಳಲ್ಪಡುವವನು ಜೀವನು. ಅವನು ಅಜ್ಞಾನದಿಂದ ಆತ್ಮನಲ್ಲಿ ಕಲ್ಪಿತನಾಗಿದ್ದಾನೆ ಎಂದು ತಿಳಿಯಬೇಕು. ಹಗ್ಗದಲ್ಲಿ ಕಲ್ಪಿತವಾದ ಹಾವಿನ ದೃಷ್ಟಾಂತವನ್ನು ಕೊಟ್ಟು ಜೀವತ್ವವು ಕಲ್ಪಿತ ಮಾತ್ರವೇ ಎಂದು ದೃಢಪಡಿಸುತ್ತಾರೆ.

೧೬. ಎಲ್ಲವೂ ಬ್ರಹ್ಮ

ರಜ್ಜ್ವಜ್ಞಾನಾತ್ ಕ್ಷಣೇನೈವ ಯದ್ವದ್ರಜ್ಜುರ್ಹಿ ಸರ್ಪಿಣೀ ।
ಭಾತಿ ತದ್ವಚ್ಚಿತಿಃ ಸಾಕ್ಷಾದ್ವಿಶ್ವಾಕಾರೇಣ ಕೇವಲಾ ॥ ೪೪ ॥

ರಜ್ಜು ಅಜ್ಞಾನಾತ್=ಹಗ್ಗದ ಅಜ್ಞಾನದಿಂದ, **ರಜ್ಜುಃ ಹಿ**=ಹಗ್ಗವೇ, **ಯದ್ವತ್**=ಹೇಗೆ, **ಕ್ಷಣೇನ ಏವ**=ಕ್ಷಣ ಮಾತ್ರದಲ್ಲಿಯೇ, **ಸರ್ಪಿಣೀ ಭಾತಿ**=ಹಾವಾಗಿ ತೋರುವುದೋ, **ತದ್ವತ್**=ಹಾಗೆಯೇ, **ಚಿತಿಃ ಕೇವಲಾ**=ಚೈತನ್ಯ ಮಾತ್ರ ಒಂದೇ, **ಸಾಕ್ಷಾತ್**=ತಾನೇ, **ವಿಶ್ವಾಕಾರೇಣ**=ಪ್ರಪಂಚದ ಆಕಾರವಾಗಿ, **ಭಾತಿ**=ತೋರುತ್ತಿರುವುದು.

ಹಗ್ಗದ ಅಜ್ಞಾನದಿಂದ ಅದೇ ಹಗ್ಗವು ಹೇಗೆ ಕ್ಷಣಮಾತ್ರದಲ್ಲಿಯೇ ಹಾವಾಗಿ ತೋರುವುದೋ ಹಾಗೆಯೇ ಚೈತನ್ಯ ಮಾತ್ರ ಒಂದೇ ತಾನೇ ಪ್ರಪಂಚದ ಆಕಾರ

Sri Vidyabharathi Book Centre, Shimoga

CC-O. In Public Domain. Digitized by eGangotri

ವಾಗಿ ತೋರುತ್ತಿರುವುದು. ಜೀವತ್ವವು ಕಲ್ಪಿತವಾದದ್ದೇ ಆದರೆ ನಮಗೆ ತೋರುವು ದೇಕೆ? ಎಂಬುದನ್ನು ಹಗ್ಗ—ಹಾವಿನ ದೃಷ್ಟಾಂತದಿಂದ ವಿವರಿಸಿದ್ದಾರೆ. ಹಗ್ಗದ ಅಜ್ಞಾನದ ಕ್ಷಣದಲ್ಲಿಯೇ ಹಾವು ತೋರುತ್ತದೆ. ಈ ಹಾವು ಹತ್ತಿರ ಎಲ್ಲಿಯೂ ಇರ ಲಿಲ್ಲ. ಎಲ್ಲಿಂದಲೂ ಬರಲೂ ಇಲ್ಲ. ಹಗ್ಗದ ಇರುವಿಕೆಯು ಗೊತ್ತಾಗದೇ ಇದ್ದ ಕಾರಣ ಹಗ್ಗವೇ ಹಾವೆಂದು ಭ್ರಮೆಯಿಂದ ಕಾಣಿಸಿತು. ಈ ಭ್ರಮೆಯು ಹಗ್ಗದ ಜ್ಞಾನದಲ್ಲಿ ಇಲ್ಲವಾದಾಗ ಹಾವು ತೋರಿಕೆ ಮಾತ್ರ. ನಿಜವಾಗಿ ಇಲ್ಲವೇ ಇಲ್ಲ ಎಂಬ ನಿಶ್ಚಯವಾಗುತ್ತದೆ. ಹಾಗೆಯೇ ಚೈತನ್ಯ ಸ್ವರೂಪದ ಜ್ಞಾನವಿಲ್ಲದ ಕಾರಣ ಚೈತನ್ಯವೇ ಜೀವ ಹಾಗೂ ಜಗತ್ತಾಗಿ ತೋರುತ್ತಿದ್ದಾನೆ. ಹೀಗೆ ತೋರಿದಾಕ್ಷಣ ಜೀವವಾಗಲೀ ಜಗತ್ತಾಗಲೀ ನಿಜವಲ್ಲ. ಆದ್ದರಿಂದ ಜೀವನು ಜಗತ್ತಿನಲ್ಲಿ ಅನುಭವಿಸುತ್ತಿರುವ ಸುಖ-ದುಃಖಾದಿಗಳೂ ಅಂದರೆ ಜೀವತ್ವವೂ ನಿಜವಲ್ಲ. ಆತ್ಮನೇ ಜೀವನಾಗಿ ತೋರುತ್ತಿ ದ್ದಾನೆ. ಜೀವದ ಸ್ವರೂಪವು ಆತ್ಮನಿಗಿಂತ ಬೇರೆ ಇಲ್ಲ. ಆತ್ಮನನ್ನು ಬಿಟ್ಟುಕೊಟ್ಟು ಜೀವ ಇಲ್ಲ. ಹಗ್ಗವೇ ಹಾವಾಗಿ ತೋರುತ್ತಿರುವುದರಿಂದ ಹಾವಿನ ಸ್ವರೂಪವೂ ಹಗ್ಗವೇ. ಹಗ್ಗವನ್ನು ಬಿಟ್ಟುಕೊಟ್ಟು ಹಾವು ಇಲ್ಲವೇ ಇಲ್ಲ. ಇರುವುದೆಲ್ಲಾ ಹಗ್ಗ ಒಂದೇ. ಆತ್ಮನಲ್ಲಿ ಜೀವತ್ವ ಅಂದರೆ ಜೀವನ ಕರ್ತೃತ್ವ ಭೋಕ್ತೃತ್ವಕ್ಕೆ ಅವಶ್ಯವಾದ ಈ ಜಗತ್ತೆಲ್ಲವೂ ಅವಿದ್ಯಾ ಕಲ್ಪಿತವಾಗಿದೆ. ಇವುಗಳೆಲ್ಲಾ ತೋರುತ್ತಿದ್ದಾಗ್ಯೂ ಆತ್ಮನು ಕೇವಲಾ ಚಿತಿಃ ಚೈತನ್ಯ ಮಾತ್ರ.

ಉಪಾದಾನಂ ಪ್ರಪಂಚಸ್ಯ ಬ್ರಹ್ಮಣೋಽನ್ಯನ್ನ ವಿದ್ಯತೇ ।
ತಸ್ಮಾತ್ ಸರ್ವ ಪ್ರಪಂಚೋಽಯಂ ಬ್ರಹ್ಮೈವಾಸ್ತಿ ನ ಚೇತರತ್ ॥

ಪ್ರಪಂಚಸ್ಯ=ಪ್ರಪಂಚದ, **ಉಪಾದಾನಂ**=ಉಪಾದಾನ ಕಾರಣವು, **ಬ್ರಹ್ಮಣಃ**=ಬ್ರಹ್ಮಕ್ಕಿಂತ, **ಅನ್ಯತ್**=ಬೇರೆಯಾದದ್ದು, **ನವಿದ್ಯತೇ**=ಇಲ್ಲವೇ ಇಲ್ಲ, **ತಸ್ಮಾತ್**=ಆದ್ದರಿಂದ, **ಅ ಯಂ**=ಈ, **ಸರ್ವ ಪ್ರಪಂಚಃ**=ಪ್ರಪಂಚ ವೆಲ್ಲವೂ, **ಬ್ರಹ್ಮ ಏವ**=ಬ್ರಹ್ಮವೇ, **ಅಸ್ತಿ**=ಆಗಿರುತ್ತದೆ. **ಚ**=ಮತ್ತು, **ನ ಇತರತ್**=ಬ್ರಹ್ಮವನ್ನು ಬಿಟ್ಟುಕೊಟ್ಟು ಇಲ್ಲ.

ಪ್ರಪಂಚದ ಉಪಾದಾನ ಕಾರಣವು ಬ್ರಹ್ಮಕ್ಕಿಂತ ಬೇರೆಯಾದದ್ದು ಇಲ್ಲವೇ ಇಲ್ಲ, ಆದ್ದರಿಂದ ಈ ಪ್ರಪಂಚವೆಲ್ಲವೂ ಬ್ರಹ್ಮವೇ ಆಗಿರುತ್ತದೆ ಹಾಗೂ ಬ್ರಹ್ಮವನ್ನು ಬಿಟ್ಟು ಕೊಟ್ಟು ಇಲ್ಲ.

ಯಾವ ಕಾರಣವು ಕಾರ್ಯದ ಆಕಾರವಾಗಿ ಪರಿಣಮಿಸುವುದೋ ಅದನ್ನು ಆ ಕಾರ್ಯದ ಉಪಾದಾನ ಕಾರಣವೆನ್ನುತ್ತಾರೆ. ಮಣ್ಣು ಮಡಕೆಯ ಆಕಾರವಾಗಿ ಪರಿಣಮಿಸುವುದರಿಂದ ಮಣ್ಣು ಮಡಕೆಗೆ ಉಪಾದಾನ ಕಾರಣವೆನ್ನುತ್ತಾರೆ. ಮಣ್ಣನ್ನು ಬಿಟ್ಟುಕೊಟ್ಟು ಮಡಕೆ ಇಲ್ಲ. ಮಡಕೆ ಮಾಡುವುದಕ್ಕೆ ಮಣ್ಣನ್ನೇ ತೆಗೆದುಕೊಳ್ಳ ಬೇಕೇ ಹೊರತು ಹತ್ತಿಯನ್ನ [illegible] ಆದ್ದರಿಂದ ಯಾವ

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ತುವನ್ನು ತೆಗೆದುಕೊಂಡಲ್ಲದೆ ಕಾರ್ಯವು ಉಂಟಾಗುವುದಿಲ್ಲವೋ ಆ ವಸ್ತುವು ಆ ಕಾರ್ಯದ ಉಪಾದಾನ ಕಾರಣವೆನಿಸಿಕೊಳ್ಳುತ್ತದೆ. ಉಪನಿಷತ್ತುಗಳು ಸೃಷ್ಟಿಯನ್ನು ತಿಳಿಸುವಾಗ ಪ್ರಪಂಚಕ್ಕೆ ಬ್ರಹ್ಮಕ್ಕಿಂತ ಬೇರೆಯಾದ ಉಪಾದಾನ ಕಾರಣ ಇಲ್ಲವೆಂದು ಹೇಳುತ್ತದೆ. ಆದ್ದರಿಂದ ಹೇಗೆ ಮಡಕೆ ಎಲ್ಲವೂ ಮಣ್ಣೇ ಆಗಿದೆಯೋ, ಮಣ್ಣನ್ನು ಬಿಟ್ಟುಕೊಟ್ಟು ಮಡಕೆ ಇಲ್ಲವೇ ಇಲ್ಲವೋ, ಹಾಗೆಯೇ ಈ ಜಗತ್ತೆಲ್ಲವೂ ಬ್ರಹ್ಮವೇ ಆಗಿದೆ, ಬ್ರಹ್ಮನನ್ನು ಬಿಟ್ಟುಕೊಟ್ಟು ಇಲ್ಲವೇ ಇಲ್ಲ.

ವ್ಯಾಪ್ಯವ್ಯಾಪಕತಾ ಮಿಥ್ಯಾ ಸರ್ವಮಾತ್ಮೇತಿ ಶಾಸನಾತ್ ।
ಇತಿ ಜ್ಞಾತೇ ಪರೇ ತತ್ತ್ವೇ ಭೇದಸ್ಯಾವಸರಃ ಕುತಃ ॥ ೪೬ ॥

ಸರ್ವಂ ಆತ್ಮಾ ಇತಿ=ಎಲ್ಲವೂ ಆತ್ಮನೇ ಎಂದು, **ಶಾಸನಾತ್**=ಶ್ರುತಿಯಲ್ಲಿ ಹೇಳಿರುವುದರಿಂದ, **ವ್ಯಾಪ್ಯವ್ಯಾಪಕತಾ**=ವ್ಯಾಪ್ಯವ್ಯಾಪಕ ಭಾವವು, **ಮಿಥ್ಯಾ**=ಸುಳ್ಳೇ ಆಗಿರುತ್ತದೆ, **ಇತಿ**=ಹೀಗೆಂದು, **ಪರೇ ತತ್ತ್ವೇ**=ಆ ಶ್ರೇಷ್ಠವಾದ ತತ್ತ್ವವು **ಜ್ಞಾತೇ** (ಸತಿ)=ತಿಳಿಯಲ್ಪಟ್ಟದ್ದೇ ಆದರೆ, **ಭೇದಸ್ಯ**=ಭೇದ ಭಾವಕ್ಕೆ **ಅವಸರಃ**=ಅವಕಾಶವು, **ಕುತಃ**=ಎಲ್ಲಿಯದು ?

"ಎಲ್ಲವೂ ಆತ್ಮನೇ" ಎಂದು ಶ್ರುತಿಯಲ್ಲಿ ಹೇಳಿರುವುದರಿಂದ ವ್ಯಾಪ್ಯವ್ಯಾಪಕ ಭಾವವು ಸುಳ್ಳೇ ಆಗಿರುತ್ತದೆ. ಹೀಗೆಂದು ಆ ಶ್ರೇಷ್ಠವಾದ ತತ್ತ್ವವು ತಿಳಿಯಲ್ಪಟ್ಟದ್ದೇ ಆದರೆ ಭೇದ ಭಾವಕ್ಕೆ ಅವಕಾಶವೇ ಇರುವುದಿಲ್ಲ.

ಬ್ರಹ್ಮನು ಜಗತ್ತಿನ ಉಪಾದಾನ ಕಾರಣವಾಗಿರುವುದರಿಂದ ಜಗತ್ತಿನಲ್ಲೆಲ್ಲಾ ವ್ಯಾಪಿಸಿದ್ದಾನೆ ಎಂದ ಹಾಗಾಯಿತು. ಜಗತ್ತನ್ನೇ ಸತ್ಯವೆಂದುಕೊಂಡು ಬಂದ ಸಾಧಕನನ್ನು ತತ್ತ್ವದ ಕಡೆಗೆ ಕೊಂಡೊಯ್ಯಲು ಈ ವ್ಯಾಪ್ಯವ್ಯಾಪಕ ಭಾವವನ್ನು ಉಪಾಯವಾಗಿ ಶ್ರುತಿಯು ಅಧ್ಯಾರೋಪ ಮಾಡಿದೆ. ನಂತರ "ಸರ್ವಂ ಆತ್ಮಾ" ಎಲ್ಲವೂ ಆತ್ಮನೇ ಎಂಬ ಉಪದೇಶದಿಂದ ಅಧ್ಯಾರೋಪವನ್ನು ಅಪವಾದ ಮಾಡಿರುತ್ತದೆ. ವ್ಯಾವಹಾರಿಕವಾಗಿ ವ್ಯಾಪ್ಯವ್ಯಾಪಕ ಸಂಬಂಧದಿಂದ ಜಗತ್ತಿನ ವಸ್ತುಗಳನ್ನು ಗುರುತಿಸಿ ಅಭ್ಯಾಸವಿರುವುದರಿಂದ ಶ್ರುತಿಯು ಈ ಮೂಲಕವಾಗಿಯೇ ಉಪದೇಶ ಮಾಡಿರುತ್ತದೆ. ಆತ್ಮನು ಜಗತ್ತನ್ನೆಲ್ಲಾ ವ್ಯಾಪಿಸಿದ್ದಾನೆ ಎಂದರೆ ಜಗತ್ತೆಂಬುದೊಂದು ಆತ್ಮನಿಗಿಂತ ಬೇರೆಯಾದ ವಸ್ತುವಾಗಿ ವ್ಯಾಪಿಸುವುದಕ್ಕೆ ಮುಂಚೆ ಇದ್ದಿರಬೇಕು ಎಂದಾಗುತ್ತದೆ. ಅಂದರೆ ಆತ್ಮನು ಪರಿಚ್ಛಿನ್ನನಾಗುತ್ತಾನೆ. ಇದನ್ನು ಶ್ರುತಿಯು ಒಪ್ಪುವುದಿಲ್ಲ. ಸರ್ವಂ ಆತ್ಮಾ–ಎಲ್ಲವೂ ಆತ್ಮನೇ ಎಂಬ ಎಚ್ಚರದಲ್ಲಿ ವ್ಯಾಪಿಸುವ ವಸ್ತುವೂ ಇಲ್ಲ ; ವ್ಯಾಪಿಸುವಿಕೆಯೂ ಇಲ್ಲ ; ವ್ಯಾಪಿಸಲ್ಪಡುವ ವಸ್ತುವೂ ಇಲ್ಲ. ಎಲ್ಲವೂ ಆತ್ಮನೇ. ಈ ನಿಶ್ಚಯದಲ್ಲಿ ಭೇದಬುದ್ಧಿಗೆ ಅವಕಾಶ ಹೇಗೆ ತಾನೆ ಸಾಧ್ಯ !

ಶ್ರುತ್ಯಾ ನಿವಾರಿತಂ ನೂನಂ ನಾನಾತ್ವಂ ಸ್ವಮುಖೇನ ಹಿ ।
ಕಥಂ ಭಾಸೋ ಭವೇದನ್ಯಃ ಸ್ಥಿತೇ ಚಾದ್ವಯಕಾರಣೇ ॥ ೪೭ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನಾತ್ವಂ=ಭೇದವು. **ಶ್ರುತ್ಯಾ**=ಶ್ರುತಿಯಿಂದ. **ಸ್ವಮುಖೇನ**=ತನ್ನದೇ ಆದ ಪದಗಳಿಂದ. **ನೂನಂ**= ಖಂಡಿತವಾಗಿಯೂ. **ನಿವಾರಿತಂ ಹಿ**=ನಿವಾರಿಸಲ್ಪಟ್ಟಿದೆ ಯಷ್ಟೆ. **ಅದ್ವಯಕಾರಣೇ**=ಎರಡಿಲ್ಲದ ಒಂದೇ ಕಾರಣವಾಗಿ, **ಸ್ಥಿತೇ**=ಇರು ವಾಗ, **ಅನ್ಯಃ**=ಅದಕ್ಕಿಂತ ಬೇರೆಯಾದದ್ದು, **ಕಥಂ**=ಹೇಗೆ, **ಭಾಸಃ**=ತೋರಿ ಕೊಂಡು **ಭವೇತ್**=ಇದ್ದೀತು.

ಶ್ರುತಿಯಿಂದ ತನ್ನದೇ ಆದ ಪದಗಳ ಮೂಲಕ ನಿಶ್ಚಯವಾಗಿಯೂ ಭೇದವು ನಿವಾರಿಸಲ್ಪಟ್ಟಿದೆಯಷ್ಟೆ. ಎರಡಿಲ್ಲದ ಒಂದೇ ಕಾರಣವಾಗಿ ಇರುವಾಗ, ಅದಕ್ಕಿಂತ ಬೇರೆಯಾದದ್ದು ಹೇಗೆ ತಾನೆ ತೋರಿಕೊಂಡು ಇದ್ದೀತು ?

ಹಿಂದಿನ ಎರಡು ಶ್ಲೋಕಗಳಲ್ಲಿ ಆತ್ಮನಲ್ಲಿ ಸಜಾತೀಯ ಭೇದವಾಗಲೀ, ವಿಜಾತೀಯ ಭೇದವಾಗಲೀ ಇಲ್ಲವೆಂದು ಶ್ರುತಿಯ ಆಧಾರದಿಂದ ತಿಳಿಸಿದ್ದಾಯಿತು. ಆತ್ಮನೂ ನಿರಾಕಾರನೂ, ನಿರವಯವನೂ ಆಗಿರುವುದರಿಂದ ಸ್ವಗತ ಭೇದವೂ ಇಲ್ಲ. ಹೀಗೆ ಆತ್ಮನು ಭೇದ ರಹಿತನೆಂದು 'ನೇಹ ನಾನಾಸ್ತಿ ಕಿಂಚನ' ಆತ್ಮನಲ್ಲಿ ಸ್ವಲ್ಪವೂ ಭೇದವಿಲ್ಲ ಎಂದು ಬೃಹದಾರಣ್ಯಕ ಹಾಗೂ ಕಠೋಪನಿಷತ್ತುಗಳು ತಿಳಿಸುತ್ತವೆ. ಆತ್ಮನು ಅದ್ವಯನು ಎಂದರೆ, ಆತ್ಮನನ್ನು ಬಿಟ್ಟುಕೊಟ್ಟು ಇನ್ನೊಂದಿಲ್ಲ, ತನ್ನ ಜಾತಿಗೆ ಸೇರಿದ್ದೂ ಇಲ್ಲ, ತನ್ನದೇ ಆದ ಇನ್ನೊಂದು ಭಾಗವೂ ಇಲ್ಲ. ಇಂತಹ ಪರಮಾರ್ಥ ಸ್ವರೂಪವುಳ್ಳ ಆತ್ಮನಿಗಿಂತ ಬೇರೆಯಾದದ್ದು ಇರುವ ಸಂಭವವೇ ಇಲ್ಲ.

ದೋಷೋಽಪಿ ವಿಹಿತಃ ಶ್ರುತ್ಯಾ ಮೃತ್ಯೋರ್ಮೃತ್ಯುಂ ಸ ಗಚ್ಛತಿ ।
ಇಹ ಪಶ್ಯತಿ ನಾನಾತ್ವಂ ಮಾಯಯಾ ವಂಚಿತೋ ನರಃ ॥ ೪೮ ॥

(**ಯಃ**=ಯಾವ) **ನರಃ**=ಮನುಷ್ಯನು, **ಮಾಯಯಾ**=ಮಾಯೆಯಿಂದ, **ವಂಚಿತಃ**=ಮೋಸಹೋಗಿ, **ನಾನಾತ್ವಂ**=ಭೇದವನ್ನು, **ಇಹ**=ಈ ಆತ್ಮನಲ್ಲಿ, **ಪಶ್ಯತಿ**=ಕಾಣುತ್ತಾನೆಯೋ, **ಸಃ**=ಅವನು, **ಮೃತ್ಯೋಃ**=ಮರಣದಿಂದ, **ಮೃತ್ಯುಂ**=ಮರಣಕ್ಕೆ, **ಗಚ್ಛತಿ**=ಹೋಗುತ್ತಿರುತ್ತಾನೆ (**ಇತಿ**=ಹೀಗೆಂದು) **ಶ್ರುತ್ಯಾ**=ಶ್ರುತಿಯಿಂದ, **ವಿಹಿತಃ**=ಉಪದೇಶಿಸಲ್ಪಟ್ಟ, **ದೋಷಃ**=ಅಪಿ, ದೋಷವೂ ಕೂಡ **ಅಸ್ತಿ**=ಇದೆ.

ಯಾವ ಮನುಷ್ಯನು ಮಾಯೆಯಿಂದ ಮೋಸಹೋಗಿ, ಈ ಆತ್ಮನಲ್ಲಿ ಭೇದವನ್ನು ಕಾಣುತ್ತಾನೋ, ಅವನು ಮರಣದಿಂದ ಮರಣಕ್ಕೆ ಹೋಗುತ್ತಿರುತ್ತಾನೆ ಎಂದು ಕಠೋಪನಿಷತ್ತಿನಿಂದ ಉಪದೇಶಿಸಲ್ಪಟ್ಟ ದೋಷವು ಕೂಡ ಇದೆ.

ಹಿಂದಿನ ಶ್ಲೋಕದಲ್ಲಿ ಭೇದವಿಲ್ಲವೆಂದು ಹೇಳಿದ್ದಾಯಿತು. ಹೀಗೆ ಇಲ್ಲದ ಭೇದ ವನ್ನು ಇದೆ ಎಂದು ತಿಳಿದರೆ, ಉಂಟಾಗುವ ಕಷ್ಟ ಪರಂಪರೆಯನ್ನು ಕಠೋಪನಿಷತ್ತಿನ ಮಂತ್ರವನ್ನು ಉದಹರಿಸಿ ಉಪದೇಶಿಸುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ"–ಯಾರು ಈ ಆತ್ಮನಲ್ಲಿ ಭೇದವಿರುವಂತೆ ತಿಳಿಯುವನೋ ಅವನು ಮೃತ್ಯುವಿನ ಮೇಲೆ ಮೃತ್ಯುವನ್ನು ಪಡೆಯುತ್ತಿರುವನು. ನಿಜವಾಗಿ ಮರಣವೆಂಬುದು ಒಂದು ಇದೆ ಎಂದು ಹೇಳುವುದು ಈ ಮಂತ್ರದ ಅಭಿಪ್ರಾಯವಲ್ಲ. ತಾನು ಏಕಃ ಅದ್ವಿತೀಯಃ, ತನ್ನಲ್ಲಿ ಯಾವ ಭೇದವೂ ಇಲ್ಲ, ತನ್ನನ್ನು ಬಿಟ್ಟುಕೊಟ್ಟು ಏನೂ ಇಲ್ಲ ಎಂಬ ಎಚ್ಚರವಿಲ್ಲದ ಕಾರಣ ಮಾಯೆಯಿಂದ ಮೋಹಿತನಾಗಿ ಮನುಷ್ಯನು ತನಗಿಂತ ಬೇರೆಯಾಗಿ ತೋರುತ್ತಿರುವ ಎರಡನೆಯ ವಸ್ತು ಇದೆ ಎಂದು ನಂಬುತ್ತಾನೆ. ಇಂತಹ ವಸ್ತುವನ್ನು ತನ್ನ ರಾಗ–ದ್ವೇಷಕ್ಕೆ ಅನುಗುಣವಾಗಿ ಪಡೆಯುವುದಕ್ಕೆ ಅಥವಾ ನಿವಾರಣೆ ಮಾಡಿಕೊಳ್ಳುವುದಕ್ಕೆ ಕರ್ಮಗಳನ್ನು ಮಾಡುತ್ತಾ, ಹೊಸಹೊಸ ರಾಗ–ದ್ವೇಷಗಳಿಂದ ಕೂಡಿದ ವಾಸನೆಗಳನ್ನು ಕೂಡಿಹಾಕಿಕೊಳ್ಳುತ್ತಾನೆ. ಈ ವಾಸನೆಗಳಿಗೆ ಅನುಗುಣವಾಗಿ ಜನ್ಮ ಮರಣಗಳೆಂಬ ಪ್ರವಾಹದಲ್ಲಿ ಸಿಕ್ಕಿಕೊಂಡು ಕೊಚ್ಚಿಹೋಗುತ್ತಿದ್ದಾನೆ. ಇದೆಲ್ಲಾ ಮಾಯೆಯಿಂದ ವಂಚಿತನಾದದ್ದರ ಪರಿಣಾಮ. ದ್ವೈತವೆಂಬುದೇ ಮಾಯೆ, ಭೇದವೆಂಬುದು ಇಲ್ಲವೇ ಇಲ್ಲ. 'ನಾನಾ ಇವ' ಬೇರೆ ಬೇರೆಯಾಗಿರುವಂತೆ ತೋರುತ್ತಿದೆ ಎಂಬುದೇ ಶ್ರುತಿಯ ತಾತ್ಪರ್ಯ.

ಬ್ರಹ್ಮಣಃ ಸರ್ವಭೂತಾನಿ ಜಾಯನ್ತೇ ಪರಮಾತ್ಮನಃ ।
ತಸ್ಮಾದೇತಾನಿ ಬ್ರಹ್ಮೈವ ಭವನ್ತೀತ್ಯವಧಾರಯೇತ್ ॥ ೪೯ ॥

ಬ್ರಹ್ಮಣಃ=ಬ್ರಹ್ಮವೆಂಬ, **ಪರಮಾತ್ಮನಃ**=ಪರಮಾತ್ಮನಿಂದಲೇ **ಸರ್ವಭೂತಾನಿ**=ಎಲ್ಲಾ ಪ್ರಾಣಿಗಳೂ **ಜಾಯಂತೇ**=ಹುಟ್ಟುತ್ತವೆ. **ತಸ್ಮಾತ್**=ಆದ್ದರಿಂದ. **ಏತಾನಿ**=ಇವುಗಳೆಲ್ಲಾ **ಬ್ರಹ್ಮಏವ**=ಬ್ರಹ್ಮವೇ, **ಭವಂತಿ**=ಆಗಿರುವುದು, **ಇತಿ**=ಎಂದು, **ಅವಧಾರಯೇತ್**=ನಿಶ್ಚಯಿಸಬೇಕು.

ಬ್ರಹ್ಮವೆಂಬ ಪರಮಾತ್ಮನಿಂದಲೇ ಎಲ್ಲಾ ಪ್ರಾಣಿಗಳೂ ಹುಟ್ಟುತ್ತವೆ. ಆದ್ದರಿಂದ ಇವೆಲ್ಲಾ ಬ್ರಹ್ಮವೇ ಆಗಿರುವುದೆಂದು ನಿಶ್ಚಯಿಸಬೇಕು.

ಒಬ್ಬ ಕುಂಬಾರನು ಒಂದು ಮಣ್ಣಿನ ರಾಶಿಯನ್ನು ಕಲೆಸಿ ನೆನೆಸಿಟ್ಟುಕೊಳ್ಳುತ್ತಾನೆ. ನಂತರ ತನ್ನ ಕಲ್ಪನೆಗೆ ಬರುವ ಮಡಕೆ, ಕುಡಿಕೆ, ಹೂಜಿ, ತಟ್ಟೆ ಇತ್ಯಾದಿ ಆಕಾರಗಳುಳ್ಳ ಮಣ್ಣಿನ ಪದಾರ್ಥಗಳನ್ನು ತಯಾರಿಸುತ್ತಾನೆ. ಈ ಪದಾರ್ಥಗಳಲ್ಲೆಲ್ಲಾ ಕಣಕಣದಲ್ಲಿಯೂ ಮಣ್ಣೇ ಇರುವುದರಿಂದ ಅವುಗಳು ಮಣ್ಣನ್ನು ಬಿಟ್ಟುಕೊಟ್ಟು ಇರಲಾರವು. ಅಂದರೆ ಅವು ಮಣ್ಣಿನಲ್ಲೇ ತಮ್ಮ ಇರುವಿಕೆಯನ್ನು ಪಡೆದಂತಾಯಿತು. ಈ ನಾನಾ ಆಕಾರದ ಪದಾರ್ಥಗಳು ಒಡೆದಾಗ ಅವುಗಳ ಹೆಸರೂ, ಆಕಾರವೂ ಹೋಗಿ ಬಿಡುತ್ತವೆ. ಆಗ ಅವುಗಳು ಕೇವಲ ಮಣ್ಣೇ ಆಗಿರುತ್ತವೆ. ಅಂದರೆ ಮಡಕೆ, ಕುಡಿಕೆ, ಆದ ಪದಾರ್ಥಗಳು ಮಣ್ಣೇ ಆಗಿ ಬಿಟ್ಟವು ಅಥವಾ ಮಣ್ಣಿನಲ್ಲಿ ಸೇರಿಹೋದವು. ಈ ವಿಚಾರದಿಂದ ತಿಳಿದು ಬರುವುದೇನೆಂದರೆ ಮಡಕೆ ಕುಡಿಕೆಗಳೆಲ್ಲವೂ ತಮ್ಮ ಹೆಸರು ಆಕಾರಪಡೆಯುವುದಕ್ಕೆ ಮುಂಚೆ, ಪಡೆದಿರುವಾಗ, ನಾಮರೂಪಗಳನ್ನು ಕಳೆದುಕೊಂಡಾದ ಮೇಲೆ, ಅಂದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವಾಗಲೂ ಮಣ್ಣೇ ಆಗಿರುತ್ತವೆ. ಹೀಗೆಯೇ ಬ್ರಹ್ಮನಿಂದಲೇ ಎಲ್ಲಾ ಪ್ರಾಣಿಗಳೂ ಹುಟ್ಟಿ ಇದ್ದು, ಅಡಗಿ ಹೋಗುವುದರಿಂದ ಎಲ್ಲವೂ ಬ್ರಹ್ಮವೇ. ಇದನ್ನೇ ತೈತ್ತರೀಯ ಶ್ರುತಿಯ ಈ ಮಂತ್ರದ ಅಭಿಪ್ರಾಯವು ತಿಳಿಸಿಕೊಡುತ್ತದೆ.

'ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ ಜೀವನ್ತಿ । ಯತ್ಪ್ರಯಂ ತ್ಯಭಿಸಂವಿಶಂತಿ । ತದ್ವಿಜಿ ಜ್ಞಾಸಸ್ವ ॥'

"ಯಾವುದರಿಂದ ಈ ಪ್ರಾಣಿಗಳೆಲ್ಲವೂ ಹುಟ್ಟುವುವೋ, ಹುಟ್ಟಿದ ಮೇಲೆ ಯಾವುದರಿಂದ ಬದುಕಿರುವವೋ, ಕೊನೆಗೆ ಯಾವುದರಲ್ಲಿ ಅಡಗಿ ಸೇರಿ ಹೋಗುವುವೋ, ಅದನ್ನು ತಿಳಿದುಕೋ. ಅದೇ ಬ್ರಹ್ಮವು."

ಬ್ರಹ್ಮೈವ ಸರ್ವನಾಮಾನಿ ರೂಪಿಣಿ ವಿವಿಧಾನಿ ಚ ।
ಕರ್ಮಾಣ್ಯಪಿ ಸಮಗ್ರಾಣಿ ಬಿಭರ್ತೀತಿ ಶ್ರುತಿರ್ಜಗೌ ॥ ೫೦ ॥

ಬ್ರಹ್ಮ ಏವ=ಬ್ರಹ್ಮವೇ. **ವಿವಿಧಾನಿ**=ಬಗೆಬಗೆಯಾದ, **ಸರ್ವನಾಮಾನಿ**=ಎಲ್ಲಾ ನಾಮಗಳನ್ನೂ, **ರೂಪಾಣಿ**=ರೂಪಗಳನ್ನೂ, **ಸಮಗ್ರಾಣಿ**=ಎಲ್ಲಾ, **ಕರ್ಮಾಣಿ ಅಪಿ**=ಕರ್ಮಗಳನ್ನು ಕೂಡ, **ಬಿಭರ್ತಿ ಇತಿ**=ಧರಿಸಿರುವುದೆಂದು **ಶ್ರುತಿಃ**=ಶ್ರುತಿಯು, **ಜಗೌ**=ಘೋಷಿಸುತ್ತದೆ.

ಬ್ರಹ್ಮವೇ ನಾನಾರೀತಿಯಾಗಿ ಇರುವ ನಾಮ, ರೂಪ, ಕರ್ಮಗಳನ್ನೆಲ್ಲಾ ಧರಿಸು ವುದೆಂದು ಶ್ರುತಿಯು ಘೋಷಿಸುತ್ತದೆ.

ನಮ್ಮ ಪರಿಸರದಲ್ಲಿ ತೋರುತ್ತಿರುವ ವಿಧವಿಧವಾದ ನಾಮ ರೂಪಗಳುಳ್ಳ ಭೂತಗಳು ಹಾಗು ವಸ್ತುಗಳು ಮತ್ತು ಅವುಗಳ ಮಧ್ಯೆ ಪರಸ್ಪರವಾಗಿ ನಡೆಯುವ ವ್ಯವಹಾರಗಳೆಂಬ ಕರ್ಮಗಳೇ ಜಗತ್ತು ಎನಿಸಿಕೊಂಡಿದೆ. ಹಿಂದಿನ ಶ್ಲೋಕವು ತಿಳಿಸು ವಂತೆ, ಜಗತ್ತು ನಾನು ತೋರುತ್ತಿರುವ ಕಾಲದಲ್ಲಿಯೂ ಬ್ರಹ್ಮನನ್ನು ಬಿಟ್ಟುಕೊಟ್ಟು ಇಲ್ಲ. ಅಂದರೆ ಬ್ರಹ್ಮನನ್ನೇ ಆಧರಿಸಿ ತೋರುತ್ತಿದೆ. ಹೀಗೆ ನಾಮರೂಪ ಕರ್ಮಗಳೆಂಬ ಜಗತ್ತಿನ ಇರುವಿಕೆಗೆ ಬ್ರಹ್ಮವೇ ಅಧಿಷ್ಠಾನ ಕಾರಣವಾಗಿರುವುದರಿಂದ, ಇದು ಧರಿಸು ತ್ತದೆ. ಹೀಗೆ ಧರಿಸುವುದರಿಂದಲೇ ಇದಕ್ಕೆ ಬ್ರಹ್ಮವೆಂಬ ಹೆಸರು ಬಂದಿದೆ.

ಇದನ್ನೇ ಬೃಹದಾರಣ್ಯಕ ಶ್ರುತಿಯು ಹೀಗೆ ಹೇಳುತ್ತದೆ.

"ತ್ರಯಂವಾ ಇದಂ ನಾಮ ರೂಪ ಕರ್ಮ........ಏತದ್ಧಿ ಸರ್ವಾಣಿ ಕರ್ಮಾಣಿ ಬಿಭರ್ತಿ ॥"

"ಈ ಪ್ರಪಂಚವು ನಾಮಂ ರೂಪ, ಕ್ರಿಯಾತ್ಮಕವಾಗಿರುವುದರಿಂದ..........ಇದೇ ಎಲ್ಲಾ ಕರ್ಮಗಳನ್ನೂ ಧರಿಸಿರುವುದು" ಎಂದು ಹೇಳಿದ ನಂತರ ಬಿಭರ್ತೀತಿ ಬ್ರಹ್ಮ- ಧರಿಸುವುದರಿಂದ ಇದಕ್ಕೆ ಬ್ರಹ್ಮವೆಂದು ಹೆಸರು ಬಂದಿದೆ ಎಂದು ಮುಂದೆ ವಿವರಿಸಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುವರ್ಣಾಜ್ಜಾಯಮಾನಸ್ಯ ಸುವರ್ಣತ್ವಂ ಶಾಶ್ವತಮ್ ।
ಬ್ರಹ್ಮಣೋ ಜಾಯಮಾನಸ್ಯ ಬ್ರಹ್ಮತ್ವಂ ಚ ತಥಾ ಭವೇತ್
॥ ೬೦ ॥

ಸುವರ್ಣಾತ್=ಚಿನ್ನದಿಂದ, **ಜಾಯಮಾನಸ್ಯ**=ಹುಟ್ಟಿರುವ ಆಭರಣಕ್ಕೆ, **ಸುವರ್ಣತ್ವಂ**=ಚಿನ್ನದ ತತ್ವವು, **ಶಾಶ್ವತಂ ಚ**=ಇರುವುದಷ್ಟೇ, **ತಥಾ**=ಹಾಗೆಯೇ, **ಬ್ರಹ್ಮಣಃ**=ಬ್ರಹ್ಮದಿಂದ, **ಜಾಯಮಾನಸ್ಯ**=ಹುಟ್ಟಿದ ಜಗತ್ತಿಗೆ, **ಬ್ರಹ್ಮತ್ವಂ**=ಬ್ರಹ್ಮತ್ವವು, **ತಥಾ ಭವೇತ್**=ಹಾಗೆಯೇ, (ಯಾವಾಗಲೂ ಇರುತ್ತದೆ).

ಚಿನ್ನದಿಂದ ಹುಟ್ಟಿರುವ ಆಭರಣಕ್ಕೆ ಚಿನ್ನದ ತತ್ವವು ಯಾವಾಗಲೂ ಇರುವುದಷ್ಟೇ. ಹಾಗೆಯೇ ಬ್ರಹ್ಮದಿಂದ ಹುಟ್ಟಿದ ಜಗತ್ತಿಗೆ ಬ್ರಹ್ಮತ್ವವು ಸದಾ ಇದ್ದೇ ಇರುತ್ತದೆ.

ಚಿನ್ನದಿಂದ ಮಾಡಲ್ಪಟ್ಟ ಚೈನಿನಲ್ಲಿ ಎಲ್ಲವೂ ಚಿನ್ನವೇ ಆಗಿರುತ್ತದೆಯೇ ಹೊರತು ಚಿನ್ನಕ್ಕಿಂತ ಬೇರೆಯಾದ ಭಾಗವೇ ಇರುವುದಿಲ್ಲ. ಚೈನಿನ ಕೊಂಡಿ, ಸರಪಳಿ, ಪದಕ, ಎಲ್ಲಾ ಭಾಗಗಳಲ್ಲಿ ಇದ್ದುದ್ದು ಚಿನ್ನವೇ ವಿನಹ, ಬೇರೇನೂ ಇಲ್ಲ. ಚಿನ್ನವನ್ನು ಬಿಟ್ಟು ಕೊಟ್ಟು ಅದು ಇರುವುದೇ ಇಲ್ಲ. ಹಾಗೆಯೇ ಬ್ರಹ್ಮದಿಂದ ಹುಟ್ಟಿ, ಬ್ರಹ್ಮದಲ್ಲಿಯೇ ಇರುವ ಜಗತ್ತಿಗೆ ಬ್ರಹ್ಮವೇ ಉಪಾದಾನ ಕಾರಣವೆಂದು ಶ್ರುತಿಗಳು ತಿಳಿಸುತ್ತವೆ. ಆದ್ದರಿಂದ ಜಗತ್ತು ಎನ್ನುವ ನಾಮ, ರೂಪ, ಕರ್ಮ ಭೇದಗಳಲ್ಲೆಲ್ಲಾ ಇರುವುದು ಬ್ರಹ್ಮವೇ. ಜಗತ್ತು ಬ್ರಹ್ಮವೇ ಹೊರತು, ಬ್ರಹ್ಮವನ್ನು ಬಿಟ್ಟುಕೊಟ್ಟು ಏನೂ ಇಲ್ಲ.

ಸ್ವಲ್ಪಮಪ್ಯನ್ತರಂ ಕೃತ್ವಾ ಜೀವಾತ್ಮ ಪರಮಾತ್ಮನೋಃ ।
ಯಃ ಸನ್ತಿಷ್ಠತಿ ಮೂಢಾತ್ಮಾ ಭಯಂ ತಸ್ಯಾಭಿಭಾಷಿತಮ್
॥ ೬೧ ॥

ಯಃ ಮೂಢಾತ್ಮಾ=ಯಾವ ಮೂಢನು, **ಜೀವಾತ್ಮ ಪರಮಾತ್ಮನೋಃ**=ಜೀವಾತ್ಮ ಪರಮಾತ್ಮರುಗಳಲ್ಲಿ, **ಅಂತರಂ**=ಭೇದವನ್ನು, **ಸ್ವಲ್ಪಂ ಅಪಿ**=ಸ್ವಲ್ಪವಾದರೂ **ಕೃತ್ವಾ**=ಮಾಡಿ, **ಸನ್ತಿಷ್ಠತಿ**=ನಿಲ್ಲುತ್ತಾನೋ, **ತಸ್ಯ**=ಅವನಿಗೆ, **ಭಯಂ**=ಭಯವುಂಟೆಂದು, **ಅಭಿಭಾಷಿತಂ**=(ಶ್ರುತಿಯು) ಹೇಳಿರುತ್ತದೆ.

ಯಾವ ಮೂಢನು ಜೀವಾತ್ಮ ಪರಮಾತ್ಮನಲ್ಲಿ, ಭೇದವನ್ನು ಕಣ ಮಾತ್ರವಾದರೂ ಮಾಡಿ ನಿಲ್ಲುತ್ತಾನೋ, ಅಂಥವನಿಗೆ ಭಯ ಉಂಟಾಗುವುದೆಂದು ಶ್ರುತಿಯು ಹೇಳುತ್ತದೆ.

ನಾನು ಜೀವ, ಪರಮಾತ್ಮನಿಗಿಂತ ಬೇರೆ ಎಂಬ ಭ್ರಾಂತಿಯು ಕಣ ಮಾತ್ರ ಉಂಟಾದರೂ ಸಾಕು, ನಮಗೆ ಅನೇಕಾನೇಕ ಭಯಗಳು ಉಂಟಾಗುತ್ತವೆ. ನಾನು ಸಾಯುವವನು, ಈ ನನ್ನ ವಸ್ತುಗಳು ನಾಶ ಹೊಂದುತ್ತವೆ—ಎಂಬ ಭಯದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ತತ್ತರಿಸಿ ಹೋಗುತ್ತೇವೆ. ಈಗಾಗಲೇ ತಿಳಿಸಿದಂತೆ ಜೀವ ಜಗತ್ತು ಎರಡಕ್ಕೂ ಬ್ರಹ್ಮವೇ ಉಪಾದಾನ ಕಾರಣವೆಂದು ಹೇಳಿರುವ ಶ್ರುತಿಯ ಅರ್ಥವನ್ನು ಸರಿಯಾಗಿ ತಿಳಿಯಲಾರದ ಅವಿವೇಕಿಗಳು ಬ್ರಹ್ಮ-ಜೀವ-ಜಗತ್ತುಗಳು ಬೇರೆ ಬೇರೆ ಎಂದು ತಿಳಿಯುತ್ತಾರೆ. ಹೀಗೆ ತಪ್ಪಾಗಿ ತಿಳಿಯುವುದೇ ಭಯಕ್ಕೆ ಕಾರಣವಾಗಿದೆ ಎಂದು ತೈತ್ತರೀಯ ಶ್ರುತಿಯು ತಿಳಿಸುತ್ತಿದೆ.

ಯದಾ ಹ್ಯೇವೈಷ ಏತಸ್ಮಿನ್ನುದರಮನ್ತರಂ ಕುರುತೇ
ಅಥ ತಸ್ಯ ಭಯಂ ಭವತಿ ॥ (ತೈತ್ತರೀಯ ಆನಂದವಲ್ಲಿ)

"ಯಾವಾಗ ಈತನು ಇದರಲ್ಲಿ ಸ್ವಲ್ಪವಾದರೂ ಭೇದವನ್ನು ಮಾಡಿಕೊಳ್ಳುತ್ತಾನೋ ಅದರಿಂದ ಇವನಿಗೆ ಭಯವು ಉಂಟಾಗುತ್ತದೆ."

ಯತ್ರಾಜ್ಞಾನಾದ್ಭವೇ ದ್ದ್ವೈತಮಿತರಸ್ತತ್ರ ಪಶ್ಯತಿ ।
ಆತ್ಮತ್ವೇನ ಯದಾ ಸರ್ವಂ ನೇತರಸ್ತತ್ರ ಚಾಣ್ವಪಿ ॥ ೫೩ ॥

ಯತ್ರ=ಎಲ್ಲಿ, **ಅಜ್ಞಾನಾತ್**=ಅಜ್ಞಾನದಿಂದ, **ದ್ವೈತಂ**=ದ್ವೈತವು, **ಭವೇತ್**=ಇರುತ್ತದೆಯೋ, **ತತ್ರ**=ಅಲ್ಲಿ, **ಇತರಃ**=ತನಗಿಂತ ಬೇರೆಯವರನ್ನು, **ಪಶ್ಯತಿ**=ಕಾಣುತ್ತಾನೆ, **ಯದಾ**=ಯಾವಾಗ, **ಸರ್ವಂ**=ಎಲ್ಲವೂ, **ಆತ್ಮತ್ವೇನ (ಪಶ್ಯತಿ)**=ತಾನೇ ಎಂದು ನೋಡುತ್ತಾನೋ, **ತತ್ರ**=ಅಲ್ಲಿ, **ಇತರಃ**=ತನಗಿಂತ ಬೇರೆಯಾದದ್ದು, **ಅಣು ಅಪಿ**=ಅಣು ಮಾತ್ರವೂ, **ನ**=ಇರುವುದಿಲ್ಲ.

ನಾನು ಯಾರು ಎಂಬ ಎಚ್ಚರವಿಲ್ಲದ ಕಾರಣ ನಾನು ಜೀವ, ಈ ಜಗತ್ತು ಸತ್ಯ. ನಾನು ಜಗತ್ತನ್ನು ಅನುಭವಿಸುತ್ತಿರುವುದೂ ಸತ್ಯ. ಹೀಗೆ ಅಜ್ಞಾನದಿಂದ ನನಗಿಂತ ಬೇರೆಯಾದದ್ದೆಲ್ಲವೂ ಸತ್ಯವಾಗಿದೆ ಎಂದು ವ್ಯವಹರಿಸುತ್ತಿದ್ದೇನೆ. ಶ್ರವಣದ ಫಲವಾಗಿ ಇರುವುದೆಲ್ಲಾ ಆತ್ಮ ಒಂದೇ. ಎಲ್ಲವೂ ಆತ್ಮನೇ, ಅವನನ್ನು ಬಿಟ್ಟುಕೊಟ್ಟು ಒಂದು ಕಣ ಮಾತ್ರವೂ ಏನೂ ಇಲ್ಲ. ಅದು ಇದೆ ಎಂದದ್ದೇ ಆದರೆ ಕೇವಲ ತೋರುವಿಕೆ ಎಂಬ ಜ್ಞಾನದಲ್ಲಿ ನಿಶ್ಚಯವಾಗಿ ನಿಲ್ಲುವುದೇ ಮೋಕ್ಷ.

ಈ ಅಭಿಪ್ರಾಯವು ಬೃಹದಾರಣ್ಯಕ ಶ್ರುತಿಯ ಕೆಳಗಿನ ಮಂತ್ರದಿಂದ ಉದಾಹರಿಸಲ್ಪಟ್ಟಿದೆ:-

ಯತ್ರ ತು ಅಸ್ಯ, ಸರ್ವಂ ಆತ್ಮಾ ಏವ ಆಭೂತ್
ತತ್‌ಕೇನ ಕಂ ಪಶ್ಯೇತ್, ಕೇನ ಕಂ ಜಿಘ್ರೇತ್.......

"ಯಾವ ಅವಸ್ಥೆಯಲ್ಲಿ ಬ್ರಹ್ಮಜ್ಞಾನಿಯಾದವನಿಗೆ ಸರ್ವವೂ ಆತ್ಮನೇ ಆಗಿರುವುದೋ, ಆ ಅವಸ್ಥೆಯಲ್ಲಿ ಯಾವ ಕಾರಣದಿಂದ ಯಾವುದನ್ನು ನೋಡಬೇಕು? ಯಾವ ಕಾರಣದಿಂದ ಯಾವುದನ್ನು ಮೂಸಬೇಕು? ...!"

Sri Vidyabharathi Book Centre, Sringeri

CC-O. In Public Domain. Digitized by eGangotri

ಯಸ್ಮಿನ್ ಸರ್ವಾಣಿ ಭೂತಾನಿ ಹ್ಯಾತ್ಮಾತ್ವೇವ ವಿಜಾನತಃ ।
ನವೈ ತಸ್ಯ ಭವೇನ್ಮೋಹೋ ನ ಚ ಶೋಕೋಽದ್ವಿತೀಯತಃ ॥ ೩೪ ॥

ಯಸ್ಮಿನ್=ಯಾವನಲ್ಲಿ, **ಸರ್ವಾಣಿ ಭೂತಾನಿ**=ಸಕಲ ಪ್ರಾಣಿಗಳೂ, **ಆತ್ಮಾ ಏವ**=ತನ್ನ ಆತ್ಮನೇ ಆಗಿ ಬಿಡುತ್ತವೆಯೋ, **ವಿಜಾನತಃ**=ಅಂತಹ ಜ್ಞಾನಿಗೆ **ಮೋಹಃ ನ**=ಮೋಹವಿಲ್ಲ, **ಶೋಕಃ ಚ ನ ಭವೇತ್ ವೈ**=ಶೋಕವು ಕೂಡ ಆಗುವುದಿಲ್ಲವಷ್ಟೆ, **ಹಿ**=ಏಕೆಂದರೆ, **ತಸ್ಯ**=ಅವನ, **ಅದ್ವಿತೀಯತಃ**=ಅದ್ವೈತ ಜ್ಞಾನವಿರುವುದರಿಂದ.

ಯಾವನಲ್ಲಿ ಸಕಲ ಪ್ರಾಣಿಗಳೂ, ಆತ್ಮವೇ ಆಗಿಬಿಡುತ್ತವೆಯೋ, ಅಂತಹ ಜ್ಞಾನಿಗೆ ಮೋಹವೂ ಇಲ್ಲ, ಶೋಕವೂ ಇಲ್ಲವಷ್ಟೆ. ಏಕೆಂದರೆ ಅವನಿಗೆ ತಾನು ಅದ್ವಿತೀಯನೆಂಬ ಅರಿವು ಇರುತ್ತದೆ.

ನಾನು ಜೀವ, ಈ ಜಗತ್ತು ಸತ್ಯ. ಈ ಜಗತ್ತಿನಲ್ಲಿ ಬೇಕಾದ ವಸ್ತುವನ್ನು ಪಡೆಯುವುದರಿಂದಲೂ, ಬೇಡವಾದ ವಸ್ತುಗಳನ್ನು ನಿವಾರಿಸಿಕೊಳ್ಳುವುದರಿಂದಲೂ, ನನಗೆ ಸುಖ ಸಿಗುತ್ತದೆಂಬ ಮೋಹ ಇದೆ. ನನಗೆ ಬೇಕಾದ ವಸ್ತು ಸಿಗದಿದ್ದರೆ, ನನ್ನಲ್ಲಿರುವ ನನ್ನ ವಸ್ತು ನಾಶವಾದಾಗ ಅಥವಾ ಬೇರೆಯವರ ಪಾಲಾದಾಗಲೋ ಶೋಕವುಂಟಾಗುತ್ತದೆ. ಹೀಗೆ ಶೋಕ ಮೋಹಗಳನ್ನು ಅನುಭವಿಸುತ್ತಿರುವುದು ನಿಜ ಎಂಬ ಬುದ್ಧಿಯೇ ಅಜ್ಞಾನ, ಇದೇ ಸಂಸಾರ. "ತಾನು ಯಾರು" ಎಂಬ ಎಚ್ಚರವಿರುವ ಬ್ರಹ್ಮಜ್ಞಾನಿಗೆ ತನಗಿಂತ ಬೇರೆಯಾದದ್ದು ಏನೂ ಇಲ್ಲ. ತೋರುತ್ತಿರುವ ಈ ಜಗತ್ತೆಲ್ಲವೂ ಸ್ವರೂಪದಿಂದ ನಾನೇ ಆಗಿದ್ದೇನೆ ಎಂಬ ದೃಢ ನಿಶ್ಚಯವಿರುತ್ತದೆ. ಹೇಗೆ ತೋರುತ್ತಿರುವ ಹಾವು ಹಗ್ಗಕ್ಕಿಂತ ಬೇರೆ ಇಲ್ಲವೋ ಹಾಗೆಯೇ ಇವನನ್ನು ಬಿಟ್ಟುಕೊಟ್ಟು ಬೇರೆ ಏನೂ ಇಲ್ಲ. ಅಂದರೆ ಇವನ ದೃಷ್ಟಿಯಲ್ಲಿ ನಾಮ ರೂಪ ಜಗತ್ತು ಸತ್ಯವಾಗಿಲ್ಲ. ಆದ್ದರಿಂದ ಇವನು ಪಡೆಯಬೇಕಾದ್ದೂ ಇಲ್ಲ, ಕಳೆದುಕೊಳ್ಳಬೇಕಾದದ್ದೂ ಇಲ್ಲ. ಅಂದ ಮೇಲೆ, ಶೋಕ-ಮೋಹಗಳಿಗೆ ಅವಕಾಶವೇ ಇಲ್ಲ.

ಇದು ಈಶಾವಾಸ್ಯ ಮಂತ್ರದ ಅಭಿಪ್ರಾಯವಾಗಿರುತ್ತದೆ:

ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ ॥

"ಯಾವನಲ್ಲಿ ಸಕಲ ಪ್ರಾಣಿಗಳೂ ತನ್ನ ಆತ್ಮನೇ ಆಗಿ ಬಿಡುವುವೋ ಅಂತಹ ತಾನೊಬ್ಬನೇ ಎಂದು ತಿಳಿದುಕೊಂಡಿರುವ ಜ್ಞಾನಿಗೆ ಮೋಹವು ಎಲ್ಲಿಯದು? ಶೋಕವು ಎಲ್ಲಿಯದು ?"

ಅಯಮಾತ್ಮಾ ಹಿ ಬ್ರಹ್ಮೈವ ಸರ್ವಾತ್ಮಕತಯಾ ಸ್ಥಿತಃ ।
ಇತಿ ನಿರ್ಧಾರಿತಂ ಶ್ರುತ್ಯಾ ಬೃಹದಾರಣ್ಯ ಸಂಸ್ಥಯಾ ॥ ೩೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಾತ್ಮಕತಯಾ=ಎಲ್ಲರ ಆತ್ಮನೂ ಆಗಿ, **ಸ್ಥಿತಃ**=ಇರುವ, **ಅಯಂ**=ಈ. **ಆತ್ಮಾ ಹಿ**=ಆತ್ಮನೇ, **ಬ್ರಹ್ಮ ಏವ**=ಬ್ರಹ್ಮನೇ ಆಗಿರುತ್ತಾನೆ, **ಇತಿ**=ಹೀಗೆಂದು. **ಬೃಹದಾರಣ್ಯ ಸಂಸ್ಥಯಾ ಶ್ರುತ್ಯಾ**=ಬೃಹದಾರಣ್ಯ ಶ್ರುತಿಯಿಂದ, **ನಿರ್ಧಾರಿತಂ**=ನಿಶ್ಚಯಿಸಲ್ಪಟ್ಟಿದೆ.

ಎಲ್ಲರ ಆತ್ಮನಾಗಿಯೂ ಇರುವ ಈ ಆತ್ಮನೇ ಬ್ರಹ್ಮ ಆಗಿರುತ್ತಾನೆ ಎಂದು ಬೃಹದಾರಣ್ಯಕ ಶ್ರುತಿಯಿಂದ ನಿಶ್ಚಯಿಸಲ್ಪಟ್ಟಿದೆ.

ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ಜ್ಞಾನಿಯು ಎಲ್ಲವೂ ಆತ್ಮನೇ ಎಂಬ ಸರ್ವಾತ್ಮ ಭಾವವನ್ನು ಪಡೆದಿರುತ್ತಾನೆ. ಶ್ರುತಿಯು ಬ್ರಹ್ಮವೇ ಎಲ್ಲವೂ ಆಗಿದೆ ಎಂದು ತಿಳಿಸುವುದ ರಿಂದ ಈ ಆತ್ಮನೇ ಬ್ರಹ್ಮ ಎಂದು ಸಿದ್ಧವಾಯಿತು. ಅಜ್ಞಾನ ಕಾಲದಲ್ಲಿ ನಾನು ಶೋಕ-ಮೋಹವುಳ್ಳ ಸಂಸಾರಿ ಎಂದುಕೊಂಡಿದ್ದ ಆತ್ಮನೇ ಜ್ಞಾನದಿಂದ ಅದ್ವೈತ ಬ್ರಹ್ಮ ಎಂದು ತಿಳಿಸುವುದೇ ಎಲ್ಲಾ ಶ್ರುತಿಗಳ ತಾತ್ಪರ್ಯ. ಈ ಶ್ಲೋಕದ ಅಭಿಪ್ರಾಯಕ್ಕೆ ಬೃಹದಾರಣ್ಯಕದ ಈ ಮಂತ್ರವು ಪ್ರಮಾಣವಾಗಿರುತ್ತದೆ:

"ಸವಾ ಅಯಮಾತ್ಮಾ ಬ್ರಹ್ಮ ವಿಜ್ಞಾನಮಯೋ, ಮನೋಮಯಃ ಪ್ರಾಣ ಮಯಃ ಚಕ್ಷುರ್ಮಯಃ ಶ್ರೋತ್ರಮಯಃ ಪೃಥಿವೀಮಯಃ, ಆಪೋಮಯ ವಾಯು ಮಯ ಆಕಾಶಮಯಃ ತೇಜೋಮಯಃ ಅತೇಜೋಮಯಃ ಕಾಮಮಯೋಽಕಾಮ ಮಯಃ ಕ್ರೋಧಮಯೋಽಕ್ರೋಧಮಯೋ ಧರ್ಮಮಯೋಽಧರ್ಮಮಯಃ ಸರ್ವ ಮಯಃ ||"

ಆತ್ಮನು ಬುದ್ಧಿ, ಮನಸ್ಸು. ಪ್ರಾಣ, ಇಂದ್ರಿಯಗಳು, ಪೃಥ್ವಿ, ನೀರು, ಅಗ್ನಿ, ವಾಯು, ಆಕಾಶ ಎಂಬ ಪಂಚಭೂತಗಳೂ, ಕಾಮ ಅಕಾಮ, ಕ್ರೋಧ ಅಕ್ರೋಧ, ಧರ್ಮ ಅಧರ್ಮ ಇತ್ಯಾದಿ ಗುಣಗಳುಳ್ಳ ಸಕಲ ಪ್ರಾಣಿಗಳೂ—ಈ ಎಲ್ಲಾ ಉಪಾಧಿ ಗಳಿಂದ ಆಯಾ ಸ್ವರೂಪವನ್ನು ಪಡೆದಂತೆ ತೋರುತ್ತಿರುವ ಆ ಈ ಆತ್ಮನೇ ನಿಜವಾಗಿ ಬ್ರಹ್ಮನು.

ಅನುಭೂತೋಽಪ್ಯಯಂ ಲೋಕೋ ವ್ಯವಹಾರಕ್ಷಮೋಽಪಿಸನ್ ।
ಅಸದ್ರೂಪೋ ಯಥಾ ಸ್ವಪ್ನ ಉತ್ತರಕ್ಷಣಬಾಧತಃ ॥ ೫೬ ॥

ಯಥಾ=ಹೇಗೆ, **ಸ್ವಪ್ನಃ**=ಕನಸು, **ಉತ್ತರಕ್ಷಣ**=ಎಚ್ಚರವಾದ ಕ್ಷಣ ದಲ್ಲಿಯೇ, **ಬಾಧತಃ**=ಇಲ್ಲವಾಗುತ್ತದೆಯೋ, (**ತಥಾ**=ಹಾಗೆಯೇ) **ಅಯಂ ಲೋಕಃ** = ಈ ಎಚ್ಚರ ಜಗತ್ತೂ, **ಅನುಭೂತಃ ಅಪಿ** = ಅನುಭವಿಸಲ್ಪಡು ತ್ತಿದ್ದಾಗ್ಯೂ, **ವ್ಯವಹಾರಕ್ಷಮಃ ಅಪಿಸನ್**=ವ್ಯವಹಾರಕ್ಕೆ ಯೋಗ್ಯವಾಗಿದ್ದರೂ ಕೂಡ, **ಅಸದ್ರೂಪ (ಏವ)** =ಅಸದ್ರೂಪವೇ ಆಗಿರುತ್ತದೆ.

ಹೇಗೆ ಎಚ್ಚರವಾದ ಕ್ಷಣದಲ್ಲಿಯೇ ಸ್ವಪ್ನವು ಇಲ್ಲವಾಗುತ್ತದೆಯೋ, ಹಾಗೆಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಲೋಕವೂ ಅನುಭವದಲ್ಲಿದ್ದು, ವ್ಯವಹಾರಕ್ಕೆ ಯೋಗ್ಯವಾಗಿದ್ದರೂ ಸಹ ಅಸತ್ಯೇ ಆಗಿದೆ.

ಸ್ವಪ್ನಕಾಲದಲ್ಲಿ ಸ್ವಪ್ನ ಜಗತ್ತು, ಅದರಲ್ಲಿನ ವ್ಯವಹಾರ, ವ್ಯವಹಾರದಿಂದಾಗುವ ಸುಖ-ದುಃಖಾದಿ ಅನುಭವಗಳು ನೂರಕ್ಕೆ ನೂರು ಸತ್ಯವಾಗಿದ್ದರೂ ಸಹ, ಎಚ್ಚರವಾದ ಕ್ಷಣದಲ್ಲಿಯೇ ಎಲ್ಲವೂ ಕೇವಲ ತೋರಿಕೆ ಮಾತ್ರ ಎಂಬ ಅನುಭವವನ್ನು ಎಲ್ಲರೂ ಒಪ್ಪುತ್ತಾರೆ. ಎಚ್ಚರವಾದ ಮೇಲೆ ಸ್ವಪ್ನ ಪ್ರಪಂಚದ ಕಣಮಾತ್ರವೂ ಉಳಿಯುವುದಿಲ್ಲ. ಆದ್ದರಿಂದ ತನ್ನ ಕಾಲದಲ್ಲಿ ಮಾತ್ರ ಇರುವ ಈ ಸ್ವಪ್ನ ಪ್ರಪಂಚವು ಅಸತ್ಯೇ ಆಗಿರುತ್ತದೆ. ಸ್ವಲ್ಪ ವಿವೇಕವುಳ್ಳ ಸಾಧಕನು ವಿಚಾರ ಮಾಡಿದ್ದೇ ಆದರೆ ತಿಳಿದುಬರುವುದೇನೆಂದರೆ—ಈ ಜಾಗ್ರತ ಜಗತ್ತಿನ ವ್ಯವಹಾರಗಳೂ, ವ್ಯವಹಾರಗಳಿಂದಾಗುವ ಸುಖ-ದುಃಖಾದಿ ಅನುಭವಗಳೂ, ತಮ್ಮ ಕಾಲದಲ್ಲಿ ಅತ್ಯಂತ ನಿಜವಾಗಿ ತೋರುತ್ತಿದ್ದರೂ ಸಹ ಅದು ಸ್ವಪ್ನದಲ್ಲಾಗಲೀ, ನಿದ್ದೆಯಲ್ಲಾಗಲೀ ಇಲ್ಲದೇ ಇರುವುದರಿಂದ, ಜಾಗ್ರತವೂ ಸಹ ಸ್ವಪ್ನದಂತೆಯೇ ಅಸತ್ಯೇ ಆಗಿರುತ್ತದೆ.

ಸ್ವಪ್ನೋ ಜಾಗರಣೇಽಲೀಕಃ ಸ್ವಪ್ನೇಽಪಿ ಜಾಗರೋ ನಹಿ ।
ದ್ವಯಮೇವ ಲಯೇ ನಾಸ್ತಿ ಲಯೋಽಪಿ ಹ್ಯುಭಯೋರ್ನ ಚ ॥

ಸ್ವಪ್ನಃ=ಕನಸು, **ಜಾಗರಣೇ**=ಎಚ್ಚರದಲ್ಲಿ, **ಅಲೀಕಃ**=ಇರುವುದಿಲ್ಲ, **ಸ್ವಪ್ನೇ**=ಕನಸಿನಲ್ಲಿ, **ಅಪಿ**=ಕೂಡ, **ಜಾಗರಃ**=ಎಚ್ಚರವು, **ನ ಹಿ**=ಇರುವುದಿಲ್ಲವಷ್ಟೆ. **ದ್ವಯಂ ಏವ**=ಇವೆರಡೂ ಕೂಡ, **ಲಯೇ**=ಗಾಢನಿದ್ರೆಯಲ್ಲಿನ **ಅಸ್ತಿ**=ಇರುವುದಿಲ್ಲ. **ಲಯಃ ಅಪಿ**=ಆ ನಿದ್ರೆಯೂ ಕೂಡ, **ಉಭಯೋಃ**=ಇನ್ನೆರಡರಲ್ಲಿ, **ನ ಚ ಹಿ**=ಇಲ್ಲವೇ ಇಲ್ಲವಷ್ಟೆ.

ಕನಸು ಎಚ್ಚರದಲ್ಲಿಲ್ಲ. ಕನಸಿನಲ್ಲಿ ಎಚ್ಚರವೂ ಇರುವುದಿಲ್ಲ. ಇವೆರಡೂ ತನಿ ನಿದ್ದೆಯಲ್ಲಿರುವುದಿಲ್ಲ, ಆ ನಿದ್ರೆಯಾದರೋ ಇವೆರಡರಲ್ಲಿ ಇರುವುದಿಲ್ಲ.

ಈ ಶ್ಲೋಕದಲ್ಲಿ, ಎಚ್ಚರ, ಕನಸು, ನಿದ್ದೆ, ಎಂಬ ಮೂರು ಅವಸ್ಥೆಗಳ ಜಿಜ್ಞಾಸೆಯನ್ನು ಸಾರ್ವತ್ರಿಕ ಅನುಭವದ ಆಧಾರದ ಮೇಲೆ ಮಾಡಿರುತ್ತಾರೆ. ಸ್ವಪ್ನವು ಎಚ್ಚೆತ್ತ ಕೂಡಲೆ ಕಾಣದೇ ಹೋಗುವದು. ಈ ಸ್ವಪ್ನ ಪ್ರಪಂಚವು ನಾವು ಎಚ್ಚರದಲ್ಲಿರುವಾಗ ಎಲ್ಲಿಯೂ ಇರುವುದೇ ಇಲ್ಲ ಎಂದು ಎಲ್ಲರಿಗೂ ಚೆನ್ನಾಗಿ ಗೊತ್ತು. ಹೀಗೆಯೇ ನಮ್ಮ ಜಾಗ್ರತ ಜಗತ್ತು ನಮ್ಮ ಕನಸಿನ ಪ್ರಪಂಚವನ್ನು ಪ್ರವೇಶಿಸಲಾರದು, ನಿದ್ದೆಯಲ್ಲಂತೂ ಇದು ಇರುವುದೇ ಇಲ್ಲ. ಹೀಗೆ ಎಚ್ಚರ ಪ್ರಪಂಚವು ತನ್ನ ಕಾಲದಲ್ಲಿ ಮಾತ್ರ ಇರುತ್ತದೆ ಎಂದು ಎಲ್ಲರ ಅನುಭವದಲ್ಲಿಯೂ ಇದೆ. ಆದರೂ ಅವಿಚಾರಿಗಳು ತಿಳಿಯುವುದೇನೆಂದರೆ —ನಮ್ಮ ಎಚ್ಚರ ಪ್ರಪಂಚವು ನಾವು ನಿದ್ರಿಸುತ್ತಿರುವಾಗಲೂ ತಾನು ಮೊದಲು ಇದ್ದಂತೆಯೇ ಇದ್ದು, ನಾವು ಎಚ್ಚೆತ್ತಾಗ ಅದೇ ಪ್ರಪಂಚಕ್ಕೆ ಹೊಕ್ಕು ವ್ಯವಹಾರ ಮಾಡುತ್ತೇವೆ ಎಂದು. ಆದರೆ ವೇದಾಂತವು ತಿಳಿಸುತ್ತದೆ.

Sri Vidyadhara Book Collection, Sringeri

CC-O. In Public Domain. Digitized by eGangotri

ಎಚ್ಚರ ಪ್ರಪಂಚವೆಂದರೆ ನಾವು ಎಚ್ಚರದಲ್ಲಿದ್ದಾಗ ನಾವು ಕಾಣುವ ಪ್ರಪಂಚ. ಆದ್ದರಿಂದ ನಾವು ಎಚ್ಚರದಲ್ಲಿಲ್ಲದೇ ಇದ್ದಾಗ ನಾವು ಕಾಣುವುದಕ್ಕೆ ಆಗದೇ ಇರುವ ಪ್ರಪಂಚವು ಇದೆ ಎಂದು ಹೇಳುವುದು ಅವಿವೇಕವೇ ಸರಿ. ಆದ್ದರಿಂದ ಈ ಎಚ್ಚರ ಪ್ರಪಂಚವು ತನ್ನ ಕಾಲವನ್ನು ಬಿಟ್ಟುಕೊಟ್ಟು ಬೇರೆ ಕಾಲದಲ್ಲಿ ಎಲ್ಲಿಯೂ ಒಂದು ಅಣುಮಾತ್ರವೂ ಇರುವುದಿಲ್ಲ. ಇದೇ ವೇದಾಂತದ ನಿರ್ಣಯ.

ಹೀಗೆಯೇ ಎಚ್ಚರ–ಕನಸು–ನಿದ್ದೆ ಎಂಬ ಮೂರು ಅವಸ್ಥೆಗಳೂ ತಮ್ಮ ತಮ್ಮ ಕಾಲದಲ್ಲಿ ಮಾತ್ರ ತೋರಿಹಾರುತ್ತಿವೆ. ಇದನ್ನು ತಿಳಿಯುತ್ತಿರುವ ನಮ್ಮ ಸ್ವರೂಪನಾದ ಆತ್ಮನು ಅವಸ್ಥೆಗಳಿಗಾಗಲೀ, ಅವುಗಳಿಗೆ ತೋರುವ ಪ್ರಪಂಚಗಳಿಗಾಗಲೀ ಸೇರದೆ, ಎಲ್ಲಕ್ಕೂ ಹೊರಚ್ಚಾಗಿ ಎಲ್ಲವನ್ನೂ ಬೆಳಗುವ ಸದಾ ಇರುವ ಪರಮಾರ್ಥ ಸ್ವರೂಪನೇ ಆಗಿರಬೇಕು, ಇಂತಹ ವಿಚಾರವು ಆತ್ಮನು ನಿಷ್ಪ್ರಪಂಚನು ಎಂಬ ಅನುಭವದಲ್ಲಿ ನಿಲ್ಲಿಸುತ್ತದೆ.

ತ್ರಯಮೇವಂ ಭವೇನ್ಮಿಥ್ಯಾ ಗುಣತ್ರಯವಿನಿರ್ಮಿತಮ್ ।
ತಸ್ಯ ದ್ರಷ್ಟಾ ಗುಣಾತೀತೋ ನಿತ್ಯೋ ಹ್ಯೇಕಶ್ಚಿದಾತ್ಮಕಃ ॥ ೫೮ ॥

ಏವಂ=ಹೀಗೆ, **ಗುಣತ್ರಯ ವಿನಿರ್ಮಿತಂ**=ಮೂರು ಗುಣಗಳಿಂದ ಉಂಟಾಗುವಂತಹ, **ತ್ರಯಂ**=ಈ ಮೂರು ಅವಸ್ಥೆಗಳು, **ಮಿಥ್ಯಾ ಭವೇತ್**=ಮಿಥ್ಯೆಯೇ ಆಗಿದೆ, **ಅಸದ್ರಷ್ಟಾ**=ಇದನ್ನು ನೋಡುವವನು, **ಗುಣಾತೀತಃ**=ಗುಣಗಳನ್ನು ಮೀರಿದವನಾಗಿಯೂ, **ನಿತ್ಯಃ**=ನಿತ್ಯನಾಗಿಯೂ, **ಏಕಃ**=ಒಬ್ಬನೇ ಆಗಿಯೂ **ಚಿದಾತ್ಮಕಃ**=ಚಿದ್ರೂಪನಾಗಿಯೂ, **ಹಿ**=ಆಗಿರಲೇಬೇಕು.

ಹೀಗೆ ಮೂರು ಗುಣಗಳಿಂದಲೂ ಉಂಟಾಗಿರುವ ಈ ಮೂರು ಅವಸ್ಥೆಗಳೂ ಮಿಥ್ಯೆಯೇ ಆಗಿರುತ್ತವೆ. ಇವುಗಳನ್ನು ನೋಡುವವನು ಗುಣಗಳನ್ನು ಮೀರಿದವನಾಗಿಯೂ, ನಿತ್ಯನಾಗಿಯೂ, ಒಬ್ಬನಾಗಿಯೂ, ಚಿದ್ರೂಪನಾಗಿಯೂ, ಆಗಿರಲೇಬೇಕು.

ಸತ್ವ ರಜಸ್ ತಮೋಗುಣಗಳ ತಾರತಮ್ಯದ ಹೊರತೋರುವಿಕೆಯಿಂದ ಮಾನವನು ಎಚ್ಚರ ಕನಸು ನಿದ್ದೆಗಳೆಂಬ ಮೂರು ಅವಸ್ಥೆಗಳನ್ನು ಅನುಭವಿಸುತ್ತಾನೆ. ಒಂದು ಅವಸ್ಥೆ ಇರುವಾಗ, ಉಳಿದೆರಡು ಅವಸ್ಥೆಗಳು ಎಲ್ಲಿಯೂ ಇಲ್ಲವೇ ಇಲ್ಲ ಎಂಬುದು ನಮಗೆ ಅನುಭವದಿಂದಲೇ ಗೊತ್ತು. ಆದ್ದರಿಂದ ಈ ಮೂರು ಅವಸ್ಥೆಗಳೂ ಆಯಾ ಕಾಲಕ್ಕೆ ಮಾತ್ರ ಕಟ್ಟು ಬಿದ್ದು ತೋರುವುದರಿಂದ ಮಿಥ್ಯೆಯೇ ಆಗಿದೆ. ಅದರೆ ಈ ಮಿಥ್ಯಾ ಅವಸ್ಥೆಗಳ ಇರುವಿಕೆ, ಇಲ್ಲದಿರುವಿಕೆ ಇವೆರಡನ್ನೂ ದೃಕ್ಕಾಗಿ ನೋಡುತ್ತಿರುವ ನಾನು ಮೂರು ಅವಸ್ಥೆಗಳಿಗಿಂತಲೂ ಅತೀತನಾಗಿರಲೇಬೇಕು, ಅಂದರೆ ಗುಣಾತೀತನಾಗಿರಲೇಬೇಕು.

ಆಯಾ ಕಾಲಕ್ಕೆ ಮಾತ್ರ ತೋರಿಕೊಂಡು ಮಾಯವಾಗುತ್ತಿರುವ ಆ ಮೂರೂ ಅವಸ್ಥೆಗಳನ್ನೂ ನೋಡುತ್ತಿರುವ ಆತ್ಮನು ಎಲ್ಲಾ ಕಾಲದಲ್ಲಿಯೂ ಇದ್ದೇ ಇರಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ ಕಾಲದ ಕಟ್ಟೇ ಇಲ್ಲದಿರುವ ಆತ್ಮನು ನಿತ್ಯನೆಂದು ಸಿದ್ಧವಾಯಿತು.

ಜಾಗ್ರತ್ ಸ್ವಪ್ನ ಪ್ರಪಂಚಗಳಿಗೆ ದೇಶದ ಕಟ್ಟು ಇದೆ. ಇವುಗಳನ್ನು ನೋಡು ವವನು ಅವುಗಳಿಂದ ಅಸಂಗನಾಗಿರಬೇಕು. ಹೀಗೆ ಆತ್ಮನಿಗೆ ಕಾಲದ ಕಟ್ಟಾಗಲೀ ದೇಶದ ಕಟ್ಟಾಗಲೀ ಇಲ್ಲ. ಕಾಲ–ದೇಶಗಳಿಂದ ಪರಿಚ್ಛಿನ್ನವಾದ ವಸ್ತುಗಳನ್ನು ಒಂದು, ಎರಡು, ಇತ್ಯಾದಿ ಎಣಿಸಬಹುದು. ಕಾಲಾತೀತನೂ, ದೇಶಾತೀತನೂ ಆದ ಆತ್ಮನು ಸಂಖ್ಯಾ ತೀತನು ಆಗಿರಲೇಬೇಕು. ಆದ್ದರಿಂದ ಆತ್ಮನು ಏಕನೂ ಅದ್ವಿತೀಯನೂ ಆಗಿರುತ್ತಾನೆ.

ಇಷ್ಟೇ ಅಲ್ಲದೆ ಆತ್ಮನು ತಾನು ಮೂರು ಅವಸ್ಥೆಗಳನ್ನೂ ನೋಡುತ್ತಿರುವುದೂ ಅಲ್ಲದೆ, ತನ್ನನ್ನು ಅರಿಯಲಿಕ್ಕೆ ಮತ್ತೇನನ್ನೂ ಅವಲಂಬಿಸದೇ ಇರುವುದರಿಂದ ಅವನು ಚೈತನ್ಯ ಸ್ವರೂಪನೇ ಆಗಿರಬೇಕು, ಅಂದರೆ ಚಿದ್ರೂಪನು.

ಹೀಗೆ ಆತ್ಮನಲ್ಲಿ ಅನುಭವ ಮತ್ತು ಯುಕ್ತಿಯಿಂದ ಕಂಡು ಬರುವ ಸಾಕ್ಷಿ, ಗುಣಾ ತೀತ, ನಿತ್ಯ, ಏಕಃ, ಚಿದ್ರೂಪಃ ಈ ಲಕ್ಷಣಗಳು ಬ್ರಹ್ಮನ ಲಕ್ಷಣಗಳೆಂದು ಶ್ರುತಿಯು ತಿಳಿಸುವುದರಿಂದ, ಆತ್ಮನು ಅಸಂಸಾರಿಯಾದ ಬ್ರಹ್ಮವೇ ಎಂದು ನಿಶ್ಚಯವಾಗುತ್ತದೆ.

ನೀನು ಅಸಂಸಾರಿಯಾದ ಬ್ರಹ್ಮವೇ ಎಂದು ಶ್ರುತಿಯು ಸಾರುತ್ತಿದ್ದಾಗ್ಯೂ ಸಹ ನಾವು ಜೀವತ್ವ ಅಂದರೆ ಸಂಸಾರವನ್ನು ಅನುಭವಿಸುತ್ತಿದ್ದೇವಲ್ಲ ಎಂಬ ಪ್ರಶ್ನೆಗೆ ಪರಿ ಹಾರವನ್ನು ತಿಳಿಸುತ್ತಿದ್ದಾರೆ.

ಯದ್ವನ್ಮೃದಿ ಘಟಭ್ರಾಂತಿಂ ಶುಕ್ತೌ ವಾ ರಜತಸ್ಥಿತಿಮ್ ।
ತದ್ವದ್ಬ್ರಹ್ಮಣಿ ಜೀವತ್ವಂ ವೀಕ್ಷ್ಯಮಾಣೇ ನ ಪಶ್ಯತಿ ॥ ೫೯ ॥

ಮೃದಿ=ಮಣ್ಣಿನಲ್ಲಿ, **ಘಟಭ್ರಾಂತಿಂ**=ಮಡಕೆಯೆಂಬ ಭ್ರಮೆಯನ್ನು, **ವಾ**=ಅಥವಾ, **ಶುಕ್ತೌ**=ಕಪ್ಪೆಯ ಚಿಪ್ಪಿನಲ್ಲಿ, **ರಜತಸ್ಥಿತಿಂ**=ಬೆಳ್ಳಿಯ ಇರುವಿಕೆಯನ್ನು **ವೀಕ್ಷ್ಯಮಾಣೇ**=ವಿವೇಕದಿಂದ ವಿಚಾರಿಸಿದ್ದೇ ಆದರೆ, **ಯದ್ವತ್**=ಹೇಗೆ, **ನ ಪಶ್ಯತಿ**=ನೋಡುವುದಿಲ್ಲವೋ, **ತದ್ವತ್**=ಹಾಗೆಯೇ, **ಬ್ರಹ್ಮಣಿ**=ಬ್ರಹ್ಮದಲ್ಲಿ, **ಜೀವತ್ವಂ**=ಜೀವತ್ವವನ್ನು, **ನ ಪಶ್ಯತಿ**=ಕಾಣುವುದಿಲ್ಲ.

ಮಣ್ಣಿನಲ್ಲಿ ಮಡಕೆ ಎಂಬ ಭ್ರಮೆಯನ್ನು ಅಥವಾ ಕಪ್ಪೆಯ ಚಿಪ್ಪಿನಲ್ಲಿ ಬೆಳ್ಳಿಯ ಇರುವಿಕೆಯನ್ನು ವಿವೇಕದಿಂದ ವಿಚಾರಿಸಿದ್ದೇ ಆದರೆ ಹೇಗೆ ನೋಡುವುದಿಲ್ಲವೋ ಹಾಗೆಯೇ ಬ್ರಹ್ಮದಲ್ಲಿ ಜೀವತ್ವವನ್ನು ಕಾಣುವುದಿಲ್ಲ.

ಯಥಾ ಮೃದಿ ಘಟೋ ನಾಮ ಕನಕೇ ಕುಣ್ಡಲಾಭಿದಾ ।
ಶುಕ್ತೌ ಹಿ ರಜತ್ ಖ್ಯಾತಿರ್ಜೀವ ಶಬ್ದಸ್ತಥಾ ಪರೇ ॥ ೬೦ ॥

ಮೃದಿ=ಮಣ್ಣಿನಲ್ಲಿ, **ಘಟೋನಾಮ**=ಗಡಿಗೆಯೆಂಬ ಹೆಸರು, **ಕನಕೇ**=ಚಿನ್ನದಲ್ಲಿ, **ಕುಂಡಲ**... **ಅಭಿದಾ**=ಹೆಸರು, **ಶುಕ್ತೌ**=ಕಪ್ಪೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಪ್ಪಿನಲ್ಲಿ, **ರಜತಾ**=ಬೆಳ್ಳಿ ಎಂಬ, **ಖ್ಯಾತಿಃ**=ಹೆಸರು, **ಯಥಾ**=ಹೇಗೆ (ಉಂಟಾಗಿರುವುದೋ) **ತಥಾ**=ಹಾಗೆಯೇ, **ಪರೇ**=ಪರಬ್ರಹ್ಮನಲ್ಲಿ, **ಜೀವ ಶಬ್ದಃ**=ಜೀವನೆಂಬ ಹೆಸರು (ಉಂಟಾಗಿದೆ).

(ನಾಮ, ಅಭಿದಾ, ಖ್ಯಾತಿ, ಶಬ್ದ ಎಂಬ ಪರ್ಯಾಯ ಪದಗಳ ಅರ್ಥವು "ಹೆಸರು" ಎಂದು)

ಮಣ್ಣಿನಲ್ಲಿ ಮಡಕೆ ಎಂಬ ಹೆಸರು, ಚಿನ್ನದಲ್ಲಿ ಕುಂಡಲವೆಂಬ ಹೆಸರು, ಕಪ್ಪೆಯ ಚಿಪ್ಪಿನಲ್ಲಿ ಬೆಳ್ಳಿ ಎಂಬ ಹೆಸರು, ಹೇಗೆ ಕಲ್ಪಿತವಾಗಿದೆಯೋ ಹಾಗೆಯೇ ಪರಬ್ರಹ್ಮದಲ್ಲಿ ಜೀವವೆಂಬ ಹೆಸರು ಕಲ್ಪಿತವಾಗಿದೆ.

ಎಲ್ಲಾ ಅವಸ್ಥೆಗಳಲ್ಲಿ ಪರಿಹರಿಸುತ್ತಿರುವ ಜೀವನು ಸ್ವರೂಪದಿಂದ ಬ್ರಹ್ಮನೇ ಆಗಿದ್ದಾನೆ ಎಂಬುದು ಈ ಮುಂಚಿನ ಶ್ಲೋಕಗಳಲ್ಲಿ ಪ್ರಸಿದ್ಧವಾದಂತಾಯಿತು. ಹೀಗಿದ್ದ ಪಕ್ಷದಲ್ಲಿ ವ್ಯವಹಾರಕ್ಕೆ ಒಳಪಟ್ಟಿರುವ ಕರ್ಮ, ಕಾರ್ಯಕ್ಷೇತ್ರ ಮತ್ತು ಅಲ್ಲಿಯ ಅನುಭವ ಇತ್ಯಾದಿಗಳಿಗೆ ಏನು ಆಧಾರ? ಅಥವಾ ನಿರಾಧಾರವಾದದ್ದೇ ? ಎನ್ನುವ ಸಮಸ್ಯೆ ಬರಬಹುದು. ಇದನ್ನು ಪರಿಹರಿಸಲು ೫೯,೬೦ ಶ್ಲೋಕಗಳು ಸಹಾಯ ಮಾಡುತ್ತವೆ. ಲೋಕದಲ್ಲಿ ಸರ್ವೇ ಸಾಮಾನ್ಯರ ಅನುಭವದಲ್ಲಿ ಸೂರ್ಯನ ಉದಯ ಅಸ್ತಮಾನಗಳು ನಿಜತ್ವದಿಂದಲೇ ಕೂಡಿದೆ. ಆದರೂ ವಿವೇಕಿಗಳ ತಿಳಿವಳಿಕೆಯಲ್ಲಿ ಸೂರ್ಯನಿಗೆ ಉದಯ ಅಸ್ತಮಾನಗಳಿಲ್ಲ. ಪೃಥ್ವಿಯ ಚಲಿಸುವಿಕೆಯಲ್ಲಿ ಉದಯಾಸ್ತಮಾನಗಳು ಇದ್ದಂತೆ ತೋರುತ್ತವೆ. ಹಾಗೆಯೇ ಮಡಕೆಯಲ್ಲಿಯ ಮಣ್ಣು ಎಂಬುದೊಂದೇ ನಿಜವಾಗಿದ್ದರೂ ಕೂಡ ಮಡಕೆಯ ನಾಮ ರೂಪಗಳು ಕಲ್ಪಿಸಲ್ಪಟ್ಟಿದೆ. ಕಪ್ಪೆಯ ಚಿಪ್ಪಿನಲ್ಲಿ ಚಿಪ್ಪು ಒಂದೇ ಸತ್ಯವಾಗಿದ್ದರೂ ಕೂಡ ಬೆಳ್ಳಿಯು ಕಲ್ಪಿಸಲ್ಪಟ್ಟಿದೆ. ಹೇಗೋ ಹಾಗೆಯೇ, ಜಿಜ್ಞಾಸದ ಕೊರತೆಯು ಕಾರಣದಿಂದಾಗಿ ಬ್ರಹ್ಮದಲ್ಲಿ ಜೀವತ್ವವು ಕಲ್ಪಿಸಲ್ಪಟ್ಟಿದೆ. ಇದು ಪ್ರಮಾಣ ಬದ್ಧವಾದ ಸದ್ಗುರುವಿನ ಶ್ರುತಿ ಉಪದೇಶ ಮತ್ತು ತರ್ಕದ ಮಾರ್ಗದರ್ಶನದಲ್ಲಿ ಬ್ರಹ್ಮವೇ ಎಂದು ನಿಶ್ಚಯವಾದಾಗ ಜೀವತ್ವದ ಭಾವವು ತನ್ನ ಸತ್ಯತೆಯನ್ನು ಕಳೆದುಕೊಳ್ಳುತ್ತದೆ.

ಯಥೈವ ವ್ಯೋಮ್ನಿ ನೀಲತ್ವಂ ಯಥಾ ನೀರಂ ಮರುಸ್ಥಲೇ ।
ಪುರುಷತ್ವಂ ಯಥಾ ಸ್ಥಾಣೌ ತದ್ವದ್ವಿಶ್ವಂ ಚಿದಾತ್ಮನಿ ॥ ೬೦ ॥

ಯಥಾ=ಹೇಗೆ, **ವ್ಯೋಮ್ನಿ**=ಆಕಾಶದಲ್ಲಿ, **ನೀಲತ್ವಂ**=ನೀಲಿಯ ಬಣ್ಣವು (ತೋರುವುದೋ) **ಯಥಾ**=ಹೇಗೆ, **ಮರುಸ್ಥಲೇ**=ಮರುಭೂಮಿಯಲ್ಲಿ, **ನೀರಂ**=ನೀರು, (ತೋರುವುದೋ), **ಯಥಾ**=ಹೇಗೆ, **ಸ್ಥಾಣೌ**=ಮೋಟುಮರದಲ್ಲಿ, **ಪುರುಷತ್ವಂ**=ಮನುಷ್ಯನು ಇರುವ ಹಾಗೆ ತೋರುವುದೋ, **ತದ್ವತ್**=ಹಾಗೆಯೇ, **ಚಿದಾತ್ಮನಿ ಏವ**=ಚಿತ್ಸ್ವರೂಪನಾದ ಆತ್ಮನಲ್ಲಿಯೇ, **ವಿಶ್ವಂ**=ಈ ಜಗತ್ತು (ತೋರುತ್ತಿರುವುದು)

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಗೆ ಆಕಾಶದಲ್ಲಿ ನೀಲಿಯ ಬಣ್ಣವು ತೋರುವುದೋ, ಹೇಗೆ ಮರುಭೂಮಿಯಲ್ಲಿ ನೀರು ತೋರುವುದೋ. ಹೇಗೆ ಮೋಟುಮರದಲ್ಲಿ ಮನುಷ್ಯನು ಇರುವ ಹಾಗೆ ತೋರುವುದೋ ಹಾಗೆಯೇ ಚಿತ್ ಸ್ವರೂಪನಾದ ಆತ್ಮನಲ್ಲಿಯೇ ಜಗತ್ತು ತೋರುತ್ತಿರುವುದು.

ಯಥೈವ ಶೂನ್ಯೇ ವೇತಾಲೋ ಗನ್ಧರ್ವಾಣಾ ಪುರಂ ಯಥಾ ।
ಯಥಾಕಾಶೇ ದ್ವಿಚಂದ್ರತ್ವಂ ತದ್ವತ್ಸತ್ಯೇ ಜಗತ್ ಸ್ಥಿತಿಃ ॥ ೬೨ ॥

ಯಥಾ=ಹೇಗೆ, **ಶೂನ್ಯೇ**=ಏನೂ ಇಲ್ಲದ ಸ್ಥಳದಲ್ಲಿ, **ವೇತಾಲಃ**=ಬೇತಾಳನು (ತೋರುವಂತೆಯೂ) **ಯಥಾ**=ಹೇಗೆ, **ಗನ್ಧರ್ವಾಣಾಂ ಪುರಂ**=ಗನ್ಧರ್ವನಗರವು ಕಾಣುತ್ತದೆಯೋ, **ಯಥಾ**=ಹೇಗೆ, **ಆಕಾಶೇ**=ಆಕಾಶದಲ್ಲಿ, **ದ್ವಿಚಂದ್ರತ್ವಂ**=ಇಬ್ಬರು ಚಂದ್ರರು ಕಾಣಿಸಿಕೊಳ್ಳುತ್ತಾರೆಯೋ, **ತದ್ವತ್**=ಹಾಗೆಯೇ, **ಸತ್ಯೇ**=ಸತ್ಸ್ವರೂಪನಾದ ಆತ್ಮನಲ್ಲಿಯೇ, **ಜಗತ್**=ಈ ಜಗತ್ತು, **ಸ್ಥಿತಿಃ**=ತನ್ನ ಇರುವಿಕೆಯನ್ನು ಪಡೆದಿದೆ.

ಯಾವ ಇರುವಿಕೆಯೂ ಇಲ್ಲದಿರುವಲ್ಲಿ, ಬೇತಾಳವು ತೋರುವಂತೆಯೂ, ಆಕಾಶದಲ್ಲಿ ಗಂಧರ್ವ ನಗರವನ್ನು ಕಾಣುವಂತೆಯೂ, ಆಕಾಶದಲ್ಲಿ ನಿಜವಾಗಿ ಒಬ್ಬನೇ ಚಂದ್ರನಿದ್ದರೂ ಇಬ್ಬರು ಚಂದ್ರರು ಇರುವಂತೆಯೂ, ಸತ್ಸ್ವರೂಪನಾದ ಆತ್ಮನಲ್ಲಿಯೇ ಈ ಜಗತ್ತೆಲ್ಲವೂ ತನ್ನ ಇರುವಿಕೆಯನ್ನು ಪಡೆದಿದೆ.

ಯಥಾ ತರಂಗಕಲ್ಲೋಲೈರ್ಜಲಮೇವ ಸ್ಫುರತ್ಯಲಮ್ ।
ಪಾತ್ರರೂಪೇಣ ತಾಮ್ರಂ ಹಿ ಬ್ರಹ್ಮಾಂಡೌಘೈಸ್ತಥಾತ್ಮತಾ ॥ ೬೩ ॥

ಯಥಾ=ಹೇಗೆ, **ಜಲಮೇವ**=ನೀರೊಂದೇ, **ತರಂಗ**=ತೆರೆಯೆಂದೂ, **ಕಲ್ಲೋಲೈಃ**=ಅಲೆಗಳೆಂದೂ, **ತಾಮ್ರಂ ಹಿ**=ತಾಮ್ರ ಒಂದೇ, **ಪಾತ್ರರೂಪೇಣ**=ಪಾತ್ರೆಯ ರೂಪವಾಗಿ, **ಸ್ಫುರತಿ ಅಲಂ**=ಕಾಣಿಸುತ್ತಿರುವುದಷ್ಟೆ, **ತಥಾ**=ಹಾಗೆಯೇ, **ಆತ್ಮತಾ**=ಆತ್ಮ ಸ್ವರೂಪ ಒಂದೇ, **ಬ್ರಹ್ಮಾಂಡೋಘೈಃ**=ಬ್ರಹ್ಮಾಂಡ ಸಮೂಹವಾಗಿ, (ತೋರಿಕೊಳ್ಳುತ್ತಿರುವುದು.)

ನೀರೊಂದೇ ತೆರೆಗಳೆಂದೂ, ಅಲೆಗಳೆಂದೂ ಹೇಗೆ ಕಾಣಿಸಿಕೊಳ್ಳುವುದೋ, ತಾಮ್ರ ಒಂದೇ ಬೇರೆ ಬೇರೆಯ ರೂಪದ ಪಾತ್ರೆಗಳಾಗಿ ಕಾಣಿಸಿಕೊಳ್ಳುವುದೋ ಹಾಗೆಯೇ ಆತ್ಮಸ್ವರೂಪ ಒಂದೇ ಬ್ರಹ್ಮಾಂಡ ಸಮೂಹವಾಗಿ ತೋರಿಕೊಳ್ಳುತ್ತಿರುವುದು.

೬೧, ೬೨, ೬೩ ನೇ ಶ್ಲೋಕಗಳಲ್ಲಿ ದೃಷ್ಟಾಂತಗಳ ಮೂಲಕ ಜಗತ್ತಿನ ತೋರುವಿಕೆಗೆ ಭ್ರಾಂತಿಯೇ ಕಾರಣವೆಂದು ತಿಳಿಸುತ್ತಿದ್ದಾರೆ.

ಆಕಾಶದಲ್ಲಿ ನಿಜವಾಗಿ ಯಾವ ಬಣ್ಣವೂ ಇಲ್ಲದೇ ಇದ್ದರೂ, ಹುಡುಗರಿಗೆ ತೋರುವಂತೆಯೇ ದೊಡ್ಡವರಿಗೂ ಸಹ ನೀಲಿ ಬಣ್ಣವು ತೋರುತ್ತದೆ. ವಿವೇಕ

Sri Vidyabharathi Book Centre, Sringeri

CC-O. In Public Domain. Digitized by eGangotri
ಉಳ್ಳವನು ಆಕಾಶದಲ್ಲಿ ತೋರುವ ನೀಲಿ ಬಣ್ಣವು ಕೇವಲ ಭ್ರಾಂತಿ ಎಂದು ಗುರುತಿಸುತ್ತಾನೆ. ಎಲ್ಲೆಲ್ಲೂ ಮರಳಿನಿಂದಲೇ ತುಂಬಿರುವ ಮರುಭೂಮಿಯಲ್ಲಿ ಪ್ರಯಾಣಿಕನೊಬ್ಬನು ನೀರಿನ ಹೊಂಡ ಒಂದನ್ನು ನೋಡಿ, ಆ ನೀರನ್ನು ಕುಡಿಯಲು ಅದರ ಕಡೆಗೆ ಓಡಿ ಪ್ರಾಣವನ್ನೂ ಕಳೆದುಕೊಳ್ಳುವ ಪ್ರಸಂಗವಿರುತ್ತದೆ. ಅಲ್ಲಿ ತೋರುತ್ತಿದ್ದ ನೀರು ಕೇವಲ ಭ್ರಾಂತಿ. ಹೀಗೆ ಇಲ್ಲದೇ ಇರುವ ನೀರನ್ನು ಇದೆ ಎಂದು ತೋರಿಸಿ ನಂಬಿಸುವುದೇ ಭ್ರಾಂತಿಯ ಕೆಲಸ. ಇರುವುದು ಒಂದೇ ಮೋಟುಮರವಾದರೂ ಅದು ಕಳ್ಳನಿಗೆ ಪೋಲೀಸಿನವನಂತೆಯೂ, ಪೋಲೀಸಿನವನಿಗೆ ಕಳ್ಳನಂತೆಯೂ, ಹೀಗೆ ನಾನಾ ರೀತಿಯಾಗಿ ಜನರಿಗೆ ಅವರವರ ಮನಸ್ಸಿಗೆ ಅನುಗುಣವಾಗಿ ಆಯಾ ಆಕಾರವನ್ನು ಪಡೆದು ತೋರುತ್ತದೆ. ಇಷ್ಟೇ ಅಲ್ಲ, ಇದು ಕೇವಲ ತೋರುವಿಕೆ ಎಂಬ ಅರಿವಿಲ್ಲದ ಅವಿವೇಕಿಯು ತನ್ನ ಕಲ್ಪನೆಗಳಿಗೆ ಅನುಗುಣವಾಗಿ ಕರ್ಮದಲ್ಲಿ ತೊಡಗುತ್ತಾನೆ. ಹೀಗೆ ಭ್ರಾಂತಿಯಿಂದ ತೋರುವುದೆಲ್ಲವೂ ಭ್ರಾಂತಿಯ ಕಾಲದಲ್ಲಿ ಅತ್ಯಂತ ನಿಜವಾಗಿದ್ದು, ಅದು ಇಲ್ಲವೆಂಬ ವಿವೇಕವೇ ಹುಟ್ಟುವುದಿಲ್ಲ. ಇದೇ ನಮ್ಮ ಸಂಸಾರಕ್ಕೆ ಕಾರಣವಾಗಿದೆ. ಆದ್ದರಿಂದ ವೇದಾಂತವು ತಿಳಿಸುತ್ತಿರುವುದೇನೆಂದರೆ, ಆತ್ಮ ಒಂದೇ ಸತ್ಯ. ಈ ಬ್ರಹ್ಮಾಂಡ ಸಮೂಹ ಅಂದರೆ ಸೃಷ್ಟಿ ಎಲ್ಲವೂ ಆತ್ಮಸ್ವರೂಪವನ್ನೇ ಆಧಾರವಾಗಿಟ್ಟುಕೊಂಡು ಆತ್ಮನಿಂದಲೇ ವ್ಯಾಪ್ತವಾಗಿ ವಿಧವಿಧವಾದ ನಾಮ, ರೂಪಗಳು ಅವುಗಳನ್ನು ಅನುಸರಿಸಿಕೊಂಡು ಮನೋವೃತ್ತಿಗಳು, ಮನೋವೃತ್ತಿಗಳಿಗೆ ಅನುಗುಣವಾದ ನಾನಾ ಕಾರ್ಯಗಳೂ ತೋರುತ್ತಿವೆ. ಇದನ್ನು ಗುರುತಿಸುವವನೇ ವಿವೇಕಿ.

ಘಟನಾಮ್ನಾ ಯಥಾ ಪೃಥ್ವೀ ಪಟನಾಮ್ನಾ ಹಿ ತನ್ತವಃ ।
ಜಗನ್ನಾಮ್ನಾ ಚಿದಾಭಾತಿ ಜ್ಞೇಯಂ ತತ್ತ ಭಾವತಃ ॥ ೬೪ ॥

ಘಟನಾಮ್ನಾ=ಮಡಕೆಯೆಂಬ ಹೆಸರಿನಿಂದ, **ಪೃಥ್ವೀ**=ಮಣ್ಣೂ, **ಪಟನಾಮ್ನಾ**=ಬಟ್ಟೆ ಎಂಬ ಹೆಸರಿನಿಂದ, **ತನ್ತವಃ**=ದಾರಗಳು, **ಯಥಾ**=ಹೇಗೆ, (**ಆಭಾತಿ**=ತೋರುತ್ತದೆಯೋ). **ತಥಾ**= ಹಾಗೆಯೇ, **ಜಗನ್ನಾಮ್ನಾ**=ಜಗತ್ತೆಂಬ ಹೆಸರಿನಿಂದ, **ಚಿತ್**=ಚೈತನ್ಯ ಸ್ವರೂಪವು, **ಆಭಾತಿ ಹಿ**=ತೋರುತ್ತಿರುವುದಷ್ಟೆ, **ತತ್**=ಆಯಾ ತೋರುವಿಕೆಯ ವಸ್ತುವು, **ಅಭಾವತಃ**=ಇಲ್ಲವೆಂದು ತಿಳಿದಿರುವುದರ ಮೂಲಕ, **ತತ್**=ಅದರ ಸ್ವರೂಪವನ್ನು, **ಜ್ಞೇಯಂ**=ತಿಳಿಯಬೇಕು.

ಮಡಕೆ ಎಂಬ ಹೆಸರಿನಿಂದ ಮಣ್ಣೂ, ಬಟ್ಟೆ ಎಂಬ ಹೆಸರಿನಿಂದ ದಾರಗಳೂ, ಹೇಗೆ ತೋರುತ್ತಿರುವುವೋ, ಹಾಗೆಯೇ ಜಗತ್ತೆಂಬ ಹೆಸರಿನಿಂದ ಚೈತನ್ಯ ಸ್ವರೂಪವು ತೋರುತ್ತಿರುವುದಷ್ಟೇ. ಆಯಾ ತೋರಿಕೆಯ ವಸ್ತುವು ಇಲ್ಲವೆಂದು ತಿಳಿಯುವುದರ ಮೂಲಕ, ಆಯಾ ವಸ್ತುವಿನ ಸ್ವರೂಪವನ್ನು ತಿಳಿಯಬೇಕು.

ಮಡಕೆಯನ್ನು ಮಣ್ಣಿನಿಂದ ಮಾಡುತ್ತಾರೆ. ಆ ಮಡಕೆಯು ವ್ಯವಹಾರದಲ್ಲಿ ಉಪಯೋಗಕ್ಕೆ ಬರುತ್ತದೆ. ಮಣ್ಣು ಮಣ್ಣು ಮಾತ್ರವಾಗಿದ್ದಾಗ ನಮಗೆ ಉಪ
Sri Vidyabharathi Book Centre, Sringeri

CC-O. In Public Domain. Digitized by eGangotri
ಯೋಗವಿಲ್ಲ. ಮಡಕೆ ಒಡೆದು ಬರೀ ಮಣ್ಣೇ ಆದಾಗ, ಆಗಲೂ ನಮಗೆ ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ಮಡಕೆಯ ಆಕಾರ ಹಾಗೂ ಹೆಸರನ್ನು ಪಡೆದಿರುವ ಮಣ್ಣು ಆ ಹೆಸರು ಆಕಾರ ಇರುವವರೆಗೂ ವ್ಯವಹಾರಕ್ಕೆ ಯೋಗ್ಯವಾಗಿರುತ್ತದೆ. ನಾವು ವ್ಯವಹಾರ ಮಾಡುತ್ತಿರುವಾಗಲೂ, ಮಡಕೆಯು ಮಣ್ಣೇ ಆಗಿರುತ್ತದೆ. ಏಕೆಂದರೆ ಮಣ್ಣನ್ನು ಬಿಟ್ಟುಕೊಟ್ಟು ಮಡಕೆಯು ಇರಲಾರದು. ಆದ್ದರಿಂದ ಈ ವಿವೇಕ ವಿಚಾರ ದಲ್ಲಿ ತಿಳಿಯುವುದೇನೆಂದರೆ, ಇರುವುದೆಲ್ಲಾ ಮಣ್ಣೊಂದೇ. ಅದು ಮಡಕೆ ಎಂಬ ಆಕಾರ, ಹೆಸರನ್ನು ಪಡೆದು ತೋರಿದಾಗ ವ್ಯವಹಾರಕ್ಕೆ ಯೋಗ್ಯವಾಯಿತು. ಹೀಗೆಯೇ ದಾರ ಗಳಿಂದಲೇ ಹಾಸು ಹೊಕ್ಕಾಗಿ ಬಟ್ಟೆ ಎಂಬ ಆಕಾರ ಹೆಸರನ್ನು ಪಡೆದ ಬಟ್ಟೆಯು ದಾರ ವನ್ನು ಬಿಟ್ಟುಕೊಟ್ಟು ಇರಲಾರದು. ಆದ್ದರಿಂದ ದಾರವೇ ಬಟ್ಟೆ ಎಂಬ ಆಕಾರ, ಹೆಸರನ್ನು ಪಡೆದು ತೋರಿದಾಗ ವ್ಯಾವಹಾರಿಕ ನಿಜತ್ವವನ್ನು ಪಡೆಯಿತು.

ಇದೇ ರೀತಿಯಾದ ಜಿಜ್ಞಾಸೆಯಿಂದ ತಿಳಿದು ಬರುವುದೇನೆಂದರೆ, ಇರುವುದೆಲ್ಲಾ ಚಿತ್ಸ್ವರೂಪನಾದ ಬ್ರಹ್ಮ ಒಂದೇ ಆಗಿದ್ದರೂ ಅದು ಜಗತ್ತೆಂಬ ಆಕಾರವನ್ನೂ, ಹೆಸರನ್ನೂ ಪಡೆದು ವ್ಯವಹಾರಕ್ಕೆ ಯೋಗ್ಯವಾಯಿತು. ಈ ಜಾಗ್ರತ್ ಪ್ರಪಂಚವು ತನ್ನ ಕಾಲದಲ್ಲಿ ಮಾತ್ರ ಇದ್ದು, ಕನಸು ನಿದ್ದೆಗಳಲ್ಲಿ ಇರುವುದೇ ಇಲ್ಲವೆಂಬುದು ಸಾರ್ವತ್ರಿಕ ಅನುಭವವಾಗಿದೆ. ಜಗತ್ತು ವ್ಯವಹಾರ ಸತ್ಯವಾಗಿದ್ದರೂ ಅದು ಕೇವಲ ತೋರುವಿಕೆ ಮಾತ್ರ ಎಂಬ ವಿವೇಕದಲ್ಲಿ ಚಿತ್ಸ್ವರೂಪವನ್ನು ಗುರುತಿಸಬೇಕು.

ಸರ್ವೋಽಪಿ ವ್ಯವಹಾರಸ್ತು ಬ್ರಹ್ಮಣಾ ಕ್ರಿಯತೇ ಜನೈಃ ॥
ಅಜ್ಞಾನಾನ್ನ ವಿಜಾನಂತಿ ಮೃದೇವ ಹಿ ಘಟಾದಿಕಮ್ ॥ ೬೫ ॥

ಜನೈಃ=ಜನರಿಂದ, **ಸರ್ವ**=ಎಲ್ಲಾ, **ವ್ಯವಹಾರಃ ಅಪಿ**=ವ್ಯವಹಾರವೂ ಕೂಡ, **ಬ್ರಹ್ಮಣಾ**=ಬ್ರಹ್ಮನನ್ನೇ ಬಳಸಿಕೊಂಡು, **ಕ್ರಿಯತೇ**=ಮಾಡಲ್ಪಡುತ್ತದೆ. **ತಂ**=ಆದರೆ, (**ಜನಾಃ**=ಜನರು), **ಅಜ್ಞಾನಾತ್**=ಅಜ್ಞಾನದಿಂದ, **ನ ವಿಜಾನಂತಿ**=ಅದನ್ನು ತಿಳಿಯದೇ ಇದ್ದಾರೆ. **ಘಟಾದಿಕಮ್**=ಮಡಕೆಯೇ ಮುಂತಾದದ್ದು, **ಮೃತ್ ಏವ ಹಿ**=ಮಣ್ಣೇ ಅಲ್ಲವೇ ?

ಜನರಿಂದ ಎಲ್ಲಾ ವ್ಯವಹಾರವೂ ಕೂಡ ಬ್ರಹ್ಮನನ್ನು ಬಳಸಿಕೊಂಡು ಮಾಡಲ್ಪ ಡುತ್ತಿದೆ ಆದರೆ ಜನರು ಅಜ್ಞಾನದಿಂದ ಅದನ್ನು ತಿಳಿಯದೇ ಇದ್ದಾರೆ. ಮಡಕೆಯೇ ಮುಂತಾದದ್ದು ಮಣ್ಣೇ ಅಲ್ಲವೇ ?

ಮನುಷ್ಯನು ಹುಟ್ಟಿನಿಂದ ಸಾಯುವವರೆಗೂ ಏನಾದರೂ ಕೆಲಸವನ್ನು ಮಾಡು ತ್ತಲೇ ಇರುತ್ತಾನೆ. ಅವನು ಜ್ಞಾನೇಂದ್ರಿಯಗಳನ್ನು ಉಪಯೋಗಿಸಿಕೊಂಡು ಜಗತ್ತಿನ ವಿಚಾರವಾಗಿ ಜ್ಞಾನವನ್ನು ಪಡೆಯುತ್ತಾನೆ. ಕರ್ಮೇಂದ್ರಿಯಗಳನ್ನು ಉಪಯೋಗಿಸಿ ಕೊಂಡು, ಆಯಾ ಕೆಲಸಗಳಿಗೆ ಬೇಕಾದ ಸಾಧನ ಅಥವಾ ಉಪಕರಣಗಳನ್ನು ಉಪ ಯೋಗಿಸಿಕೊಂಡು ಕರ್ಮಗಳನ್ನು ಮಾಡುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲಗಳನ್ನು ಪಡೆದು ಅನುಭವಿಸುತ್ತಾನೆ. ಮನಸ್ಸಿನಲ್ಲಿ ಅನೇಕಾನೇಕ ವೃತ್ತಿಗಳು ಏಳುತ್ತವೆ. ಬುದ್ಧಿಯಲ್ಲಿ ಆಲೋಚನೆಗಳು ತುಂಬಿವೆ. ಇವುಗಳನ್ನೇ ವ್ಯವಹಾರವೆನ್ನುವುದು. ಇವುಗಳನ್ನು ಬಿಟ್ಟುಕೊಟ್ಟು ಬೇರೆ ಇನ್ನು ಯಾವ ವ್ಯವಹಾರವೂ ಇಲ್ಲವೇ ಇಲ್ಲ. ಆದ್ದರಿಂದ ದೇಹ, ಮನಸ್ಸು, ಬುದ್ಧಿ, ಇಂದ್ರಿಯುಗಳು ಜಗತ್ತಿನ ವಸ್ತುಗಳೊಡನೆ ಸಂಬಂಧಿಸಿಕೊಂಡು ನಡೆಸುವ ಕ್ರಿಯೆಯೇ ವ್ಯವಹಾರವೆನಿಸಿಕೊಂಡಿದೆ. ಹಿಂದಿನ ಶ್ಲೋಕದಲ್ಲಿ ತಿಳಿಸಿದಂತೆ ಬ್ರಹ್ಮವೇ ಜಗತ್ತಾಗಿ ತೋರುತ್ತಿದೆ. ಆದ್ದರಿಂದ ಜಗತ್ತಿನ ಒಂದು ಭಾಗವಾದ ದೇಹೇಂದ್ರಿಯಾದಿಗಳೂ ಬ್ರಹ್ಮವೇ. ಬ್ರಹ್ಮವೇ ದೇಹೇಂದ್ರಿಯಾದಿ ರೂಪ ಕರ್ತೃವೂ ಆಗಿ, ಜಗತ್ತಿನ ವಸ್ತುಗಳ ರೂಪದ ಕರ್ಮವೂ ಆಗಿ, ಆ ಕ್ರಿಯೆಯಿಂದ ಪಡೆಯುವ ಫಲವೂ ಆಗಿರುತ್ತದೆ. ಆದ್ದರಿಂದ ಜನರು ಎಲ್ಲಾ ವ್ಯವಹಾರಗಳಲ್ಲಿಯೂ ಬ್ರಹ್ಮವನ್ನೇ ಬಳಸುತ್ತಿರುವರು.

ಮಡಕೆ, ಕುಡಿಕೆ, ತಟ್ಟೆ ಎಂಬ ಬೇರೆ ಬೇರೆ ಆಕಾರ ಹೆಸರುಗಳನ್ನು ಪಡೆದ ಮಣ್ಣಿನ ವಸ್ತುಗಳನ್ನು ನಾವು ವ್ಯವಹಾರದಲ್ಲಿ ಉಪಯೋಗಿಸುತ್ತೇವೆ. ವ್ಯವಹಾರ ಕಾಲದಲ್ಲಿ ಹೆಸರು, ಆಕಾರ, ಕ್ರಿಯೆಗಳಲ್ಲಿಯೇ ನಮ್ಮ ಮನಸ್ಸು ನೆಟ್ಟಿರುವಾಗ, ಅವುಗಳೆಲ್ಲಾ ಬೇರೆ ಬೇರೆ ವಸ್ತುಗಳೆಂದೇ ತೋರುತ್ತಿರುವುದು. ಆದರೆ ವಿವೇಕದಿಂದ ವಿಚಾರಿಸಿದಾಗ, ಅವುಗಳೆಲ್ಲಾ ಬರಿಯ ಮಣ್ಣೇ ಎಂಬ ಅರಿವು ಆಗುವುದು. ಹೀಗೆಯೇ ವ್ಯವಹಾರ ಕಾಲದಲ್ಲಿ ನಾವು ದೇಹೇಂದ್ರಿಯಾದಿಗಳೂ, ವಸ್ತುಗಳ ಹೆಸರು, ಆಕಾರ, ಕ್ರಿಯೆ ಇಷ್ಟೇ ಅಲ್ಲದೆ ಫಲದಲ್ಲಿಯೂ ನೆಟ್ಟಿರುವ ಮನಸ್ಸಿರುವುದರಿಂದ, ವ್ಯವಹಾರದ ನಿಜ ಸ್ವರೂಪವಾದ ಬ್ರಹ್ಮನನ್ನು ತಿಳಿಯದೇ ಹೋಗಿದ್ದೇವೆ. ಇದೇ ಅಜ್ಞಾನ.

ಕಾರ್ಯಕಾರಣತಾ ನಿತ್ಯಮಾಸ್ತೇ ಘಟಮೃದೋರ್ಯಥಾ ।
ತಥೈವ ಶ್ರುತಿಯುಕ್ತಿಭ್ಯಾಂ ಪ್ರಪಂಚಬ್ರಹ್ಮಣೋರಿಹ ॥ ೬೬ ॥

ಘಟಮೃದೋಃ=ಗಡಿಗೆ ಮಣ್ಣುಗಳಿಗೆ, **ಕಾರ್ಯಕಾರಣ ತಾ**=ಕಾರ್ಯಕಾರಣ ಭಾವವು, **ಯಥಾ**=ಹೇಗೆ, **ನಿತ್ಯಂ**=ಯಾವಾಗಲೂ, **ಆಸ್ತೇ**=ಇದ್ದುಕೊಂಡೇ ಇರುವದೋ, **ತಥಾ**=ಹಾಗೆಯೇ, **ಪ್ರಪಂಚ ಬ್ರಹ್ಮಣೋಃ**=ಪ್ರಪಂಚ ಬ್ರಹ್ಮರುಗಳಿಗೆ (ಇರುವುದೆಂದು), **ಶ್ರುತಿ ಯುಕ್ತಿಭ್ಯಾಂ ಏವ**=ಶ್ರುತಿ ಯುಕ್ತಿಗಳಿಂದಲೇ, **ಇಹ**=ಇಲ್ಲಿ (ತಿಳಿಸಿದ್ದಾಯಿತು.)

ಗಡಿಗೆ ಮಣ್ಣುಗಳಿಗೆ ಕಾರ್ಯಕಾರಣ ಭಾವವು ಹೇಗೆ ಯಾವಾಗಲೂ ಇದ್ದುಕೊಂಡೇ ಇರುವುದೋ ಹಾಗೆಯೇ ಪ್ರಪಂಚ ಬ್ರಹ್ಮರುಗಳಿಗೆ ಇರುವುದೆಂದು ಶ್ರುತಿಯುಕ್ತಿಗಳ ಮೂಲಕವೇ ಇಲ್ಲಿಯವರೆಗೂ ಹೇಳಿದ್ದಾಯಿತು.

ಗಡಿಗೆಯು ಕಾರ್ಯ, ಮಣ್ಣು ಉಪಾದಾನ ಕಾರಣ. ಗಡಿಗೆಯ ತಳ ಭಾಗ, ಹೊಟ್ಟೆ, ಕಂಠ ಎಲ್ಲೆಲ್ಲಿಯೂ ಇರುವುದೆಲ್ಲಾ ಮಣ್ಣೇ, ಮಣ್ಣನ್ನು ಬಿಟ್ಟುಕೊಟ್ಟು,

Sri Vidyabharathi Book Centre, Sringeri

CC-O. In Public Domain. Digitized by eGangotri

ಗಡಿಗೆ ಇರಲೇ ಇರದು ಎಂಬ ವಿಚಾರವು ಬದಲಾವಣೆಯನ್ನು ಹೊಂದದೇ ಸ್ಪಷ್ಟವಾಗಿ ಎಲ್ಲರ ಅನುಭವದಲ್ಲಿಯೂ ಇದೆ. ಹೀಗೆಯೇ. ಈ ಜಗತ್ತು ಬ್ರಹ್ಮನಿಂದಲೇ ವ್ಯಾಪ್ತವಾಗಿ ತೋರುತ್ತಿದೆ. ಜಗತ್ತೆಲ್ಲವೂ ಬ್ರಹ್ಮವೇ. ಬ್ರಹ್ಮನನ್ನು ಬಿಟ್ಟುಕೊಟ್ಟು ಜಗತ್ತು ಇರಲಾರದು. ಈ ವಿಚಾರವನ್ನೇ ಶ್ರುತಿ ಆಧಾರಿತ ಯುಕ್ತಿಗಳಿಂದ ಇದುವರೆಗೂ ತಿಳಿಸಿದ್ದಾಯಿತು. ಅಂದರೆ ಬ್ರಹ್ಮವೇ ಜಗತ್ತಿಗೆ ಕಾರಣ ಎಂದ ಹಾಗಾಯಿತು.

ಸದ್ಗುರುವಿನ ಸಂಪ್ರದಾಯ ಬದ್ಧ ಉಪದೇಶದಿಂದ ಮಾತ್ರ ಬ್ರಹ್ಮವು ಜಗತ್ಕಾರಣ ಎಂಬಲ್ಲಿನ ಕಾರ್ಯಕಾರಣ ಭಾವದ ರಹಸ್ಯವನ್ನು ತಿಳಿಯಬೇಕು. ಶ್ರುತಿಯು ಮಣ್ಣು ಗಡಿಗೆ ದೃಷ್ಟಾಂತದಿಂದ ಬ್ರಹ್ಮವು ಜಗತ್ತಿಗೆ ಉಪಾದಾನ ಕಾರಣವೆಂದು ತಿಳಿಸಲಾಯಿತು. ಜೇಡರ ಹುಳುವಿನ ದೃಷ್ಟಾಂತದಿಂದ, ಬ್ರಹ್ಮ ಒಂದೇ ಜಗತ್ತಿನ ನಿಮಿತ್ತ ಹಾಗೂ ಉಪಾದಾನ ಕಾರಣ ಎಂದು ತಿಳಿಸಲಾಯಿತು. ಬ್ರಹ್ಮನು ಏಕಃ ಅದ್ವಿತೀಯಃ ಎಂದು ಅದೇ ಶ್ರುತಿಯು ಹೇಳುತ್ತದೆಯಾದ್ದರಿಂದ ಬ್ರಹ್ಮನು ಅಭಿನ್ನ ನಿಮಿತ್ತ ಉಪಾದಾನ ಕಾರಣನಾಗಿರಬೇಕು. ಎಲ್ಲಿಯವರೆಗೆ ಈ ಕಾರ್ಯವಾದ ಜಗತ್ತು ಸತ್ಯವೆಂಬ ಭಾವವಿರುತ್ತದೆಯೋ, ಅಲ್ಲಿಯವರೆಗೂ ಬ್ರಹ್ಮನಲ್ಲಿನ ಕಾರಣತ್ವವೂ ಸತ್ಯವೇ ಆಗಿರುತ್ತದೆ. ಜಗತ್ತು ಅದರಲ್ಲಿನ ವ್ಯವಹಾರ, ವ್ಯವಹಾರದಿಂದಾಗುವ ಸುಖ-ದುಃಖಾದಿ ಅನುಭವಗಳೂ ಸತ್ಯವೆಂದೇ ನಂಬಿರುವ ಶಿಷ್ಯನಿಗೆ ಗುರುವು ಈ ಕಾರ್ಯಕಾರಣ ಭಾವದ ಮೂಲಕ ಬ್ರಹ್ಮನ ಇರುವಿಕೆಯನ್ನು ಪರಿಚಯ ಮಾಡಿಸಿದರು. ಶ್ರವಣದ ಫಲವಾಗಿ ಜ್ಞಾನದಿಂದ ಅಜ್ಞಾನವು ಇಲ್ಲವಾಗಲು, ಜಗತ್ತೂ ಇಲ್ಲ, ಅದರ ವ್ಯವಹಾರಾದಿಗಳೂ ಇಲ್ಲ ಎಂಬ ಜ್ಞಾನ ನಿಷ್ಠೆಯಲ್ಲಿ ಶಿಷ್ಯನು ನಿಲ್ಲುತ್ತಾನೆ. ಕಾರ್ಯವಾದ ಜಗತ್ತೇ ಮಿಥ್ಯವೆಂಬ ವಿವೇಕವಾದ ಮೇಲೆ ಕಾರಣತ್ವವು ಇಲ್ಲವೇ ಇಲ್ಲ ಎಂದಾಗುತ್ತದೆ. ಹೀಗೆ ಜಗತ್ತಿನ ದೃಷ್ಟಿಯಿಂದ ಕಾರಣತ್ವವನ್ನು ಆರೋಪ ಮಾಡಿರುವುದು ಬ್ರಹ್ಮನನ್ನು ತಿಳಿಸುವುದಕ್ಕೆ ಉಪಾಯವೇ ಹೊರತು ಜಗತ್ತು ಸತ್ಯವೆಂದು ತಿಳಿಸುವುದಕ್ಕಲ್ಲ.

ಗೃಹ್ಯಮಾಣೇ ಘಟೇ ಯದ್ವನ್ಮೃತ್ತಿಕಾಯಾತಿ ವೈ ಬಲಾತ್ ।
ವೀಕ್ಷ್ಯಮಾಣೇ ಪ್ರಪಂಚೇಽಪಿ ಬ್ರಹ್ಮೈವಾಭಾತಿ ಭಾಸುರಮ್ ॥೬೭॥

ಘಟೇ=ಮಡಕೆಯನ್ನು, **ಗೃಹ್ಯಮಾಣೇ**=ತೆಗೆದುಕೊಂಡರೆ, **ಮೃತ್ತಿಕಾ**=ಮಣ್ಣು, **ಯದ್ವತ್**=ಹೇಗೆ, **ಬಲಾತ್**=ಅವಶ್ಯವಾಗಿ, **ಆಯಾತಿ ವೈ**=ಬಂದೇ ತೀರುವುದೋ, (ಅದರಂತೆಯೇ), **ಪ್ರಪಂಚೇ**=ಪ್ರಪಂಚವನ್ನು, **ಅಪಿ**=ಕೂಡ, **ವೀಕ್ಷ್ಯಮಾಣೇ**=ವಿವೇಕದ ಕಣ್ಣಿನಿಂದ ನೋಡಿದ್ದೇ ಆದರೆ, **ಭಾಸುರಂ**=ಪ್ರಕಾಶ ಸ್ವರೂಪವಾದ, **ಬ್ರಹ್ಮಯೇ ವ**=ಬ್ರಹ್ಮವೇ, **ಆಭಾತಿ**=ಬೆಳಗುತ್ತದೆ.

ಮಡಕೆಯನ್ನು ತೆಗೆದುಕೊಂಡರೆ, ಮಣ್ಣು ಅವಶ್ಯವಾಗಿ ಹೇಗೆ ಬಂದೇ ತೀರುವುದೋ, ಹಾಗೆಯೇ ಈ ಜಗತ್ತೂ ಕೂಡ ವಿವೇಕದ ಕಣ್ಣಿನಿಂದ ನೋಡಲ್ಪಟ್ಟಿದ್ದೇ ಆದರೆ ಪ್ರಕಾಶರೂಪವಾದ ಬ್ರಹ್ಮಮಾತ್ರವೇ ಎಂದು ಗುರುತಿಸಲ್ಪಡುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಣ್ಣನ್ನು ಬಿಟ್ಟುಕೊಟ್ಟು ಮಡಕೆ ಇಲ್ಲ. ನಾವು ಮಡಕೆ ಎಂದು ಮಾಡುವ ವ್ಯವಹಾರವೆಲ್ಲವೂ ಮಣ್ಣೇ ಹೊರತು ಮತ್ತೇನೂ ಅಲ್ಲ. ಮಣ್ಣನ್ನು ಬಿಟ್ಟುಕೊಟ್ಟು ನಾವು ಮಡಕೆಯ ವ್ಯವಹಾರವನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಬ್ರಹ್ಮವು ಜಗತ್ತಿಗೆ ಉಪಾದಾನ ಕಾರಣವಾಗಿರುವುದರಿಂದ ಬ್ರಹ್ಮವನ್ನು ಬಿಟ್ಟುಕೊಟ್ಟು ಜಗತ್ತು ಇಲ್ಲ. ನಾವು ಜಗತ್ತು ಎಂದು ಮಾಡುವ ವ್ಯವಹಾರವೆಲ್ಲವೂ ಸ್ವರೂಪದಿಂದ ಬ್ರಹ್ಮವೇ ಹೊರತು ಮತ್ತೇನೂ ಅಲ್ಲ. ಬ್ರಹ್ಮವನ್ನು ಬಿಟ್ಟುಕೊಟ್ಟು ಜಗತ್ತೆಂಬ ವ್ಯವಹಾರವು ಸಾಧ್ಯವೇ ಇಲ್ಲ. ವಿವೇಕದ ಕಣ್ಣಿನಿಂದ ನೋಡಿದಾಗ ಈ ಪ್ರಾಪಂಚಿಕ ವ್ಯವಹಾರದಲ್ಲೆಲ್ಲಾ ಬ್ರಹ್ಮವೇ ಪ್ರಕಾಶಿಸುವುದು. ವೀಕ್ಷ್ಯಮಾಣೇ ಅಂದರೆ ಶ್ರುತಿ ಆಧಾರಿತ ಜಿಜ್ಞಾಸೆಯಿಂದ ವಿಚಾರ ಮಾಡಿದ್ದೇ . ಆದರೆ, ಅಧಿಕಾರೀ ಸಾಧಕನು ಈ ಪ್ರಪಂಚವನ್ನು ನೋಡುತ್ತಿದ್ದಾಗ್ಯೂ ಸಹ, ಅವರಲ್ಲಿ ಸ್ವಯಂ ಪ್ರಕಾಶವಾಗಿರುವ ಬ್ರಹ್ಮವನ್ನು ಮಾತ್ರ ಗುರುತಿಸುತ್ತಾನೆ. ನಾಮ ರೂಪ ಕ್ರಿಯೆಗಳೆಂಬ ವ್ಯವಹಾರ ರೂಪದಲ್ಲಿ ತೋರುವ ಜಗತ್ತಿಗೆ ಮೌಲ್ಯವನ್ನು ಕೊಡುವುದಿಲ್ಲ. ರಾಗ-ದ್ವೇಷವಿಲ್ಲದೆ ಪ್ರಪಂಚವನ್ನು ಅನುಭವಿಸುತ್ತಾನೆ.

ಈ ಸ್ಥಿತಿಯು ಆಧ್ಯಾತ್ಮಿಕವಾದದ್ದರಿಂದ ಅನುಭವಿಸುವವನು ಮಾತ್ರ ತಿಳಿಯಬಲ್ಲನು. ಬಾಹ್ಯವಾಗಿ ಇವನ ವ್ಯವಹಾರವು ಎಲ್ಲರ ವ್ಯವಹಾರದಂತೆಯೇ ಇರುತ್ತದೆ. ಇವನೇ ಪ್ರಪಂಚದಲ್ಲಿ ಪ್ರಕಾಶರೂಪವಾದ ಬ್ರಹ್ಮವನ್ನು ಗುರುತಿಸುತ್ತಿರುವ ಜೀವನ್ಮುಕ್ತ.

ಸದೈವಾತ್ಮಾ ವಿಶುದ್ಧೋಽಸ್ತಿ ಹ್ಯಶುದ್ಧೋಭಾತಿ ವೈ ಸದಾ ।
ಯಥೈವ ದ್ವಿವಿಧಾ ರಜ್ಜು ಜ್ಞಾನಿನೋಽಜ್ಞಾನಿನೋಽಪಿ ವಾ ॥೬೮॥

ಯಥಾ=ಹೇಗೆ, **ರಜ್ಜುಃ ಏವ**=ಹಗ್ಗ ಒಂದೇ, **ದ್ವಿವಿಧಾ**=ಎರಡು ರೂಪದಲ್ಲಿ ಕಾಣಿಸಿಕೊಳ್ಳುವುದೋ, **ತಥಾ**=ಹಾಗೆಯೇ, **ಆತ್ಮಾ**=ಆತ್ಮನೂ (ದ್ವಿವಿಧಾ ಏವ-ಎರಡು ರೂಪದಲ್ಲಿ ತೋರುತ್ತಿರುವನು) **ಜ್ಞಾನಿನಃ**=ಜ್ಞಾನಿಗಳಿಗೆ, **ಸದಾ**=ಯಾವಾಗಲೂ, **ವಿಶುದ್ಧಃ ಏವ**=ಅತ್ಯಂತ ಶುದ್ಧ ಸ್ವರೂಪನೇ, **ಅಸ್ತಿ**= ಆಗಿರುತ್ತಾನೆ. **ಅಜ್ಞಾನಿನಃ ಹಿ**=ಅಜ್ಞಾನಿಗಳಿಗಾದರೋ, **ಸದಾ ಅಪಿ**= ಎಂದೆಂದಿಗೂ, **ಅಶುದ್ಧಃ ಭಾತಿ ವೈ**=ಅಶುದ್ಧನಾಗಿಯೇ ತೋರುತ್ತಾನಷ್ಟೆ.

ಹೇಗೆ ಹಗ್ಗ ಒಂದೇ ಎರಡು ರೂಪಗಳಲ್ಲಿ ಕಾಣಿಸಿಕೊಳ್ಳುವುದೋ, ಹಾಗೆಯೇ ಆತ್ಮನೂ ಎರಡು ರೂಪದಲ್ಲಿ ತೋರುತ್ತಿರುವನು. ಜ್ಞಾನಿಗಳಿಗೆ ಯಾವಾಗಲೂ ಆತ್ಮನು ಅತ್ಯಂತ ಶುದ್ಧ ಸ್ವರೂಪನೇ ಆಗಿರುತ್ತಾನೆ. ಅಜ್ಞಾನಿಗಳಿಗಾದರೋ (ಅದೇ ಆತ್ಮನೂ) ಯಾವಾಗಲೂ ಅಶುದ್ಧನಾಗಿಯೇ ತೋರುತ್ತಾನೆ.

ಇರುವ ಹಗ್ಗ ಒಂದೇ. ವಿವೇಕಿಗೂ, ಅವಿವೇಕಿಗೂ ಎರಡು ವಿಧವಾಗಿ ಕಾಣಿಸಿಕೊಳ್ಳುತ್ತದೆ. ಹಗ್ಗದ ವಿವೇಕ ಉಳ್ಳವನಿಗೆ ಹಗ್ಗದಂತೆಯೂ, ಹಗ್ಗದ ಇರವನ್ನು ತಿಳಿಯದ ಅವಿವೇಕಿಗೆ, ಅದೇ ಹಗ್ಗ ಹಾವಾಗಿ ತೋರುತ್ತದೆ. ಹಾವಾಗಿ ತೋರುತ್ತಿರು

Sri Vidyabharathi Book Centre, Sringeri

CC-O. In Public Domain. Digitized by eGangotri
ವಾಗಲೂ, ಹಗ್ಗ ಇದ್ದೇ ಇದೆ. ಹಗ್ಗಕ್ಕೆ ಯಾವ ನುಣುಪೂ, ವಿಷವೂ, ಹತ್ತಿರುವುದಿಲ್ಲ. ಅಂದರೆ ಹಗ್ಗವು ಸದಾ ಹಗ್ಗವಾಗಿ ಶುದ್ಧವಾಗಿಯೇ ಇರುತ್ತದೆ. ಹಾಗೆಯೇ ಅಜ್ಞಾನಿಗಳು ಜಗತ್ತನ್ನು ನಾಮ ರೂಪಗಳಿಂದ ಕೂಡಿದ್ದೆಂದು ವ್ಯವಹಾರ ಮಾಡುತ್ತಾ ಅದರಿಂದ ಪಡೆಯುವ ಸುಖದುಃಖಾದಿ ಅನುಭವಗಳು ನಿಜವೇ ಎಂದುಕೊಂಡು ತತ್ತರಿಸಿ ಹೋಗುತ್ತಿದ್ದರೂ ಜಗತ್ತಿನ ಸ್ವರೂಪವಾದ ಬ್ರಹ್ಮಕ್ಕೆ ಯಾವ ಧಕ್ಕೆಯೂ ಆಗುವುದಿಲ್ಲ. ಜ್ಞಾನಿಗಳಾದರೋ ಜಗತ್ತಿನಲ್ಲಿ ವ್ಯವಹಾರ ಮಾಡುತ್ತಾ ಸುಖದುಃಖಾದಿಗಳನ್ನು ಅನುಭವಿಸುತ್ತಿದ್ದರೂ, ಅದೆಲ್ಲವೂ ಕೇವಲ ತೋರಿಕೆ ಎಂದು ಸ್ಪಷ್ಟವಾಗಿ ತಿಳಿದಿರುವುದರಿಂದ, ಆತ್ಮನು ನಿತ್ಯನೂ ಶುದ್ಧನೂ ಎಂದು ಗುರುತಿಸುತ್ತಾರೆ. ಇವರು ಈ ದೇಹದಲ್ಲೇ ಸುಖ ದುಃಖಾದಿಗಳಿಂದ ಬಿಡುಗಡೆ ಹೊಂದಿ ಆನಂದ ಸ್ವರೂಪರಾಗುತ್ತಾರೆ. ಹಗ್ಗವಾಗಿ ತೋರುವಾಗಲೂ ಹಗ್ಗವೇ, ಹಾವಾಗಿ ತೋರುವಾಗಲೂ ಹಗ್ಗವೇ, ಎಂದೆಂದಿಗೂ ಹಗ್ಗವೇ, ಇರುವುದೆಲ್ಲಾ ಹಗ್ಗ ಒಂದೇ; ಹಾಗೆಯೇ ಜ್ಞಾನಿಗಳಿಗೆ ನಿತ್ಯಶುದ್ಧವಾಗಿ ಕಾಣಿಸುವಾಗಲೂ ಆತ್ಮನು ಬ್ರಹ್ಮ ಸ್ವರೂಪನೇ, ಅಜ್ಞಾನಿಗಳಿಗೆ ಸಂಸಾರಿಯಾಗಿ ತೋರುವಾಗಲೂ ಬ್ರಹ್ಮಸ್ವರೂಪನೇ, ಎಂದೆಂದಿಗೂ ಬ್ರಹ್ಮಸ್ವರೂಪನೇ, ಇರುವುದೆಲ್ಲಾ ಬ್ರಹ್ಮ ಒಂದೇ ಎಂಬ ಎರಡಿಲ್ಲದ ತಿಳಿವಳಿಕೆಯೇ ಅದ್ವೈತ ತತ್ವ.

ಯಥೈವ ಮೃನ್ಮಯಃ ಕುಂಭಸ್ತದ್ವದ್ದೇಹೋಽಪಿ ಚಿನ್ಮಯಃ ।
ಆತ್ಮಾನಾತ್ಮವಿಭಾಗೋಽಯಂ ಮುಧೈವ ಕ್ರಿಯತೇಽಬುಧೈಃ
॥ ೬೯ ॥

ಯಥಾ=ಹೇಗೆ, **ಕುಂಭಃ**=ಮಡಕೆಯು, **ಮೃನ್ಮಯಃ**=ಮಣ್ಣಿನಿಂದ ವ್ಯಾಪಕವಾಗಿಯೇ, **ಏವ**=ಇದೆಯೋ, **ತದ್ವತ್**=ಹಾಗೆಯೇ, **ದೇಹಃ ಅಪಿ**= ದೇಹವು ಕೂಡ, **ಚಿನ್ಮಯಃ**=ಚೈತನ್ಯ ಸ್ವರೂಪದಿಂದ ವ್ಯಾಪ್ತವಾಗಿದೆ, (ಆದರೂ) **ಅಬುಧೈಃ**=ಅವಿವೇಕಿಗಳಿಂದ, **ಅಯಂ**=ಈ, **ಆತ್ಮಾನಾತ್ಮ ವಿಭಾಗಃ**=ಆತ್ಮ-ಅನಾತ್ಮ ವಿಭಾಗವು, **ಮುಧಾ**=ವ್ಯರ್ಥವಾಗಿ, **ಕ್ರಿಯತೇ ಏವ**=ಮಾಡಲ್ಪಟ್ಟಿದೆಯಷ್ಟೆ.

ಹೇಗೆ ಮಡಕೆಯು ಮಣ್ಣಿನಿಂದ ವ್ಯಾಪ್ತವಾಗಿಯೇ ಇದೆಯೋ, ಹಾಗೆಯೇ ಈ ದೇಹವು ಕೂಡ ಚೈತನ್ಯ ಸ್ವರೂಪದಿಂದ ವ್ಯಾಪ್ತವಾಗಿದೆ. ಇದನ್ನು ತಿಳಿಯದ ಅವಿವೇಕಿಗಳಿಂದ ಆತ್ಮ ಅನಾತ್ಮ ವಿಭಾಗವು ವ್ಯರ್ಥವಾಗಿ ಮಾಡಲ್ಪಟ್ಟಿದೆ.

ಇದುವರೆಗೆ ಜಗತ್ತು ಬ್ರಹ್ಮಸ್ವರೂಪವೇ ಎಂದು ಶ್ರುತಿ ಯುಕ್ತಿಗಳ ಆಧಾರದಿಂದ ಪ್ರತಿಪಾದಿಸಿದ್ದಾಯಿತು. ಆದ್ದರಿಂದ ಜಗತ್ತಿನ ಒಂದು ಭಾಗವಾದ ದೇಹವೂ ಸಹ ಸಚ್ಚಿದಾನಂದ ಸ್ವರೂಪವೇ ಆಗಿರಬೇಕು. ಆದರೆ ಅವಿವೇಕಿಗಳು ಅನಾತ್ಮವಾದ ನಾಮ ರೂಪ ದೇಹವನ್ನೇ ಆತ್ಮ ಎಂದು ಅಜ್ಞಾನದಿಂದ ತಿಳಿದು ಸಂಸಾರದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಇಂತಹವರಿಗೆ ಉಪದೇಶ ಮಾಡುವುದಕ್ಕಾಗಿ ಅವರ ಅನಿಸಿಕೆಯನ್ನೇ ಅನು

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ಮಾಡಿಕೊಂಡು ಶ್ರುತಿಯು ಆತ್ಮ ಅನಾತ್ಮ ವಿಭಾಗ ಮಾಡಿ, ಈ ನಾಮ ರೂಪ ದೇಹವು ಆತ್ಮನಲ್ಲ, ಅನಾತ್ಮವೆಂದು ತೋರಿಸಿಕೊಟ್ಟಿತು. ನಂತರ ಆತ್ಮನೇ ಬ್ರಹ್ಮ, ಸರ್ವವ್ಯಾಪೀ, ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುವುದರಿಂದ ಜಗತ್ತಿನ ಸ್ವರೂಪವೂ ಆತ್ಮವೇ, ಇರುವುದೆಲ್ಲಾ ಆತ್ಮ ಒಂದೇ. ಅಜ್ಞಾನದಿಂದ ಇದೆಯೆಂದು ಹೇಳುತ್ತಿರುವ ಅನಾತ್ಮವು ಇಲ್ಲವೇ ಇಲ್ಲ. ಆದ್ದರಿಂದ ಆತ್ಮ ಅನಾತ್ಮ ವಿಭಾಗವನ್ನು ಮಾಡುವುದು ವ್ಯರ್ಥವೇ ಸರಿ.

ಮಣ್ಣಿನಿಂದಾದ ಮಡಕೆಯು ಮಣ್ಣಿನಿಂದಲೇ ವ್ಯಾಪ್ತವಾಗಿದೆ. ಅಂದರೆ ಮಣ್ಣನ್ನು ಬಿಟ್ಟುಕೊಟ್ಟು ಅದು ಇರಲಾರದು. ಮಣ್ಣೇ ಮಡಕೆಯ ಸ್ವರೂಪ. ಹಾಗೆಯೇ, ಆತ್ಮನಿಂದ ವ್ಯಾಪ್ತವಾಗಿ, ಆತ್ಮನಲ್ಲಿಯೇ ತೋರುತ್ತಿರುವ ಈ ದೇಹವು ಚಿತ್ಸ್ವರೂಪನಾದ ಆತ್ಮನನ್ನು ಬಿಟ್ಟುಕೊಟ್ಟು ಇರಲಾರದು. ಆದ್ದರಿಂದ ದೇಹವು ಚಿತ್ಸ್ವರೂಪ. ಅಂದರೆ ನಾಮ ರೂಪಗಳನ್ನು ಬಿಟ್ಟುಕೊಟ್ಟು ಕೇವಲ ಇರುವಿಕೆ, ತೋರುವಿಕೆ ಮಾತ್ರ.

ದೇಹವು ಚಿನ್ಮಯ ಸ್ವರೂಪವೆಂದು ಗುರುತಿಸಲಾರದ ಮೂಢರು ಈ ನಾಮ ರೂಪಾತ್ಮಕವಾದ ದೇಹವನ್ನೇ ತಾನು ಎಂದು ಭ್ರಾಂತಿಯಿಂದ ನಿಶ್ಚಯಿಸಿಕೊಂಡಿರುವರು. ಇಂತಹ ಭ್ರಾಂತಿಯು ಅಸಂಭವವಲ್ಲವೆಂದು, ಅನೇಕ ದೃಷ್ಟಾಂತಗಳ ಮೂಲಕ ಮುಂದಿನ ಐದು ಶ್ಲೋಕಗಳಲ್ಲಿ ತಿಳಿಸುತ್ತಿದ್ದಾರೆ.

ಸರ್ಪತ್ವೇನ ಯಥಾ ರಜ್ಜೂ ರಜತತ್ವೇನ ಶುಕ್ತಿಕಾ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೭೦ ॥

ಯಥಾ=ಹೇಗೆ, **ರಜ್ಜೂ**=ಹಗ್ಗವು, **ಸರ್ಪತ್ವೇನ**=ಹಾವೆಂದೂ, (**ಯಥಾ**=ಹೇಗೆ.) **ಶುಕ್ತಿಕಾ**=ಕಪ್ಪೆಯ ಚಿಪ್ಪು. **ರಜತತ್ವೇನ**=ಬೆಳ್ಳಿಯೆಂದೂ, **ವಿಮೂಢೇನ**=ಮೂಢನಿಂದ, **ವಿನಿರ್ಣೀತಾ**=ನಿಶ್ಚಯಿಸಲ್ಪಟ್ಟಿದೆಯೋ, **ತಥಾ** ಹಾಗೆಯೇ, **ಆತ್ಮತಾ**=ಆತ್ಮನು, **ದೇಹತ್ವೇನ**=ದೇಹವೆಂದೂ (ನಿಶ್ಚಯಿಸಲ್ಪಟ್ಟಿದೆ)

ಹೇಗೆ ಹಗ್ಗವು ಹಾವೆಂದೂ, ಕಪ್ಪೆಯ ಚಿಪ್ಪು ಬೆಳ್ಳಿಯೆಂದೂ ಮೂಢನಿಂದ ನಿಶ್ಚಯಿಸಲ್ಪಟ್ಟಿತೋ ಹಾಗೆ.

ಘಟತ್ವೇನ ಯಥಾ ಪೃಥ್ವೀ ಪಟತ್ವೇನೈವ ತಂತವಃ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೭೧ ॥

ಯಥಾ=ಹೇಗೆ, **ಪೃಥ್ವೀ**=ಮಣ್ಣು, **ಘಟತ್ವೇನ**=ಮಡಕೆ ಎಂದೂ, **ತಂತವಃ**=ದಾರಗಳು, **ಪಟತ್ವೇನ ಏವ**=ಬಟ್ಟೆ ಎಂದೇ (ತಿಳಿಯುವಂತೆ). **ತಥಾ**= ಹಾಗೆಯೇ, **ಆತ್ಮತಾ**=ಆತ್ಮನು, **ದೇಹತ್ವೇನ**=ದೇಹವೆಂದೇ, **ವಿಮೂಢೇನ**= ಮೂಢನಿಂದ, **ವಿನಿರ್ಣೀತಾ**=ಗಟ್ಟಿಯಾಗಿ ನಿಶ್ಚಯಿಸಲ್ಪಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಗೆ ಮಣ್ಣು ಮಡಕೆಯೆಂದೂ, ದಾರಗಳು ಬಟ್ಟೆ ಎಂದೂ ತಿಳಿಯುವಂತೆ, ಆತ್ಮನು ದೇಹವೆಂದೇ ಮೂಢನಿಂದ ಗಟ್ಟಿಯಾಗಿ ನಿಶ್ಚಯಿಸಲ್ಪಟ್ಟಿದೆ.

ಕನಕಂ ಕುಂಡಲತ್ವೇನ ತರಂಗತ್ವೇನ ವೈ ಜಲಮ್ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೬೨ ॥

(**ಯಥಾ**=ಹೇಗೆ)' **ಕನಕಂ**=ಚಿನ್ನವನ್ನು. **ಕುಂಡಲತ್ವೇನ**=ಕಿವಿಯ ಆಭರಣವೆಂದೂ. **ಜಲಂ**=ನೀರನ್ನು. **ತರಂಗತ್ವೇನ ವೈ**=ತೆರೆಯೆಂದೂ. (ತಿಳಿಯುತ್ತಾರೆಯೋ) **ತಥಾ**=ಹಾಗೆಯೇ. **ಆತ್ಮತಾ**=ಆತ್ಮನು). **ದೇಹತ್ವೇನ**=ದೇಹವೆಂದೇ. **ವಿಮೂಢೇನ**=ಮೂಢನಿಂದ, **ವಿನಿರ್ಣೀತಾ**=ನಿರ್ಣಯಿಸಲ್ಪಟ್ಟಿದೆ.

ಹೇಗೆ ಚಿನ್ನವನ್ನು ಕಿವಿಯ ಆಭರಣವೆಂದೂ, ನೀರನ್ನು ತೆರೆಯೆಂದೂ ತಿಳಿಯುತ್ತಾರೆಯೋ, ಹಾಗೆಯೇ ಆತ್ಮನು ದೇಹವೆಂದೇ ಮೂಢನಿಂದ ನಿಶ್ಚಯಿಸಲ್ಪಟ್ಟಿದೆ.

ನರತ್ವೇನ ಯಥಾ ಸ್ಥಾಣುರ್ಜಲತ್ವೇನ ಮರೀಚಿಕಾ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೬೩ ॥

ಯಥಾ=ಹೇಗೆ, **ಸ್ಥಾಣು**=ಮೋಟು ಮರವು. **ನರತ್ವೇನ** ಮನುಷ್ಯನೆಂದೂ. **ಮರೀಚಿಕಾ**=ಬಿಸಿಲುಕುದುರೆಯು, **ಜಲತ್ವೇನ**=ನೀರೆಂದೂ, (ತಿಳಿಯುವಂತೆ). **ತಥಾ**=ಹಾಗೆಯೇ. **ಆತ್ಮತಾ**=ಆತ್ಮನು, **ದೇಹತ್ವೇನ**=ದೇಹವೆಂದೇ, **ವಿಮೂಢೇನ**=ಮೂಢನಿಂದ, **ವಿನಿರ್ಣೀತಾ**=ನಿರ್ಣಯಿಸಲ್ಪಟ್ಟಿದೆ.

ಹೇಗೆ ಮೋಟು ಮರವು ಮನುಷ್ಯನೆಂದೂ ಬಿಸಿಲು ಕುದುರೆಯು ನೀರೆಂದೂ ತಿಳಿಯುವಂತೆ ಆತ್ಮನು ದೇಹವೆಂದೇ ಮೂಢನಿಂದ ನಿಶ್ಚಯಿಸ್ಪಟ್ಟಿದೆ.

ಗೃಹತ್ವೇನೈವ ಕಾಷ್ಠಾನಿ ಖಡ್ಗತ್ವೇನೈವ ಲೋಹತಾ ।
ವಿನಿರ್ಣೀತಾ ವಿಮೂಢೇನ ದೇಹತ್ವೇನ ತಥಾತ್ಮತಾ ॥ ೬೪ ॥

(**ಯಥಾ**=ಹೇಗೆ). **ಕಾಷ್ಠಾನಿ**=ಮರದ ತುಂಡುಗಳು, **ಗೃಹತ್ವೇನೈವ**=ಮನೆಯೇ ಎಂದೂ, **ಲೋಹತಾ**=ಕಬ್ಬಿಣವು, **ಖಡ್ಗತ್ವೇನ ಏವ**=ಕತ್ತಿಯೇ ಎಂದೂ, (ತಿಳಿಯಲ್ಪಡುತ್ತದೆಯೋ) **ತಥಾ**=ಹಾಗೆಯೇ, **ಆತ್ಮತಾ**=ಆತ್ಮನು, **ದೇಹತ್ವೇನ**=ದೇಹವೆಂದೇ, **ವಿಮೂಢೇನ**=ಮೂಢನಿಂದ, **ವಿನಿರ್ಣೀತ**=ನಿಶ್ಚಯಿಸಲ್ಪಟ್ಟಿದೆ.

ಹೇಗೆ ಮರದ ತುಂಡುಗಳು ಮನೆಯೇ ಎಂದೂ, ಕಬ್ಬಿಣವು ಕತ್ತಿಯೇ ಎಂದೂ ತಿಳಿಯಲ್ಪಡುತ್ತದೆಯೋ ಹಾಗೆಯೇ ಆತ್ಮನು ದೇಹವೆಂದೇ ಮೂಢನಿಂದ ನಿಶ್ಚಯಿಸಲ್ಪಟ್ಟಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಹವು ಆ ಸ್ವರೂಪದಿಂದ ಆತ್ಮನೇ ಆಗಿದ್ದರೂ ಸಹ, ತೋರುತ್ತಿರುವ ನಾಮ ರೂಪದೇಹವನ್ನೇ ಆತ್ಮವೆಂದು ಮೂಢರು ತಿಳಿದಿದ್ದಾರೆ. ದೇಹವು ಆತ್ಮನನ್ನೇ ಆಧಾರ ವಾಗಿಟ್ಟುಕೊಂಡು ಆತ್ಮನ ಮೇಲೆಯೇ ಕಲ್ಪಿತವಾಗಿ ತೋರುತ್ತಿದೆ. ಇದಕ್ಕೆ ಹಗ್ಗ–ಹಾವು ಕಪ್ಪೆಚಿಪ್ಪು-ಬೆಳ್ಳಿ, ಸ್ಥಾಣು–ಪುರುಷ. ಈ ದೃಷ್ಟಾಂತಗಳನ್ನು ಕೊಟ್ಟಿದ್ದಾರೆ. ಸರ್ವವ್ಯಾಪಿ ಯಾದ ಆತ್ಮನು ದೇಹವನ್ನು ವ್ಯಾಪಿಸಿದ್ದಾನೆ. ಆತ್ಮನನ್ನು ಬಿಟ್ಟುಕೊಟ್ಟು, ದೇಹ ವೆಂಬುದು ಇಲ್ಲವೇ ಇಲ್ಲ ಎಂಬುದನ್ನು ತಿಳಿಸುವುದಕ್ಕೋಸ್ಕರ ಮಣ್ಣು–ಮಡಕೆ. ನೂಲು –ಬಟ್ಟೆ, ಚಿನ್ನ–ಆಭರಣ, ನೀರು–ಕೆರೆಗಳು, ಮರ ಮುಟ್ಟುಗಳು-ಮನೆ, ಕಬ್ಬಿಣ-ಕತ್ತಿ ಈ ದೃಷ್ಟಾಂತಗಳನ್ನು ಕೊಟ್ಟಿರುತ್ತಾರೆ. ಅಂದರೆ ಆತ್ಮನೇ ದೇಹಕ್ಕೆ ವಿವರ್ತ ಉಪಾ ದಾನ ಕಾರಣನಾಗಿರುತ್ತಾನೆ ಎಂಬುದನ್ನು ತಿಳಿಸುವುದೇ ಈ ಶ್ಲೋಕಗಳ ತಾತ್ಪರ್ಯ. ಹಗ್ಗ–ಹಾವು ಇತ್ಯಾದಿ ದೃಷ್ಟಾಂತಗಳಿಂದ ಉಪಾದಾನ ವಿವರ್ತವಾದವನ್ನೂ, ಮಣ್ಣು, ಮಡಕೆ ಇತ್ಯಾದಿ ದೃಷ್ಟಾಂತಗಳಿಂದ ಉಪಾದಾನ ಕಾರಣ, ಅಂದರೆ ವ್ಯಾಪಕತ್ವವನ್ನೂ ತಿಳಿಸುತ್ತಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳದ ಮೂಢರು ನಾಮ ರೂಪ ಆಕಾರ ಗಳುಳ್ಳ ದೇಹವನ್ನೇ ಆತ್ಮನೆಂದು ನಿಶ್ಚಯಿಸಿಕೊಂಡಿದ್ದಾರೆ.

ಮುಂದಿನ ೧೨ ಶ್ಲೋಕಗಳಲ್ಲಿ ಈ ರೀತಿಯಾಗಿ ಆತ್ಮನಲ್ಲಿ ದೇಹತ್ವವನ್ನು ಕಾಣುವು ದಕ್ಕೆ ಅಜ್ಞಾನವೇ ಕಾರಣ ಎಂದು ಅನೇಕಾನೇಕ ದೃಷ್ಟಾಂತಗಳ ಮೂಲಕ ತಿಳಿಸುತ್ತಿ ದ್ದಾರೆ.

೧೭. ಅಜ್ಞಾನವೇ ಕಾರಣ

ಯಥಾ ವೃಕ್ಷವಿಪರ್ಯಾಸೋ ಜಲಾದ್ಭವತಿ ಕಸ್ಯಚಿತ್ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೫ ॥

ಯಥಾ=ಹೇಗೆ. **ಜಲಾತ್**=ನೀರಿನ ಹತ್ತಿರ ಇರುವಿಕೆಯಿಂದ, **ವೃಕ್ಷಃ**= ಮರವು. **ವಿಪರ್ಯಾಸ**=ತಲೆಕೆಳಗಾಗಿರುವುದೆಂದು, **ಕಸ್ಯಚಿತ್**=ಯಾರಿಗಾದರೂ (ತಿಳಿಯಬರಬಹುದೋ) **ತದ್ವತ್**=ಹಾಗೆಯೇ, **ಅಜ್ಞಾನಯೋಗತಃ**=ಅಜ್ಞಾನ ಸಂಬಂಧದಿಂದ, **ಆತ್ಮನಿ**=ಆತ್ಮನಲ್ಲಿ, **ದೇಹತ್ವಂ**=ದೇಹದ ತಾದಾತ್ಮ್ಯವನ್ನು ಕಾಣು ತ್ತಿರುವರು.

ಹೇಗೆ ನೀರಿನ ಹತ್ತಿರ ಇರುವಿಕೆಯಿಂದ ಮರವು ತಲೆಕೆಳಗಾಗಿರುವುದೆಂದು ಯಾರಿ ಗಾದರೂ ತಿಳಿಯಬಹುದೋ ಹಾಗೆಯೇ ಅಜ್ಞಾನದ ಕಾರಣವಾಗಿ ಆತ್ಮನಲ್ಲಿ ದೇಹದ ತಾದಾತ್ಮ್ಯವನ್ನು ಕಾಣುತ್ತಿರುವರು.

ಪೋತೇನ ಗಚ್ಛತಃ ಪುಂಸಃ ಸರ್ವಂ ಭಾತೀವ ಚಂಚಲಂ ।
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೬ ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಹೇಗೆ) **ಪೋತೇನ**=ದೋಣಿಯಲ್ಲಿ, **ಗಚ್ಛತಃ**=ಹೋಗುತ್ತಿರುವ, **ಪುಂಸಃ** =ಮನುಷ್ಯನಿಗೆ, **ಸರ್ವಂ**=ಎಲ್ಲವೂ, **ಚಂಚಲಂ ಇವ**=ಓಡಾಡುತ್ತಿರುವಂತೆಯೇ **ಭಾತಿ**=ಕಾಣಿಸುತ್ತಿದೆಯೋ, **ತದ್ವತ್**=ಅದರಂತೆಯೇ, **ಆತ್ಮನಿ**=ಆತ್ಮನಲ್ಲಿ, **ಅಜ್ಞಾನಯೋಗತಃ**=ಅಜ್ಞಾನದಿಂದ, **ದೇಹತ್ವಂ**=ದೇಹವು, **ಪಶ್ಯತಿ**=ಕಾಣುತ್ತಿರುವುದು.

ಹೇಗೆ ದೋಣಿಯಲ್ಲಿ ಹೋಗುತ್ತಿರುವ ಮನುಷ್ಯನಿಗೆ ಎಲ್ಲವೂ ಓಡಾಡುತ್ತಿರುವಂತೆಯೇ ಕಾಣಿಸುತ್ತಿದೆಯೋ, ಅದರಂತೆಯೇ ಆತ್ಮನಲ್ಲಿ ಅಜ್ಞಾನದಿಂದ ದೇಹವು ಕಾಣುತ್ತಿರುವುದು.

ಪೀತತ್ವಂ ಹಿ ಯಥಾ ಶುಭ್ರೇ ದೋಷಾದ್ಭವತಿ ಕಸ್ಯಚಿತ್
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ || ೭೭ ||

ಯಥಾ=ಹೇಗೆ, **ಶುಭ್ರೇ**=ಬೆಳ್ಳಗಿರುವ ವಸ್ತುವಿನಲ್ಲಿ, **ದೋಷಾತ್**= ಕಣ್ಣಿನ ದೋಷದಿಂದ, **ಕಸ್ಯಚಿತ್**=ಕೆಲವರಿಗೆ, **ಪೀತತ್ವಂ ಹಿ** =ಹಳದಿಯ ಬಣ್ಣವೇ **ಭವತಿ**=ಇರುತ್ತದೆಯೋ, **ತದ್ವತ್**=ಅದರಂತೆ, **ಅಜ್ಞಾನ ಯೋಗತಃ**=ಅಜ್ಞಾನದ ಕಾರಣದಿಂದಾಗಿ, **ಆತ್ಮನಿ**=ಆತ್ಮನಲ್ಲಿ, **ದೇಹತ್ವಂ**=ದೇಹವು, **ಪಶ್ಯತಿ**=ಕಾಣುತ್ತಿರುವುದು.

ಹೇಗೆ ಬೆಳ್ಳಗಿರುವ ವಸ್ತುವಿನಲ್ಲಿ ಕಣ್ಣಿನ ದೋಷದಿಂದ ಕೆಲವರಿಗೆ ಹಳದಿಯ ಬಣ್ಣವೇ ಇರುತ್ತದೆಯೋ, ಅದರಂತೆಯೇ ಅಜ್ಞಾನದ ಕಾರಣದಿಂದಾಗಿ ಆತ್ಮನೇ ದೇಹವೆಂದು ಕಾಣುತ್ತಿರುವುದು.

ಚಕ್ಷುರ್ಭ್ಯಾಂ ಭ್ರಮಶೀಲಾಭ್ಯಾಂ ಸರ್ವಂ ಭಾತಿ ಭ್ರಮಾತ್ಮಕಂ
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ || ೭೮ ||

ಭ್ರಮಶೀಲಾಭ್ಯಾಂ = (ಅಪ್ಪಾಲೆ ತಿಪ್ಪಾಲೆಯಲ್ಲಿ ಸುತ್ತಲೂ ವೇಗವಾಗಿ) ತಿರುಗುತ್ತಿರುವ, **ಚಕ್ಷುರ್ಭ್ಯಾಂ**=ಎರಡು ಕಣ್ಣುಗಳಿಂದಲೂ, **ಸರ್ವಂ**=ನಮ್ಮ ಸುತ್ತಲೂ ಇರುವುದು, **ಭ್ರಮಾತ್ಮಕಂ**=ಚಲಿಸುತ್ತಿರುವಂತೆಯೇ, **ಭಾತಿ**=ತೋರುತ್ತದೆ, **ತದ್ವತ್**=ಹಾಗೆಯೇ, **ಅಜ್ಞಾನ ಯೋಗತಃ**=ಅಜ್ಞಾನದ ಸಂಬಂಧದಿಂದ, **ಆತ್ಮನಿ**=ಆತ್ಮನಲ್ಲಿ, **ದೇಹತ್ವಂ**=ದೇಹವು, **ಪಶ್ಯತಿ**=ಕಾಣುತ್ತಿದೆ.

ಅಪ್ಪಾಲೆ ತಿಪ್ಪಾಲೆಯಲ್ಲಿ ಸುತ್ತಲೂ ವೇಗವಾಗಿ ತಿರುಗುತ್ತಿರುವಾಗ ಕಣ್ಣುಗಳಿಂದ ನಮ್ಮ ಸುತ್ತಲೂ ಇರುವ ಪದಾರ್ಥಗಳೆಲ್ಲವೂ, ತಿರುಗುತ್ತಿರುವಂತೆಯೇ ಕಾಣುತ್ತದೆ. ಹಾಗೆಯೇ, ಅಜ್ಞಾನದ ಸಂಬಂಧದಿಂದ ಆತ್ಮನನ್ನು ದೇಹವೆಂದೇ ನೋಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲಾತಂ ಭ್ರಮಣೇನೈವ ವರ್ತುಲಂ ಭಾತಿ ಸೂರ್ಯವತ್
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೭೯ ॥

ಅಲಾತಂ = ಕೊಳ್ಳಿಯನ್ನು, **ಭ್ರಮಣೇನೈವ** = ತಿರುಗಿಸಿದ ಮಾತ್ರಕ್ಕೆ, **ಸೂರ್ಯವತ್** = ಸೂರ್ಯನಂತೆ, **ವರ್ತುಲಂ** = ಗುಂಡಗೆ, **ಭಾತಿ** = ಕಾಣಿಸುತ್ತದೆ, **ತದ್ವತ್** = ಹಾಗೆಯೇ, **ಆತ್ಮನಿ** = ಆತ್ಮನಲ್ಲಿ, **ಅಜ್ಞಾನ ಯೋಗತಃ** = ಅಜ್ಞಾನ ದಿಂದ, **ದೇಹತ್ವಂ** = ದೇಹವನ್ನು, **ಪಶ್ಯತಿ** = ಕಾಣುತ್ತಾನೆ.

ಕೊಳ್ಳಿಯನ್ನು ತಿರುಗಿಸಿದ ಮಾತ್ರಕ್ಕೆ ಅದು ಸೂರ್ಯನಂತೆ, ಗುಂಡಾಗಿ ಕಾಣುವುದಷ್ಟೆ. ಅದರಂತೆಯೇ ಆತ್ಮನಲ್ಲಿ, ಅಜ್ಞಾನದಿಂದ ದೇಹವನ್ನು ಕಾಣುತ್ತಾನೆ.

ಮಹತ್ತ್ವೇ ಸರ್ವವಸ್ತೂನಾಮಣುತ್ವಂ ಹ್ಯತಿದೂರತಃ
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗಃ ॥ ೮೦ ॥

ಮಹತ್ತ್ವೇ = ದೊಡ್ಡದಾಗಿದ್ದರೂ, **ಸರ್ವವಸ್ತೂನಾಂ** = ಎಲ್ಲಾ ವಸ್ತುಗಳೂ, **ಅತಿ ದೂರತಃ** = ಬಹಳ ದೂರವಿರುವ ಕಾರಣ, **ಅಣುತ್ವಂ ಹಿ** = ಚಿಕ್ಕದಾಗಿರುವಂತೆ ತೋರುವುದಷ್ಟೆ ; **ತದ್ವತ್** = ಹಾಗೆಯೇ, **ಅಜ್ಞಾನಯೋಗತಃ** = ಅಜ್ಞಾನದ ಸಂಬಂಧದಿಂದ, **ಆತ್ಮನಿ** = ಆತ್ಮನಲ್ಲಿ, **ದೇಹತ್ವಂ** = ದೇಹತ್ವವನ್ನು, **ಪಶ್ಯತಿ** = ಕಾಣುತ್ತಾನೆ.

ದೊಡ್ಡದಾಗಿರುವ ಎಲ್ಲಾ ವಸ್ತುಗಳೂ ಬಹಳ ದೂರವಿರುವ ಕಾರಣ ಚಿಕ್ಕದಾಗಿರುವಂತೆ ತೋರುವ ಹಾಗೆಯೇ ಅಜ್ಞಾನದ ಸುಬಂಧದಿಂದ ಆತ್ಮನಲ್ಲಿ ದೇಹತ್ವವನ್ನು, ಕಾಣುತ್ತಾನೆ.

ಸೂಕ್ಷ್ಮತ್ವೇ ಸರ್ವಭಾವಾನಾಂ ಸ್ಥೂಲತ್ವಂ ಚೋಪನೇತ್ರತಃ
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೧ ॥

ಸೂಕ್ಷ್ಮತ್ವೇ = ಸಣ್ಣದಾಗಿದ್ದರೂ, **ಸರ್ವಭಾವಾನಾಂ** = ಎಲ್ಲಾ ವಸ್ತುಗಳೂ, **ಉಪನೇತ್ರತಃ** = ಕನ್ನಡಕ ಅಥವಾ ಸೂಕ್ಷ್ಮದರ್ಶಿಯ ಸಂಬಂಧದಿಂದ, **ಸ್ಥೂಲತ್ವಂ ಚ** = ದೊಡ್ಡದಾಗಿರುವಂತೆ ತೋರುವಂತೆ, **ತದ್ವತ್** = ಹಾಗೆಯೇ, **ಅಜ್ಞಾನಯೋಗತಃ** = ಅಜ್ಞಾನದಿಂದ, **ಆತ್ಮನಿ** = ಆತ್ಮನಲ್ಲಿ, **ದೇಹತ್ವಂ** = ದೇಹವನ್ನು, **ಪಶ್ಯತಿ** = ಕಾಣುತ್ತಾನೆ.

ನಿಜವಾಗಿ ಸಣ್ಣದೇ ಆಗಿದ್ದರೂ ಎಲ್ಲಾ ವಸ್ತುಗಳೂ ಕನ್ನಡಕ ಅಥವಾ ಸೂಕ್ಷ್ಮದರ್ಶಿಯ ಸಂಬಂಧದಿಂದ ದೊಡ್ಡದಾಗಿ ತೋರುವಂತ ಅಜ್ಞಾನದ ಕಾರಣವಾಗಿ ಆತ್ಮನನ್ನು ದೇಹವೆಂದೇ ಕಾಣುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಚ-ಭೂಮೌ ಜಲತ್ವಂ ವಾ ಜಲಭೂಮೌ ಹಿ ಕಾಚತಾ
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ || ೮೨ ||

ಕಾಚಭೂಮೌ=ಗಾಜಿನ ನೆಲದಲ್ಲಿ. **ಜಲತ್ವಂ**=ನೀರನ್ನೂ, **ಜಲಭೂಮೌ**=ನೀರಿನ ಸ್ಥಳದಲ್ಲಿ. **ಕಾಚತಾಹಿ**=ಗಾಜನ್ನೂ ಕಾಣುವರಷ್ಟೆ. **ತದ್ವತ್**=ಹಾಗೆಯೇ **ಆತ್ಮನಿ**=ಆತ್ಮನಲ್ಲಿ. **ದೇಹತ್ವಂ**=ದೇಹತ್ವವನ್ನು. **ಅಜ್ಞಾನಯೋಗತಃ**=ಅಜ್ಞಾನದ ಸಂಬಂಧದಿಂದ, **ಪಶ್ಯತಿ**=ಕಾಣುತ್ತಾನೆ.

ಗಾಜಿನ ನೆಲದಲ್ಲಿ ನೀರನ್ನೂ, ನೀರಿನ ಸ್ಥಳದಲ್ಲಿ ಗಾಜನ್ನೂ ಕಾಣುವರಷ್ಟೆ, ಅದರಂತೆ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಯದ್ವದಗ್ನೌ ಮಣಿತ್ವಂ ಹಿ ಮಣೌ ವಾ ವಹ್ನಿತಾ ಪುಮಾನ್
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ || ೮೩ ||

ಅಗ್ನೌ=ಬೆಂಕಿಯಲ್ಲಿ, **ಮಣಿತ್ವಂ ಹಿ**=ರತ್ನವೆಂದೂ, **ವಾ**=ಅಥವಾ, **ಮಣೌ**=ರತ್ನದಲ್ಲಿ. **ವಹ್ನಿತಾ**=ಬೆಂಕಿಯೆಂದೂ, **ಯದ್ವತ್**=ಹೇಗೆ, **ಪುಮಾನ್** ಮನುಷ್ಯನು, (ಕಾಣುತ್ತಾನೆಯೋ) **ತದ್ವತ್**=ಅದರಂತೆ, **ಆತ್ಮನಿ**=ಆತ್ಮನಲ್ಲಿ, **ಅಜ್ಞಾನಯೋಗತಃ**=ಅಜ್ಞಾನದ ಸಂಬಂಧದಿಂದ, **ದೇಹತ್ವಂ**=ದೇಹತ್ವವನ್ನು **ಪಶ್ಯತಿ**=ಕಾಣುತ್ತಾನೆ.

ಬೆಂಕಿಯಲ್ಲಿ ರತ್ನವೆಂದೂ, ರತ್ನದಲ್ಲಿ ಬೆಂಕಿ ಎಂದೂ ಮನುಷ್ಯನು ಹೇಗೆ ಕಾಣುವನೋ ಹಾಗೆಯೇ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಅಭ್ರೇಷು ಸತ್ಸು ಧಾವತ್ಸು ಸೋಮೋ ಧಾವತಿ ಭಾತಿ ವೈ
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ || ೮೪ ||

ಅಭ್ರೇಷು=ಮೋಡಗಳು, **ಧಾವತ್ಸು ಸತ್ಸು**=ಓಡಾಡುತ್ತಾ ಇರುವಾಗ **ಸೋಮಃ**=ಚಂದ್ರನು **ಧಾವತಿ (ಇತಿ)**=ಓಡಾಡುತ್ತಿರುವಂತೆ, **ಭಾತಿ ವೈ**=ಕಾಣುವುದಷ್ಟೆ, **ತದ್ವತ್**=ಅದರಂತೆ, **ಆತ್ಮನಿ**=ಆತ್ಮನಲ್ಲಿ, **ಅಜ್ಞಾನಯೋಗತಃ**=ಅಜ್ಞಾನದ ಸಂಬಂಧದಿಂದ, **ದೇಹತ್ವಂ**=ದೇಹತ್ವವನ್ನು, **ಪಶ್ಯತಿ**=ಕಾಣುತ್ತಾನೆ.

ಮೋಡಗಳು ಓಡಾಡುತ್ತಾ ಇರುವಾಗ ಚಂದ್ರನು ಓಡಾಡುತ್ತಿರುವಂತೆ ಕಾಣುವುದಷ್ಟೆ. ಅದರಂತೆಯೇ ಆತ್ಮನಲ್ಲಿ ಅಜ್ಞಾನದ ಸಂಬಂಧದಿಂದ ದೇಹತ್ವವನ್ನು ಕಾಣುತ್ತಾನೆ.

ಯಥೈವ ದಿಗ್ವಿಪರ್ಯಾಸಃ ಮೋಹಾದ್ಭವತಿ ಕಸ್ಯಚಿತ್
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ || ೮೫ ||

ಯಥಾ=ಹೇಗೆ **ದಿಗ್ವಿಪರ್ಯಾಸಃ**=ದಿಕ್ಕಿನ ತಪ್ಪುತಿಳಿವಳಿಕೆಯು, **ಕಸ್ಯ**

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿತ್=ಯಾವನಿಗಾದರೂ, **ಮೋಹಾತ್ ಏವ**=ಮೋಹದಿಂದಲೇ, **ಭವತಿ**=ಉಂಟಾಗುತ್ತದೆಯೋ, **ತದ್ವತ್**=ಹಾಗೆಯೇ, **ಅಜ್ಞಾನಯೋಗತಃ**=ಅಜ್ಞಾನದ ಸಂಬಂಧದಿಂದಲೇ, **ಆತ್ಮನಿ**=ಆತ್ಮನಲ್ಲಿ, **ದೇಹತ್ವಂ**=ದೇಹತ್ವವನ್ನು, **ಪಶ್ಯತಿ**=ಕಾಣುತ್ತಾನೆ.

ಹೇಗೆ ಯಾವನಿಗಾದರೂ ದಿಕ್ಕಿನ ತಪ್ಪು ತಿಳಿವಳಿಕೆಯು ಮೋಹದಿಂದಲೇ ಉಂಟಾಗುತ್ತದೆಯೋ ಹಾಗೆಯೇ ಅಜ್ಞಾನದ ಸಂಬಂಧದಿಂದಲೇ ಆತ್ಮನಲ್ಲಿ ದೇಹತ್ವವನ್ನು ಕಾಣುತ್ತಾನೆ.

ಯಥಾ ಶಶೀ ಜಲೇ ಭಾತಿ ಚಂಚಲತ್ವೇನ ಕಸ್ಯಚಿತ್
ತದ್ವದಾತ್ಮನಿ ದೇಹತ್ವಂ ಪಶ್ಯತ್ಯಜ್ಞಾನಯೋಗತಃ ॥ ೮೬ ॥

ಯಥಾ=ಹೇಗೆ, **ಶಶೀ**=ಚಂದ್ರನು, **ಜಲೇ**=ನೀರಿನಲ್ಲಿ, **ಚಂಚಲತ್ವೇನ**=ಅಲುಗಾಡುತ್ತಿರುವಂತೆ, **ಕಸ್ಯಚಿತ್**=ಯಾವನಿಗಾದರೂ, **ಭಾತಿ**=ಕಾಣುವನೋ, **ತದ್ವತ್**=ಹಾಗೆಯೇ, **ಅಜ್ಞಾನಯೋಗತಃ**=ಅಜ್ಞಾನದ ಸಂಬಂಧದಿಂದ, **ಆತ್ಮನಿ**=ಆತ್ಮನಲ್ಲಿ, **ದೇಹತ್ವಂ**=ದೇಹತ್ವವನ್ನು, **ಪಶ್ಯತಿ**=ಕಾಣುತ್ತಾನೆ.

ಶ್ಲೋಕ ೭೫ರಿಂದ ೮೬ರವರೆಗಿನ ೧೨ ಶ್ಲೋಕಗಳ ವಿವರಣೆ ಹೀಗಿದೆ :

ಕಣ್ಣಿಗೆ ಕಾಣುವ ಅನೇಕಾನೇಕ ವಸ್ತುಗಳು ಆ ರೀತಿಯಾಗಿ ನಿಜವಾಗಿ ಇಲ್ಲದೇ ಇರುವುದು ವಿವೇಕ ವಿಚಾರದಿಂದ ತಿಳಿದುಬರುತ್ತದೆ. ನೀರಿನಲ್ಲಿನ ಪ್ರತಿಬಿಂಬದಿಂದ ಮರವು ತಲೆಕೆಳಕಾಗಿರುವಂತೆ ಕಂಡರೂ, ವಿವೇಕದ ಬುದ್ಧಿಗೆ ಮರವು ಹಾಗಿಲ್ಲವೆಂಬುದು ತಿಳಿಯುತ್ತದೆ. ದೇಹವು ಚೈತನ್ಯಾಭಾಸದಿಂದ ಚೈತನ್ಯವುಳ್ಳಂತೆ ತೋರುತ್ತಿರುವುದರಿಂದ ಅದು ಆತ್ಮನೇ ಎಂಬ ಭ್ರಾಂತಿಯುಂಟಾಗುವುದು ಸಹಜ. ಅಜ್ಞಾನದಿಂದ ಆತ್ಮನಲ್ಲಿಲ್ಲದ ದೇಹೇಂದ್ರಿಯಾದಿ ಉಪಾಧಿಗಳು ಕಲ್ಪಿತವಾಗಿ ಅವುಗಳ ಸಂಬಂಧದಿಂದ ಆತ್ಮನಲ್ಲಿ ಆಯಾ ಉಪಾಧಿಯ ಕರ್ಮವು ನಿಜವಾಗಿ ಇದೆ ಎಂದುಕೊಂಡಿರುವುದೇ ಸಂಸಾರಕ್ಕೆ ಕಾರಣ. ಹೀಗೆ ಆತ್ಮನಲ್ಲಿಲ್ಲದ ಸಂಸಾರತ್ವವು ಅಜ್ಞಾನದಿಂದ ಇದೆ ಎಂದು ತಿಳಿಯಲ್ಪಟ್ಟಿದೆ.

ಏವಮಾತ್ಮನ್ಯವಿದ್ಯಾತೋ ದೇಹಾಧ್ಯಾಸೋ ಹಿ ಜಾಯತೇ ।
ಸ ಏವಾತ್ಮ ಪರಿಜ್ಞಾನಾಲ್ಲೀಯತೇ ಚ ಪರಾತ್ಮನಿ ॥ ೮೭ ॥

ಏವಂ=ಹೀಗೆ, **ಆತ್ಮನಿ**=ಆತ್ಮನಲ್ಲಿ, **ಅವಿದ್ಯಾತಃ**=ಇಲ್ಲದೇ ಇರುವ, **ದೇಹಾಧ್ಯಾಸಃ**=ದೇಹಾಧ್ಯಾಸವು, **ಜಾಯತೇಹಿ**=ಉಂಟಾಗಿದೆಯಷ್ಟೆ, **ಚ**=ಆದ್ದರಿಂದ **ಸ ಆತ್ಮ ಏವ**=ಆ ಆತ್ಮನೇ **ಪರಿಜ್ಞಾನಾತ್**=ಅನುಭವಪೂರ್ವಕ ತಿಳಿಯುವುದರಿಂದ, **ಪರಾತ್ಮನಿ**=ಪರಮಾತ್ಮನಲ್ಲಿ **ಲೀಯತೇ**=ಅಡಗುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಆತ್ಮನಲ್ಲಿ ಇಲ್ಲದೇ ಇರುವ ದೇಹಾಧ್ಯಾಸವು ಉಂಟಾಗಿದೆಯಷ್ಟೆ. ಆದ್ದರಿಂದ ಅನುಭವಪೂರ್ವಕ ತಿಳಿಯುವುದರಿಂದ ಆ ಆತ್ಮನೇ ಪರಮಾತ್ಮನಲ್ಲಿ ಅಡಗುತ್ತಾನೆ.

ನಾನು ಯಾರು ಎಂಬ ಎಚ್ಚರವಿಲ್ಲದ ಕಾರಣ ದೇಹವನ್ನೇ ಆತ್ಮ ಎಂದು ತಿಳಿದಿದ್ದೇವೆ. ಹೀಗೆ ಭ್ರಾಂತಿಯಿಂದ ಇಲ್ಲದೇ ಇರುವುದನ್ನು ನೋಡಲು ಸಾಧ್ಯವಿದೆ ಎಂದು ಮೇಲಿನ ೧೨ ಶ್ಲೋಕಗಳಲ್ಲಿ ದೃಷ್ಟಾಂತಗಳ ಮೂಲಕ ತಿಳಿಸಿದ್ದಾಯಿತು. ವಿವೇಕ ವಿಚಾರದಲ್ಲಿ ಮಾತ್ರ ಭ್ರಾಂತಿಯು ಇಲ್ಲವಾದಾಗ ಭ್ರಾಂತಿಯಿಂದ ತೋರುತ್ತಿದ್ದ ವಸ್ತುವು ಎಲ್ಲಿಯೂ ಇರಲಿಲ್ಲವೆಂದೇ ಗೊತ್ತಾಗುತ್ತದೆ. ಸ್ವಪ್ನ, ಸುಷುಪ್ತಿಗಳಲ್ಲಿ ಇಲ್ಲದೆ, ಕೇವಲ ಜಾಗ್ರತದಲ್ಲಿ ಮಾತ್ರ ತೋರುತ್ತಿರುವ ಈ ದೇಹವು ನಿಜವಾಗಿ ಇಲ್ಲವೇ ಇಲ್ಲ. ದೇಹವಿದೆ ಎನ್ನುವುದಕ್ಕೆ ಯಾವ ಪ್ರಮಾಣವೂ ಇಲ್ಲ. ಇಂತಹ ದೇಹವನ್ನು ತಪ್ಪು ತಿಳಿವಳಿಕೆಯಿಂದ ಆತ್ಮ ಎಂದುಕೊಂಡಿದ್ದೇವೆ. ಆತ್ಮ ಯಾರು ಎಂಬ ಸರಿಯಾದ ಜ್ಞಾನದಲ್ಲಿ ಅದೇ ಆತ್ಮನು ಪರಮಾತ್ಮನಲ್ಲಿ ಜ್ಞಾನಸ್ವರೂಪನಾಗಿ ಲೀನವಾಗುತ್ತಾನೆ. ಇದು ಸಕ್ಕರೆಯು ಹಾಲಿನಲ್ಲಿ ಲೀನವಾದಂತೆ ಅಲ್ಲ. ಹಗ್ಗದ ಎಚ್ಚರದಲ್ಲಿ ಹಾವು ಹಗ್ಗದಲ್ಲಿ ಲಯವಾದಂತೆ.

ಸರ್ವಮಾತ್ಮತಯಾ ಜ್ಞಾತಂ ಜಗತ್ಸ್ಥಾವರ ಜಂಗಮಮ್ ।
ಅಭಾವಾತ್ ಸರ್ವಭಾವಾನಾಂ ದೇಹಸ್ಯ ತ್ವಾತ್ಮತಾ ಕುತಃ
॥ ೮೮ ॥

(ಏವಂ=ಹೀಗೆ**) ಸರ್ವಂ**=ಎಲ್ಲಾ, **ಸ್ಥಾವರ ಜಂಗಮಮ್**=ಚರಾಚರಾತ್ಮರೂಪದಲ್ಲಿರುವ, **ಜಗತ್**=ಜಗತ್ತೆಲ್ಲವೂ. **ಆತ್ಮತಯಾ**=ಆತ್ಮನೆಂದೇ, **ಜ್ಞಾತಂ**=ತಿಳಿಯಲ್ಪಟ್ಟಿತು, **ಸರ್ವಭಾವಾನಾಂ**=ಎಲ್ಲಾ ಪದಾರ್ಥಗಳ, **ಅಭಾವಾತ್**=ಇರುವಿಕೆಯು ಇಲ್ಲವಾದ್ದರಿಂದ, **ದೇಹಸ್ಯತು ಆತ್ಮತಾ**=ದೇಹವು ಮಾತ್ರ ನಾನು ಎಂಬ ಬುದ್ಧಿಯು, **ಕುತಃ**=ಹೇಗೆ ತಾನೆ ಉಂಟಾದೀತು ?

ಹೀಗೆ ಈ ಎಲ್ಲಾ ಚರಾಚರಾತ್ಮ ರೂಪದಲ್ಲಿರುವ ಜಗತ್ತೆಲ್ಲವೂ ಆತ್ಮನೆಂದೇ ತಿಳಿಯಲ್ಪಟ್ಟಿತು. ಎಲ್ಲಾ ಪದಾರ್ಥಗಳ ಇರುವಿಕೆಯೂ ಇಲ್ಲವಾದ್ದರಿಂದ ದೇಹವು ಮಾತ್ರ ನನ್ನದೆಂಬ ಬುದ್ಧಿಯು ಹೇಗೆ ತಾನೇ ಉಂಟಾದೀತು ?

ಜ್ಞಾನಿಗೆ ಚೆನ್ನಾಗಿ ಗೊತ್ತು "ಇರುವುದೆಲ್ಲಾ ತಾನು, ತಾನು ಮಾತ್ರ ; ತನ್ನನ್ನು ಬಿಟ್ಟುಕೊಟ್ಟು ಏನೂ ಇಲ್ಲ" ಎಂದು. ಆದರೆ ಚರಾಚರಾತ್ಮಕವಾದ ಪದಾರ್ಥಗಳಿಂದ ಕೂಡಿದ ಈ ಜಗತ್ತೆಲ್ಲವೂ ತೋರುತ್ತಿದೆಯಲ್ಲಾ ಎಂದು ನೀನು ಅಂದದ್ದೇ ಆದರೆ, ಇದು ಸರಿಯಲ್ಲವೆಂದು ವಿವೇಕದಲ್ಲಿ ಗೊತ್ತಾಗುತ್ತದೆ. ಈ ಜಗತ್ತು ಜಾಗ್ರದಾವಸ್ಥೆಯಲ್ಲಿ ಮಾತ್ರ ತೋರಿ ಹಾರುವುದರಿಂದ ಸತ್ಯವಾದದ್ದಲ್ಲ. ಇದು ಆತ್ಮನಲ್ಲಿ ಭ್ರಾಂತಿಯಿಂದ ಕಲ್ಪಿತವಾದದ್ದು. ಹಗ್ಗದಲ್ಲಿ ಕಲ್ಪಿತವಾದ ಹಾವು ಹಗ್ಗವನ್ನು ಬಿಟ್ಟುಕೊಟ್ಟು ತೋರಲೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಆರದ್ದರಿಂದ ಸ್ವರೂಪದಿಂದ ಹಗ್ಗವೇ ಆಗಿರುತ್ತದೆ. ಹಾಗೆಯೇ ಈ ಜಗತ್ತೂ ಸಹ ಸ್ವರೂಪದಿಂದ ಆತ್ಮನೇ ಆಗಿದೆ ಎಂದು ಜ್ಞಾನಿಯು ತಿಳಿದಿರುತ್ತಾನೆ. ನಾಮ ರೂಪಾತ್ಮಕವಾಗಿ ತೋರುತ್ತಿರುವ 'ಸರ್ವಭಾವಾನಾಂ' ಎಂದರೆ ಈ ಎಲ್ಲಾ ಪದಾರ್ಥಗಳ 'ಅಭಾವಾತ್' ಮೂರು ಕಾಲಗಳಲ್ಲಿಯೂ ಇರುವಿಕೆಯು ಇಲ್ಲವೆಂದು ವಿಚಾರದಿಂದ ನಿಶ್ಚಯವಾದ ಮೇಲೆ, ಆ ತೋರಿಕೆ ಪದಾರ್ಥಗಳಲ್ಲಿ ಒಂದಾದ ಈ ದೇಹದಲ್ಲಿ ಆತ್ಮಜ್ಞಾನಿಯು ತಿಳಿದೂ ತಿಳಿದೂ ತನ್ನದೆಂಬ ಅಭಿಮಾನವನ್ನು ಹೇಗೆ ತಾನೇ ಮಾಡಿಯಾನು? ಮತಿ ಭ್ರಾಂತಿಯುಳ್ಳವನು ಇಲ್ಲದೇ ಇರುವ ಆಫೀಸಿಗೆ ತಾನು ದೊಡ್ಡ ಅಧಿಕಾರಿಯೆಂದು ಹೇಳಿಕೊಂಡು ಜಂಭ ಕೊಚ್ಚುವಂತೆ ಮೂಢರು ಮಾತ್ರ ಈ ಮಿಥ್ಯಾಕಲ್ಪಿತವಾದ ಶರೀರದಲ್ಲಿ "ನಾನು ನನ್ನದು" ಎಂಬ ಅಭಿಮಾನವನ್ನು ಪಡೆದಾರು.

೧೮. ಪ್ರಾರಬ್ಧ ಕರ್ಮ

ಆತ್ಮಾನಂ ಸತತಂ ಜಾನನ್ ಕಾಲಂ ನಯ ಮಹಾದ್ಯುತೇ ।
ಪ್ರಾರಬ್ಧಮಖಿಲಂ ಭುಂಜನ್ನೋದ್ವೇಗಂ ಕರ್ತುಮರ್ಹಸಿ ॥ ೮೯ ॥

ಮಹಾದ್ಯುತೇ=ಎಲೈ ಮಹಾ ತೇಜಸ್ವಿಯೇ, **ಸತತಂ**=ಯಾವಾಗಲೂ ಇರುವ. **ಆತ್ಮಾನಂ**=ಆತ್ಮ ಸ್ವರೂಪವನ್ನು. **ಜಾನನ್**=(ನಾನೇ ಅದೆಂದು) ತಿಳಿದು, **ಕಾಲಂ**=ಆಯುಸ್ಸನ್ನು, **ನಯ**=ಕಳೆಯುತ್ತಿರು. (ಆಗ) **ಅಖಿಲಂ ಪ್ರಾರಬ್ಧಂ**=ಎಲ್ಲಾ ಪ್ರಾರಬ್ಧವನ್ನೂ, **ಭುಂಜನ್ (ಅಪಿ)**=ಭೋಗಿಸುತ್ತಿದ್ದರೂ ಕೂಡ, **ಉದ್ವೇಗಂ**=ಉದ್ವೇಗವನ್ನು, **ಕರ್ತುಂ ನ ಅರ್ಹಸಿ**=ಉಂಟು ಮಾಡಿಕೊಳ್ಳಲಾರೆ.

ಎಲೈ ಮಹಾ ತೇಜಸ್ವಿಯೇ! ಸ್ವಸ್ವರೂಪನಾದ ಆತ್ಮನೇ ನಾನೆಂದು ತಿಳಿದು ಆಯುಸ್ಸನ್ನು ಕಳೆಯುತ್ತಿರು. ಆಗ ಪ್ರಾರಬ್ಧವನ್ನೆಲ್ಲಾ ಅನುಭವಿಸುತ್ತಿದ್ದರೂ ಕೂಡ ನಿನ್ನ ಮನಸ್ಸಿಗೆ ಯಾವ ತಳಮಳವೂ ಉಂಟಾಗುವುದಿಲ್ಲ.

ಇರುವುದೆಲ್ಲಾ ನಾನು ಸಚ್ಚಿದಾನಂದ ಸ್ವರೂಪ, ಆತ್ಮ ಮಾತ್ರ. ನನ್ನನ್ನು ಬಿಟ್ಟು ಕೊಟ್ಟು ಏನೂ ಇಲ್ಲ. 'ಇದೆ' ಎಂದು ತೋರುತ್ತಿರುವ ಈ ನಾಮ ರೂಪಾತ್ಮಕವಾದ ಜಗತ್ತಿನ ವಸ್ತುಗಳಿಗೆ ಇರುವಿಕೆ ಇಲ್ಲವೆಂದು ಚೆನ್ನಾಗಿ ತಿಳಿದು, ಈ ಅರಿವಿನಿಂದ ಜಾರದೆ, ನಿನ್ನ ವ್ಯವಹಾರವನ್ನು ನಡೆಸುತ್ತಿರು. ಆಗ ಪ್ರಾರಬ್ಧಕ್ಕೆ ಅನುಗುಣವಾಗಿ ಇಷ್ಟವಾದದ್ದನ್ನೇ ಅನುಭವಿಸಲೀ, ಅನಿಷ್ಟವಾದದ್ದನ್ನೇ ಅನುಭವಿಸಲೀ, ನಿನಗೆ ಹಿಗ್ಗಾಗಲೀ ಕುಗ್ಗಾಗಲೀ ಉಂಟಾಗುವುದಿಲ್ಲ. ಏಕೆಂದರೆ ನಿನ್ನ ದೃಷ್ಟಿಯಲ್ಲಿ ನಾಮ ರೂಪಾತ್ಮಕ ಜಗತ್ತೇ ಇರುವಿಕೆಯನ್ನು ಪಡೆದಿಲ್ಲ.

ಉತ್ಪನ್ನೇಽಪ್ಯಾತ್ಮವಿಜ್ಞಾನೇ ಪ್ರಾರಬ್ಧಂ ನೈವ ಮುಂಚತಿ ।
ಇತಿ ಯಚ್ಛ್ರೂಯತೇ ಶಾಸ್ತ್ರೇ ತನ್ನಿರಾಕ್ರಿಯತೇಽಧುನಾ ॥ ೯೦ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮ ವಿಜ್ಞಾನೇ=ಆತ್ಮಜ್ಞಾನವು, **ಉತ್ಪನ್ನೇ ಅಪಿ**=ಉಂಟಾಗಿದ್ದರೂ ಕೂಡ, **ಪ್ರಾರಬ್ಧಂ**=ಪ್ರಾರಬ್ಧವು, **ನೈವ ಮುಂಚತಿ**=ಬಿಡುವುದೇ ಇಲ್ಲ, **ಇತಿ**= ಎಂದು, **ಶಾಸ್ತ್ರೇ**=ಶಾಸ್ತ್ರದಲ್ಲಿ, **ಯತ್**=ಯಾವುದು, **ಶ್ರೂಯತೇ**=ಹೇಳಲ್ಪಟ್ಟಿದೆಯೋ, **ತತ್**=ಅದನ್ನು, **ಅಧುನಾ**=ಈಗ, **ನಿರಾಕ್ರಿಯತೇ**=ನಿರಾಕರಿಸಲ್ಪಡುತ್ತದೆ.

"ಆತ್ಮಜ್ಞಾನವು ಉಂಟಾಗಿದ್ದರೂ ಕೂಡ, ಪ್ರಾರಬ್ಧವು ಬಿಡುವುದೇ ಇಲ್ಲ" ಎಂದು ಶಾಸ್ತ್ರದಲ್ಲಿ ಯಾವುದು ಹೇಳಲ್ಪಟ್ಟಿದೆಯೋ ಅದು ಈಗ ನಿರಾಕರಿಸಲ್ಪಡುತ್ತದೆ.

ಶ್ರುತಿಯಲ್ಲಿ ಜನಕ, ಯಾಜ್ಞವಲ್ಕ್ಯ, ಮುಂತಾದ ಜ್ಞಾನಿಗಳು ಜ್ಞಾನವಾದ ಮೇಲೂ ವ್ಯವಹಾರ ಮಾಡುತ್ತಿದ್ದು, ಆಮೇಲೆ ದೇಹವನ್ನು ಬಿಟ್ಟಂತೆ ಹೇಳಿರುತ್ತದೆ. "ತಸ್ಯ ತಾವದೇವ ಚಿರಂ ಯಾವನ್ನವಿಮೋಕ್ಷ್ಯೇ. ಅಥ ಸಂಪತ್ಸ್ಯೇ"—ಅವನಿಗೆ ಎಲ್ಲಿಯವರೆಗೆ ಶರೀರದ ಬಿಡುಗಡೆ ಇಲ್ಲವೋ, ಅಲ್ಲಿಯವರೆಗೇ ತಡವು. ಆಮೇಲೆ ಕೂಡಲೇ ಮುಕ್ತನಾಗುವನು ಎಂಬ ಛಾಂದೋಗ್ಯ ಶ್ರುತಿಯ ಹೇಳಿಕೆಯೂ ಜ್ಞಾನಿಗೆ ಪ್ರಾರಬ್ಧವನ್ನು ಹೇಳಿರುವ ಹಾಗೆ ತೋರುತ್ತದೆ. ಹೀಗೆಂದ ಮಾತ್ರಕ್ಕೆ ಜ್ಞಾನಿಗೆ ಪ್ರಾರಬ್ಧವಿದೆ ಎಂಬುದು ಶ್ರುತಿಯ ತಾತ್ಪರ್ಯವಲ್ಲ. ಶ್ರುತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದ ಜನರ ಈ ತಪ್ಪು ಭಾವನೆಯನ್ನು ಸಾರ್ವತ್ರಿಕ ಅನುಭವವಾದ ಜಾಗ್ರತ್ ಸ್ವಪ್ನ ಸುಷುಪ್ತಿಗಳ ವಿಚಾರದಿಂದ ಹೋಗಲಾಡಿಸುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri